# ಧ್ಯೇಯ ಕಮಲ

ಮಾಸ ಪತ್ರಿಕೆ

ಉತ್ತಿಷ್ಠ ಭಾರತ

ನವೆಂಬರ್, 2010

ಸಂಪುಟ - 4 ಸಂಚಿಕೆ - 2

ಪ್ರಕಾಶಕರು

ಎಸ್. ಸುರೇಶ್ ಕುಮಾರ್

ಸಂಪಾದಕರು

ಎಂ.ಬಿ. ಭಾನುಪ್ರಕಾಶ್

ಸಂಪಾದಕ ಮಂಡಳಿ

ಡಾ॥ ಮಮ್ತಾಜ್ ಅಲಿಖಾನ್

ಗಣೇಶ ಯಾಜಿ

ಮುದ್ರಣ :

ರಾಷ್ಟ್ರೋತ್ಥಾನ ಮುದ್ರಣಾಲಯ,
ಕೇಶವ ಶಿಲ್ಪ, ಕೆಂಪೇಗೌಡ ನಗರ,
ಬೆಂಗಳೂರು - 560 019.

ವಾರ್ಷಿಕ ಚಂದಾ : 100 ರೂ.
ಬಿಡಿ ಪ್ರತಿ : 10 ರೂ.



ವಿವರಗಳಿಗೆ ಸಂಪರ್ಕಿಸಿ :
**ಧ್ಯೇಯಕಮಲ ಕನ್ನಡ ಮಾಸಪತ್ರಿಕೆ,**
**ಬಿಜೆಪಿ ರಾಜ್ಯ ಕಾರ್ಯಾಲಯ,**
ನಂ. 11, 12ನೇ ಮುಖ್ಯರಸ್ತೆ,
16ನೇ ಅಡ್ಡರಸ್ತೆ, ಮಲ್ಲೇಶ್ವರಂ ಪಶ್ಚಿಮ
ಬೆಂಗಳೂರು - 560 055.
ದೂ. : 080-22041976
ಫ್ಯಾಕ್ಸ್ : 080-23460398

Email: bjponline@gmail.com
ganeshyaji@yahoo.co.in


# ಸಂಪಾದಕೀಯ....

ರಾಜ್ಯ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಒಂದಿಲ್ಲೊಂದು ಅಗ್ನಿಪರೀಕ್ಷೆಗಳನ್ನು ಎದುರಿಸುತ್ತಲೇ ಬಂದಿದೆ. ಹಾವೇರಿ ಗೋಲಿಬಾರ್, ನೆರೆಪ್ರವಾಹ–ನಿರಾಶ್ರಿತರು, ವಿಧಾನಸಭೆಯಲ್ಲಿ ವಿರೋಧಪಕ್ಷಗಳ ತೀವ್ರ ಅಸಹಕಾರ, ರಾಜ್ಯಪಾಲರ ಧೋರಣೆ, ಜೊತೆಗೆ ಇತ್ತೀಚೆಗೆ ಬಿಜೆಪಿಯ ಕೆಲ ಶಾಸಕರಿಗೆ ಆಮೀಷವೊಡ್ಡಿ ಭಿನ್ನಮತವನ್ನು ಹುಟ್ಟುಹಾಕಿದ ಪ್ರಸಂಗ.

ಇನ್ನೇನು ಸರ್ಕಾರ ಉರುಳಿಯೇ ಹೋಯಿತು ಎಂಬಂತಹ ಪರಿಸ್ಥಿತಿ. ಲಕ್ಷಾಂತರ ಕಾರ್ಯಕರ್ತರ ಶ್ರಮ, ಬಲಿದಾನ, ತ್ಯಾಗಗಳಿಂದ ರಚನೆಯಾದ ಸರ್ಕಾರ, ದಕ್ಷಿಣಭಾರತದ ಮೊಟ್ಟಮೊದಲ ಬಿಜೆಪಿ ಸರ್ಕಾರ, ಜನಪರ ಆಡಳಿತ ನೀಡುತ್ತಿರುವ ಸರ್ಕಾರ, ಅಭಿವೃದ್ಧಿಯಲ್ಲಿ ದೇಶಕ್ಕೆ ಎರಡನೇ ಸ್ಥಾನಗಳಿಸಿರುವ ಸರ್ಕಾರ, ಇತ್ತೀಚೆಗೆ ನಡೆದ ಚುನಾವಣೆಗಳಲ್ಲೆಲ್ಲಾ ವಿರೋಧಿಗಳಿಗೆ ಮಣ್ಣು ಮುಕ್ಕಿಸಿರುವ ಹೆಗ್ಗಳಿಕೆಯ ಸರ್ಕಾರ. ಇಷ್ಟೆಲ್ಲಾ ಇದ್ದೂ ವಿರೋಧ ಪಕ್ಷಗಳು ಒಡ್ಡಿದ ಆಮಿಷಕ್ಕೆ ಕೆಲ ಶಾಸಕರು ಬಲಿಯಾಗಿದ್ದು, ತಮ್ಮ ಗೆಲುವಿಗಾಗಿ ಶ್ರಮಿಸಿದ ಸಾವಿರಾರು ಕಾರ್ಯಕರ್ತರನ್ನು ಮರೆತು ಚೆನ್ನೈ, ಗೋವಾ ಹೀಗೆಲ್ಲಾ ಓಡಾಡಿದ್ದು, ನಂತರ ಅನರ್ಹಗೊಂಡು ಅತಂತ್ರರಾಗಿರುವುದು ಈಗ ಇತಿಹಾಸ.

ಇತ್ತೀಚೆಗೆ ನಡೆದ ರಾಜ್ಯ ಬಿಜೆಪಿ ಕಾರ್ಯಕಾರಿಣಿಯಲ್ಲಿ ಒಂದು ಅಂಶ ಬಹುಮುಖ್ಯವಾಗಿ ಚರ್ಚೆಗೆ ಬಂದಿತ್ತು. ಸಂಘಟನೆಯಲ್ಲಿ "ಮಾನವೀಯ ಸಂಬಂಧ"ಗಳಿಗೆ ಇರುವ ಪ್ರಾಮುಖ್ಯತೆ. ಅಂಥ ಸಂಬಂಧಗಳು ಇಲ್ಲದಾಗ ತಲೆದೋರಬಹುದಾದ ಸಮಸ್ಯೆಗಳು. ಹಾಗೆ ನೋಡಿದರೆ ಪರಸ್ಪರ ಆತ್ಮೀಯತೆಯನ್ನು ಹೊಂದುವುದು ಎಲ್ಲಾ ಕ್ಷೇತ್ರಗಳಲ್ಲೂ ಅನಿವಾರ್ಯ. ಒಂದು ಕುಟುಂಬದಲ್ಲೂ ಸಂತಸ ತುಂಬಿರಲು, ಎದುರಾಗುವ ಆತಂಕಗಳನ್ನು ದಾಟಲು, ಆತ್ಮೀಯ ಸಂಬಂಧ ಅನಿವಾರ್ಯ. ಸಂಘಟನೆಯೂ ಒಂದು ಕುಟುಂಬವೇ. ಇಲ್ಲೂ ಹಿರಿಯರು, ಅನುಭವಿಗಳು, ಕಿರಿಯರು, ಸ್ವಲ್ಪ ಎಳಸುಗಳು ಎಲ್ಲರೂ ಸೇರಿರುತ್ತಾರೆ. ಇಲ್ಲಿಯೂ ಸಮಸ್ಯೆಗಳು ತಲೆದೋರುವುದು ಸಹಜ. ಸಂಘಟನೆಯ ಗಾತ್ರ, ವ್ಯಾಪ್ತಿ ವಿಸ್ತಾರಗೊಂಡಂತೆಲ್ಲಾ ಹೊಸ ಹೊಸ ಬೇಡಿಕೆಗಳು, ಮುನಿಸುಗಳು ತಲೆದೋರುವುದು ಸಾಮಾನ್ಯ. ಆದರೆ ಈ ಎಲ್ಲ ಅಡೆ ತಡೆಗಳು ಸಂಘಟನೆಯನ್ನೇ ನುಂಗಿಹಾಕುವ ಮಟ್ಟಕ್ಕೆ ತಲುಪದಂತೆ ನೋಡಿಕೊಳ್ಳಲು ಪರಸ್ಪರ ಉತ್ತಮ ಸಂಬಂಧ, ವಿಚಾರ ವಿನಿಮಯ, ನಿರಂತರ ಪ್ರಶಿಕ್ಷಣ, ನ್ಯಾಯಯುತ ಬೇಡಿಕೆಗಳಿಗೆ ಪುರಸ್ಕಾರ ಇವೆಲ್ಲಾ ಸಹಕಾರಿಯಾಗಬಲ್ಲವು.

ಇಂಥ ಪರಸ್ಪರ ಪೂರಕ ಅಂಶಗಳು ಸಂಘಟನೆಯ ಎಲ್ಲಾ ಸ್ತರಗಳಲ್ಲಿ, ಎಲ್ಲಾ ನೆಲೆಗಳಲ್ಲಿ ರೂಪುಗೊಳ್ಳುವುದು ಆರೋಗ್ಯಕರ ಬೆಳವಣಿಗೆಗೆ ತೀರಾ ಅವಶ್ಯ. ಕತ್ತಿ, ಗುರಾಣಿಗಳು ಸಾಧಿಸಲಾಗದ್ದನ್ನು ಮುಗುಳ್ನಗೆಯ, ನಲ್ಮೆಯ ಸಂಕೇತಗಳು ಸಾಧಿಸಲು ಸಾಧ್ಯವೆಂಬುದು "ಸಂಘಟನೆ"ಗೂ ಅನ್ವಯವಾಗುವ ಅಂಶ.

ಕೆಲದಿನಗಳಲ್ಲಿ ರಾಜ್ಯದಲ್ಲಿ ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಚುನಾವಣೆಗಳು ಬರಲಿವೆ. ತಳಮಟ್ಟದ ಸಂಘಟನೆಯ ಸತ್ವ–ಪರೀಕ್ಷೆಯ ಕಾಲವಿದು. ಪಂಚಾಯತ್ ಸ್ತರದ ಸಮಿತಿಗಳು, ಶಕ್ತಿಕೇಂದ್ರ ಸಮಿತಿಗಳು, ಮಂಡಲ, ಜಿಲ್ಲಾ ಮಟ್ಟದ ಸಮಿತಿಗಳು ತಮ್ಮ ನೆಲೆಗಳು ಅದೆಷ್ಟು ಗಟ್ಟಿಯಾಗಿವೆ ಎಂದು ತೋರಿಸಿಕೊಡುವ ಸಂದರ್ಭವಿದು. ಹಾಗೆಯೇ ವಿವಿಧ ಸ್ತರಗಳಲ್ಲಿ ಸಂಘಟನೆಯನ್ನು ಇನ್ನಷ್ಟು ವಿಸ್ತರಿಸಿ ಬಲಗೊಳಿಸುವ ಅವಕಾಶವೂ ಹೌದು. ಪಕ್ಷಕ್ಕೆ ಬದ್ಧತೆಹೊಂದಿರುವ, ಅನುಶಾಸಿತ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಚುನಾವಣೆಯಲ್ಲಿ ಗೆದ್ದು ಬಂದರೆ ಅದು ನಮ್ಮ ಸಂಘಟನೆಯ ಕಿರೀಟಕ್ಕೆ ಇನ್ನೊಂದು ಗರಿ ಮೂಡಿಸಿದಂತಾಗುತ್ತದೆ.

ಪ್ರಜಾಪ್ರಭುತ್ವವನ್ನು ಅಣಕವಾಡುವ ರೀತಿಯಲ್ಲಿ ವ್ಯವಹರಿಸುತ್ತಿರುವ ವಿರೋಧ ಪಕ್ಷಗಳ ಹುಟ್ಟಡಗಿಸಲು ಈ ಚುನಾವಣೆಗಳು ನಮಗೊಂದು ಅವಕಾಶ. ನಮ್ಮೆಲ್ಲ ಶಕ್ತಿಯನ್ನು ಧಾರೆಎರೆದು ಈ ಸತ್ವ ಪರೀಕ್ಷೆಯಲ್ಲಿ ಗೆದ್ದು ಸಂಘಟನೆಯನ್ನು ಅಜೇಯಗೊಳಿಸುವುದು ನಮ್ಮ ಕರ್ತವ್ಯವೂ ಹೌದು.

ಇಂತಿ ನಿಮ್ಮವ,

ಭಾನುಪ್ರಕಾಶ್

(ಎಂ.ಬಿ.ಭಾನುಪ್ರಕಾಶ್)

## ಒಳಪುಟಗಳಲ್ಲಿ.........

ಪ್ರತಿಭಟನೆ................................4
ಪಾಠವಾದರೂ ಏನು?.................5
ಪಟ್ಟಣದೆಡೆಗೆ ನರಿಗಳು.................7
ಗೆದ್ದ ಬಿಜೆಪಿ................................9
ಬಿಜೆಪಿ ಕಾರ್ಯಕಾರಿಣಿ...............13
ವಾಲ್ಮೀಕಿ ಜಯಂತಿ.................20

**Declaration in Form No. IV**

| | |
|---|---|
| Name of the Magazine | : Dhyeya Kamala |
| Periodicity | : Monthly |
| Language | : Kannada |
| Name of the Publisher, Printer & Owner | : Sri S. Suresh Kumar<br>Sri Bhavoo Rao Deshpande - Smaraka Bhavana,<br>No. 1/1, 8th Main,<br>6th Cross, Malleshwaram,<br>Bangalore 560003. |
| Printing Press | : Rastrothana Mudranalaya,<br>Keshavashilpa,<br>Kempegowdanagar,<br>Bangalore 560019. |
| Name of the Editor | : Sri M.B. Bhanuprakash |

## ನವೆಂಬರ್ 10 ರಂದು ರಾಷ್ಟ್ರದಾದ್ಯಂತ ಪ್ರತಿಭಟನೆ

ಇದು ಕಾಂಗ್ರೆಸ್ಸಿನ ಹಳೆ ಚಾಳಿ. ತನಗೆ ಆತಂಕ ಒದಗಿದಾಗಲೆಲ್ಲಾ ಯಾರಾದರೂ ವಿರೋಧಿಗಳ ಮೇಲೆ ಹರಿಹಾಯುವುದು.

ದೆಹಲಿಯಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟವೇನೋ ಮುಗಿದಿದೆ. ಆದರೆ ಈ ಕೂಟದ ಅವ್ಯವಹಾರ ಕೋಟಿಗಟ್ಟಲೆ ಹಣದ್ದು. ಅದು ಕಾಂಗ್ರೆಸ್ ಕುತ್ತಿಗೆಗೆ ಸುತ್ತಿಕೊಂಡಿದೆ. ಇದೀಗ ಮುಂಬೈನ ಆದರ್ಶ ಹೌಸಿಂಗ್ ಸೊಸೈಟಿ ಹಗರಣ. ಕಾರ್ಗಿಲ್ ಯೋಧರ ಕುಟುಂಬಗಳಿಗೆ ನೀಡಲು ನಿರ್ಮಿಸಿದ ಈ ಗೃಹ ಸಮುಚ್ಛಯದಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳಿಂದ ಹಿಡಿದು ಅನೇಕ ಹಿರಿಯ ಕಾಂಗ್ರೆಸ್‌ನಾಯಕರ ಸಂಬಂಧಿಗಳಿಗೆ ಫ್ಲಾಟ್ ಹಂಚಿರುವ ಬೃಹತ್ ಕರ್ಮಕಾಂಡ.

ಕಳೆದ ವಾರ ನಡೆದ ಕಾಂಗ್ರೆಸ್ ಕಾರ್ಯಕಾರಿಣಿಯಲ್ಲಿ ಈ ಎರಡೂ ವಿಷಯಗಳ ಬಗ್ಗೆ ಚರ್ಚೆನಡೆದು ನಿರ್ಧಿಷ್ಟ ನಿಲುವೊಂದನ್ನು ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಸೋನಿಯಾ ಗಾಂಧಿ ಪ್ರಕಟಿಸಬಹುದೆಂದು ಎಲ್ಲರೂ ಲೆಕ್ಕಾಚಾರ ಹಾಕಿದ್ದರು. ಆದರೆ ನಡೆದಿದ್ದೇ ಬೇರೆ.

ಕಾಂಗ್ರೆಸ್ ಕಾರ್ಯಕಾರಿಣಿ ಇದ್ದಕ್ಕಿದ್ದಂತೆ ಹೊಸ ವರಸೆ ತೆಗೆದು, ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನೇ ದೂರುವ, ಸಂಘವನ್ನು ಭಯೋತ್ಪಾದಕ ಸಂಘಟನೆ ಎಂಬಂತೆ ಬಿಂಬಿಸುವ ಪ್ರಯತ್ನ ನಡೆಸಿದೆ. ಸಂಘದ ಹಿರಿಯ ಪ್ರಚಾರಕರಾದ ಶ್ರೀ ಇಂದ್ರೇಶ್‌ಜಿಯವರನ್ನು ರಾಜಸ್ಥಾನದಲ್ಲಿ ನಡೆದ ಸ್ಫೋಟದ ಘಟನೆಗಳಿಗೆ ತಳಕುಹಾಕುವ ಯತ್ನ ನಡೆಸಿರುವ ಕಾಂಗ್ರೆಸ್, ವಿನಾಕಾರಣ ಸಂಘವನ್ನು ದೇಶದ ಜನಮಾನಸದಲ್ಲಿ ತಪ್ಪಿತಸ್ಥ ಸ್ಥಾನದಲ್ಲಿ ನಿಲ್ಲಿಸುವ ಸಾಹಸ ನಡೆಸಿದೆ. ಇತ್ತೀಚೆಗೆ ರಾಹುಲ್‌ಗಾಂಧಿಯವರು ಸಂಘವನ್ನು ನಿಷೇಧಿತ ಸಿಮಿ ಸಂಘಟನೆಗೆ ಹೋಲಿಸಿದ್ದರು. ಹೀಗೆ ತನ್ನ ಮನೆಯಲ್ಲಿ ಹೆಗ್ಗಣ ಸತ್ತು ಬಿದ್ದಿರುವಾಗ ದೇಶದ ಜನತೆಯ ಗಮನವನ್ನು ಬೇರೆಡೆ ಸೆಳೆಯಲು ಕಾಂಗ್ರೆಸ್ ಪಕ್ಷ ತನ್ನ ಎಂದಿನ ಹಳೆ ಚಾಳಿ ಮೆರೆದಿದೆ.

ಸಂಘ ಒಂದು ಸಾಮಾಜಿಕ ಸಂಘಟನೆ. ರಾಷ್ಟ್ರೀಯ ಚಿಂತನೆಗಳಿಗೆ ಒತ್ತು ನೀಡುವ, ದೇಶದ ಬಗ್ಗೆ ಅಪಾರ ಕಳಕಳಿ ಹೊಂದಿರುವ, ಶಿಸ್ತು, ಸಮಯಪಾಲನೆ ಮುಂತಾದ ಮೂಲಭೂತ ಗುಣಗಳನ್ನು ದೇಶದ ಎಳೆಯರಿಗೆ, ಯುವಕರಿಗೆ ರೂಢಿಸುತ್ತಿರುವ ಸಂಘಟನೆ. ದೇಶಕ್ಕಾಗಿ ಸಾವಿರಾರು ಕಾರ್ಯಕರ್ತರು ಬಲಿದಾನ ಮಾಡಿರುವ ಸಂಸ್ಥೆ ಇದು. ದೇಶವ್ಯಾಪಿಯಾಗಿ ಸಾಮಾಜಿಕ ಕಾರ್ಯಾಚರಣೆಯಲ್ಲಿ ಸಂಘದ ಲಕ್ಷಾಂತರ ಕಾರ್ಯಕರ್ತರು ತೊಡಗಿಸಿಕೊಂಡಿದ್ದಾರೆ. ಇಂಥ ಸಂಘಟನೆಯ ಬಗ್ಗೆ ಕಾಂಗ್ರೆಸ್ ಅಧ್ಯಕ್ಷೆ ಅವಹೇಳನಕಾರಿಯಾಗಿ ಮಾತನಾಡಿರುವುದರ ವಿರುದ್ಧ ನವೆಂಬರ್ 10 ರಂದು ದೇಶದ ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಪ್ರತಿಭಟನೆ ನಡೆಸಲಿದೆ.

ಹಿಂದು ಸಂಘಟನೆಗಳನ್ನು ಭಯೋತ್ಪಾದನೆಯೊಂದಿಗೆ ಜೋಡಿಸುವ ಕುತಂತ್ರದ ವಿರುದ್ಧ, ಹಿಂದು ಸಂತರಾದ ಕಂಚಿ ಶಂಕರಾಚಾರ್ಯ, ಬಾಬಾ ರಾಮದೇವ್, ಸಾಧ್ವಿ ಪ್ರಜ್ಞಾಸಿಂಗ್‌ರಿಗೆ ಕಿರುಕುಳ ನಿಡುತ್ತಿರುವುದರ ವಿರುದ್ಧ, ಆರೆಸ್ಸೆಸ್ ಮೇಲೆ ಭಯೋತ್ಪಾದನೆಯ ಗೂಬೆ ಕೂರಿಸುವುದರ ವಿರುದ್ಧ, ಸಂಘದ ಅಧಿಕಾರಿ ಶ್ರೀ ಇಂದ್ರೇಶ್‌ಜಿಯವರನ್ನು ಬಾಂಬ್ ಸ್ಫೋಟದಲ್ಲಿ ಸಿಕ್ಕಿಸುವ ಕುತಂತ್ರದ ವಿರುದ್ಧ ನಡೆಯಲಿರುವ ಈ ಪ್ರತಿಭಟನೆಯಲ್ಲಿ ಆಯಾ ಜಿಲ್ಲೆಗಳಲ್ಲಿ ಬಿಜೆಪಿ ಕಾರ್ಯಕರ್ತರೂ ತಮ್ಮನ್ನು ಜೋಡಿಸಿಕೊಳ್ಳಬೇಕಾಗಿದೆ.

ಯೋಜಿತ ಷಡ್ಯಂತ್ರದ ವಿರುದ್ಧ ಪಕ್ಷದ ಎಲ್ಲ ಕಾರ್ಯಕರ್ತರೂ ಕೈಜೋಡಿಸಿ ಕಾಂಗ್ರೆಸ್ ಹುನ್ನಾರವನ್ನು ವಿಫಲಗೊಳಿಸುವುದು ಅನಿವಾರ್ಯ. ಸ್ಥಳೀಯ ಸಂಸದರು, ಶಾಸಕರು, ವಿವಿಧ ಚುನಾಯಿತ ಪ್ರತಿನಿಧಿಗಳು, ಪಕ್ಷದ ಪ್ರಮುಖರು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಬೇಕಿದೆ.

ಸಾಂದರ್ಭಿಕ

# ರಾಜಕೀಯ ವಿದ್ಯಮಾನ ಕಲಿಸಿರುವ ಪಾಠವಾದರೂ ಏನು ?

- ಎಸ್. ಶಾಂತಾರಾಮ್

ಇತ್ತೀಚಿನ ರಾಜಕೀಯ ವಿದ್ಯಮಾನಗಳ ಬಗ್ಗೆ ಎಷ್ಟೇ ವಿಶ್ಲೇಷಣೆ ನಡೆದರೂ , ಪ್ರಜಾತಾಂತ್ರಿಕವಾಗಿ ಆಯ್ಕೆಯಾದ ಸರ್ಕಾರವೊಂದನ್ನು ಪತನಗೊಳಿಸಲು ನಡೆದ ಕುತಂತ್ರಗಳು ರಾಜ್ಯದ ಪ್ರತಿಷ್ಠೆಗೆ ಕುಂದುಂಟು ಮಾಡಿದೆ.ಅದರಲ್ಲೂ ಸರ್ಕಾರ ರಚಿಸಿದ್ದ ಪಕ್ಷವಾದ ಬಿಜೆಪಿಯ ಕೆಲವು ಶಾಸಕರೇ , ಅನ್ಯ ಆಮಿಷಗಳಿಗೆ ಬಲಿಯಾಗಿ ತಮ್ಮನ್ನು ಆಯ್ಕೆ ಮಾಡಿದ ಪಕ್ಷಕ್ಕೇ ದ್ರೋಹ ಬಗೆದಿದ್ದು ಅಕ್ಷಮ್ಯ ಅಪರಾಧ.ಇದೀಗ ಈ ಶಾಸಕರು ಅನರ್ಹಗೊಳ್ಳುವ ಮೂಲಕ ತಮ್ಮ ರಾಜಕೀಯ ಭವಿಷ್ಯಕ್ಕೆ ತಾವೇ ಕೊಡಲಿಪೆಟ್ಟು ಹಾಕಿಕೊಂಡಿದ್ದಾರೆ. ಆಯಾ ಕ್ಷೇತ್ರಗಳ ಮತದಾರರು ಇಂತಹ ಶಾಸಕರ ಮರು ಆಯ್ಕೆಗೆ ಬೆಂಬಲ ನೀಡುವುದು ಕಷ್ಟ ಇದು ಕರ್ನಾಟಕದ ರಾಜಕಾರಣದಲ್ಲಿ ಒಂದು ಮಹತ್ವದ ಮೈಲುಗಲ್ಲು ಎಂದರೆ ತಪ್ಪಿಲ್ಲ.

ರಾಜಕೀಯ ಲಾಭಕ್ಕಾಗಿ ವಿರೋಧ ಪಕ್ಷಗಳು ಚುನಾಯಿತ ಸರ್ಕಾರವನ್ನು ಉರುಳಿಸುವ ಕುತಂತ್ರಕ್ಕೆ ಆಡಳಿತ ಪಕ್ಷದ ಶಾಸಕರನ್ನೇ ಬಳಸಿಕೊಂಡವು.ಬಿಜೆಪಿ ಶಾಸಕರು ಪಕ್ಷದಿಂದ ಹೊರಹೋಗಲು ನಿರ್ಧರಿಸಿದ್ದು ಯಾವ ಕಾರಣಕ್ಕೂ ಸಮರ್ಥನೀಯವಲ್ಲ.ಆದರೂ , ಈ ಪರಿಸ್ಥಿತಿಯ ದುರ್ಲಾಭ ಪಡೆಯಲು ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್ ಹಾಗೂ ಜೆಡಿಎಸ್ ಮುಂದಾಗಿದ್ದು ಪ್ರಜಾತಾಂತ್ರಿಕ ನಡವಳಿಕೆಯೇ ಅಲ್ಲ. ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸಿದರೆ , ಸರ್ಕಾರವನ್ನು ಬೀಳಿಸುವ ತಮ್ಮ ತಂತ್ರ ಫಲ ನೀಡದು ಎಂದರಿತ ಜೆಡಿಎಸ್ ನಾಯಕರು , ಶಾಸಕರನ್ನು ರಾಜ್ಯದ ಹೊರಗೆ ಕರೆದೊಯ್ದು ಅವರನ್ನು ಗೂಂಡಾಗಳ ರಕ್ಷಣೆಯಲ್ಲಿಟ್ಟು ಸಾಧಿಸಿದ್ದು ಏನೂ ಇಲ್ಲ.ವಿಪಕ್ಷಗಳ ಮಾತಿಗೆ ಮರುಳಾದ ಬಿಜೆಪಿ ಭಿನ್ನರು ಪರ್ಯಾಯ ಸರ್ಕಾರ ರಚನೆಯ ಮೂಲಕ ತಮಗೆ ಸಿಗಬಹುದು ಎಂದು ಭಾವಿಸಿದ್ದ ಲಾಭಕ್ಕೂ ಕಲ್ಲು ಬಿತ್ತು.ಇಂತಹ ದುರ್ದೆಶೆಗೆ ಸಿಲುಕುವುದು ಅಗತ್ಯವಿತ್ತಾ ಎನ್ನುವ ಬಗ್ಗೆ ಬಿಜೆಪಿ ಭಿನ್ನರು ಆತ್ಮಾವಲೋಕನ ಮಾಡಿಕೊಳ್ಳುವುದು ಅಗತ್ಯ.

ಮುಖ್ಯಮಂತ್ರಿಯ ಕಾರ್ಯವೈಖರಿಯ ಬಗ್ಗೆ ಅಸಮಾಧಾನವಿದ್ದರೆ , ಪಕ್ಷದ ವೇದಿಕೆಯಲ್ಲಿ ನಾಯಕನ ಬದಲಾವಣೆ ಪ್ರಸ್ತಾವನೆ ಮಂಡಿಸಲು ಭಿನ್ನರಿಗೆ ಅವಕಾಶವಿತ್ತು.ಆದರೆ , ವಿಪಕ್ಷಗಳು ತೋರಿದ ಆಮಿಷದಿಂದಾಗಿ , ಕಾನೂನುಬದ್ಧವಾಗಿ ನಾಯಕನ ಬದಲಾವಣೆ ಮಾಡುವ ಯತ್ನ ನಡೆಸಬೇಕಾದ ಭಿನ್ನರು ತಪ್ಪುದಾರಿ ಹಿಡಿದರು.ನೇರವಾಗಿ ರಾಜ್ಯಪಾಲರಿಗೆ ಪತ್ರ ನೀಡಿ ತಾವು ಬಿಜೆಪಿಗೆ ರಾಜೀನಾಮೆ ನೀಡುವುದಾಗಿ ತಿಳಿಸಿದ್ದೇ ಇವರೆಲ್ಲರ ರಾಜಕೀಯ ಭವಿಷ್ಯಕ್ಕೇ ಮಾರಕವಾಗಿ ಪರಿಣಮಿಸಿತು.ಆದರೆ ಇದಕ್ಕಾಗಿ ಭಿನ್ನರಿಗೆ ಸಿಕ್ಕಿದ್ದು ಆರ್ಥಿಕ ಲಾಭ ಮಾತ್ರ.ಇದರಿಂದಾಗಿ ತಮ್ಮ ಪ್ರತಿಷ್ಠೆಗೆ ಆಗಿರುವ ಧಕ್ಕೆ ಎಷ್ಟು ಎನ್ನುವ ಕಲ್ಪನೆ ಈ ಭಿನ್ನರಿಗೆ ಇದ್ದಂತಿಲ್ಲ.ಏನೋ ಮಾಡಲು ಹೋಗಿ ಏನೋ ಮಾಡಿರುವ ಭಿನ್ನಮತೀಯರ ಅನರ್ಹತೆಯನ್ನು ಹೈಕೋರ್ಟ್ ಕೂಡಾ ಇತ್ತಿ ಹಿಡಿದಿರುವುದು ಸ್ವಾಗತಾರ್ಹ.

ಈಗಿನ ರಾಜಕೀಯ ವಿದ್ಯಮಾನಗಳಿಂದ ಒಂದು ಅಂಶವಂತೂ ಸ್ಪಷ್ಟವಾಗಿದೆ.ಅಡ್ಡದಾರಿ ಹಿಡಿದರೆ , ಚುನಾಯಿತ ಪ್ರತಿನಿಧಿಗಳಿಗೆ ತಕ್ಕ ಶಾಸ್ತಿಯಾಗಲಿದೆ ಎನ್ನುವುದು ಹಾಗೂ ವಿಪಕ್ಷಗಳು ಸರ್ಕಾರದ ಪತನವೊಂದನ್ನೇ ಗುರಿಯಾಗಿಸಿ ಕಾರ್ಯ ನಿರ್ವಹಿಸುವುದಕ್ಕಿಂತ ರಚನಾತ್ಮಕ ವಿರೋಧ ಪಕ್ಷವಾಗಿ ಸಕ್ರಿಯವಾಗಿರುವುದು ಅಗತ್ಯ ಎನ್ನುವ ಅಂಶವನ್ನು ಗುರ್ತಿಸಲೇಬೇಕು.ಸರಳ ಬಹುಮತ ಇದೆ ಎನ್ನುವ ಕಾರಣಕ್ಕೆ ಸರ್ಕಾರವನ್ನು ಪತನಗೊಳಿಸಲು ಯತ್ನ ನಡೆದರೆ , ಸರ್ಕಾರದ ರಕ್ಷಣೆಗೆ ಪ್ರತಿತಂತ್ರ ಅನುಸರಿಸುವುದೂ ಸಹಜ ಎನ್ನುವ ಸಂದೇಶವನ್ನು ಬಿಜೆಪಿ ಕೂಡಾ ನೀಡಿದೆ.ರಾಜಕೀಯದಲ್ಲಿ ಇದನ್ನು ತಪ್ಪು ಎಂದು ಹೇಳುವುದು ಕಷ್ಟ.ಅದಕ್ಕಿಂತ ಹೆಚ್ಚಾಗಿ ಐದು ವರ್ಷಗಳ ಅವಧಿಗೆ ಆಯ್ಕೆಯಾದ ಸರ್ಕಾರವನ್ನು ಎರಡು ವರ್ಷಗಳಲ್ಲೇ ಉರುಳಿಸುವ ಯತ್ನಕ್ಕೆ ರಾಜ್ಯದ ಮತದಾರರ ಬೆಂಬಲವೂ ಇಲ್ಲ .ಈ ಸಂಗತಿ ಮಾತ್ರ ಬಿಜೆಪಿಗೆ ಪೂರಕವಾಗಿರುವ ಅಂಶವಾಗಿದೆ.ಉಳಿದಂತೆ ಸರ್ಕಾರ ಮತ್ತು ಪಕ್ಷದ ವರ್ಚಸ್ಸಿಗೆ ಇತ್ತೀಚಿನ ವಿದ್ಯಮಾನಗಳಿಂದ ಉಂಟಾಗಿರುವ ಹಾನಿಯನ್ನು ಸರಿಪಡಿಸಲು ಸಾಕಷ್ಟು ಕಸರತ್ತು ನಡೆಸಬೇಕಾಗಿದೆ.

ಎರಡನೇ ಬಾರಿ ಎದುರಾದ ಭಿನ್ನಮತದ ಬಿಸಿಯಿಂದ ಬಿಜೆಪಿ ಸರ್ಕಾರ ಪಾರಾಗಿದೆ.ಆದರೆ, ಈಗಲೂ ಸರ್ಕಾರ ನಾಜೂಕಿನ ಹಾದಿಯಲ್ಲೇ ಸಾಗಬೇಕಿದೆ.೧೧ ಭಿನ್ನಮತೀಯ ಶಾಸಕರ ಅನರ್ಹಗೊಂಡಿರುವುದರಿಂದ ಈ ಸ್ಥಾನಗಳಿಗೆ ಮರು ಚುನಾವಣೆಯ ಸಾಧ್ಯತೆಗಳಿವೆ. ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸದಿದ್ದರೆ , ಸದ್ಯದಲ್ಲೇ ೧೧ ಕ್ಷೇತ್ರಗಳಿಗೆ ಚುನಾವಣೆ ಘೋಷಣೆಯಾಗಲೂಬಹುದು.ಈ ಸ್ಥಾನಗಳಲ್ಲಿ ಗರಿಷ್ಠ ಸ್ಥಾನಗಳು ಬಿಜೆಪಿಗೆ ಪುನಃ ಸಿಕ್ಕರೆ ಮಾತ್ರವೇ ಸರ್ಕಾರದ ಭವಿಷ್ಯ ಗಟ್ಟಿಯಾಗಲು ಸಾಧ್ಯ.ಈನಿಟ್ಟಿನಲ್ಲಿ ಬಿಜೆಪಿಯ ರಣ ತಂತ್ರ ಏನಾಗಲಿದೆ ಎನ್ನುವುದೇ ಈಗ ಕುತೂಹಲದ ಸಂಗತಿ.

ಮೇಲಾಗಿ ಸಂಪುಟ ವಿಸ್ತರಣೆ ಕೂಡಾ ಸವಾಲೊಡ್ಡುವ ಅಪಾಯವಿದೆ.ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಸಾಕಷ್ಟು ಆಗಿದ್ದರೂ ಸದ್ಯದ ರಾಜಕೀಯ ಪರಿಸ್ಥಿತಿಯಿಂದಾಗಿ , ಬಿಜೆಪಿಗೆ ಇದರ ಲಾಭ ಪಡೆಯುವುದು ಸಾಧ್ಯವಾಗದಂತಾಗಿದೆ.ಹೀಗಾಗಿ ರಾಜಕೀಯ ಪರಿಸ್ಥಿತಿ ಏನೇ ಇರಲಿ , ಅಭಿವೃದ್ಧಿ ವಿಚಾರದಲ್ಲಿ ಸರ್ಕಾರದ ಸಾಧನೆಗಳಿಗೆ ಹೆಚ್ಚಿನ ಪ್ರಚಾರ ದೊರಕುವಂತೆ ಪಕ್ಷ ಕೂಡಾ ಗಮನ ನೀಡಬೇಕಾಗಿದೆ. ಇದುವರೆಗೆ ಎದುರಾದ ಸಮಸ್ಯೆಗಳನ್ನು ಎದುರಿಸಿಯೂ ಸರ್ಕಾರವನ್ನು ರಕ್ಷಿಸಿಕೊಳ್ಳುವಲ್ಲಿ ಬಿಜೆಪಿ ಯಶಸ್ವಿಯಾಗಿದೆ.ಆದ್ದರಿಂದ ಇನ್ನುಳಿದ ಅವಧಿಯಲ್ಲಿ ಸರ್ಕಾರದ ಸಾಧನೆಗಳ ಬಗ್ಗೆ ಹೆಚ್ಚು ಗಮನ ಹರಿಸಲು ಪಕ್ಷದ ಎಲ್ಲಾ ಹಂತದ ಘಟಕಗಳಿಗೂ ಅಗತ್ಯ ಸೂಚನೆ ನೀಡಿದರೆ , ಕಾರ್ಯಕರ್ತರಲ್ಲಿ ಮೂಡಿರುವ ಗೊಂದಲಕ್ಕೂ ತೆರೆ ಎಳೆಯಬಹುದು.ರಾಜಕೀಯವಾಗಿ ಯಾವುದೇ ಬೆಳವಣಿಗೆಯಾದರೂ , ಸರ್ಕಾರದ ಅಭಿವೃದ್ಧಿಪರವಾದ ಧೋರಣೆಯನ್ನು ರಾಜ್ಯದ ಮೂಲೆ ಮೂಲೆಗೆ ತಲುಪಿಸುವ ವ್ಯವಸ್ಥೆಯೊಂದು ಪರ್ಯಾಯವಾಗಿ ಸಕ್ರಿಯವಾಗಿದ್ದರೆ, ಸರ್ಕಾರದ ವರ್ಚಸ್ಸೂ ಹೆಚ್ಚಲು ಅವಕಾಶವಾಗುತ್ತದೆ.

ರಾಜ್ಯದ ಜನರ ದೃಷ್ಟಿಯಲ್ಲೇ ಹೇಳುವುದಾದರೆ ,ಯಾವ ಪಕ್ಷದ ಸರ್ಕಾರವಿದ್ದರೂ ರಾಜ್ಯಕ್ಕೆ ಆಗಿರುವ ಉಪಯೋಗವೇನು ಎನ್ನುವುದು ಮುಖ್ಯವಾಗುತ್ತದೆ.ಹೀಗಾಗಿ ಬಿಜೆಪಿ ಸರ್ಕಾರದಲ್ಲಿ ಗೊಂದಲವಿದೆ ಎನ್ನುವ ಕಾರಣಕ್ಕೆ ಮತ್ತೊಂದು ಸರ್ಕಾರ ರಚನೆ ಮಾಡುವುದು ಪರಿಹಾರವಲ್ಲ.ಅಥವಾ ಈಗಿರುವ ಸರ್ಕಾರ ಹೋದ ಮಾತ್ರಕ್ಕೆ ರಾಜ್ಯದಲ್ಲಿ ಎಲ್ಲವೂ ಸರಿಯಾದಂತೆಯೂ ಅಲ್ಲ.ಬಿಜೆಪಿ ಕೂಡಾ ಸಾರ್ವಜನಿಕರ ಭಾವನೆಗಳನ್ನು ಅರ್ಥ ಮಾಡಿಕೊಂಡು ಮುಂದುವರಿದರೆ, ಜನಮಾನಸದಲ್ಲಿ ಮೂಡಿರುವ ಸಿನಿಕತನಕ್ಕೆ ಅದು ಉತ್ತರವಾದೀತು.

●

# ಕೇರಳ ಸ್ಥಳೀಯ ಸಂಸ್ಥೆ ಚುನಾವಣೆ

# ನೆಲೆ ಗಟ್ಟಿಮಾಡಿಕೊಂಡ ಕಮಲ

ಕೇರಳದಲ್ಲಿ ವಿಧಾನಸಭಾ ಚುನಾವಣೆ (2011ರ ಎಪ್ರಿಲ್-ಮೇ)ಗೆ ಇನ್ನು ಕೆಲವೇ ತಿಂಗಳು ಬಾಕಿ ಇರುವಾಗ ನಡೆದಿರುವ ಮೂರು ಹಂತಗಳ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಆಳುವ ಸಿಪಿಎಂ ನೇತೃತ್ವದ ಎಲ್‌ಡಿಎಫ್‌ಗೆ ಹೀನಾಯ ಸೋಲುಂಟಾಗಿದೆ. ಕಾಂಗ್ರೆಸ್ ನೇತೃತ್ವದ ಯುಡಿಎಫ್‌ಗೆ ಭರ್ಜರಿ ಜಯ ಲಭಿಸಿದೆ. ಇದೇ ವೇಳೆ ಬಿಜೆಪಿ ಪ್ರಬಲ ತೃತೀಯ ಶಕ್ತಿಯಾಗಿ ಹೊರಹೊಮ್ಮಿ ದೇವರ ನಾಡಿನಲ್ಲಿ ತಾನು ಬೆಳೆಯುತ್ತಿರುವ ಪ್ರಬಲ ಶಕ್ತಿ ಎಂಬುದನ್ನು ತೋರಿಸಿಕೊಟ್ಟಿದೆ.

ಕೇರಳದ ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲೂ ಮೇಲುಗೈ ಸಾಧಿಸಿರುವ ಯುಡಿಎಫ್ ವಿಧಾನಸಭಾ ಚುನಾವಣೆಯಲ್ಲೂ ಗೆಲುವು ತನ್ನದೇ ಎಂದು ಬೀಗುತ್ತಿದೆ. 978 ಗ್ರಾ.ಪಂ.ಗಳಲ್ಲಿ ಯುಡಿಎಫ್ 537ರಲ್ಲಿ ಗೆದ್ದರೆ, ಎಲ್‌ಡಿಎಫ್ 348ರಲ್ಲಿ ಗೆಲುವು ಸಾಧಿಸಲಷ್ಟೇ ಶಕ್ತವಾಗಿದೆ. ಸುಮಾರು 10ಗ್ರಾಮ ಪಂಚಾಯತ್‌ಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ.

39ನಗರಪಾಲಿಕೆಗಳಲ್ಲಿ ಯುಡಿಎಫ್ ಗೆದ್ದರೆ, ಎಲ್‌ಡಿಎಫ್ 18ರಲ್ಲಿ ಮಾತ್ರವೇ ಗೆದ್ದಿದೆ. 11 ನಗರಪಾಲಿಕೆಗಳಲ್ಲಿ ತ್ರಿಶಂಕು ಸ್ಥಿತಿ ಉಂಟಾಗಿದ್ದು ಇಲ್ಲಿ ಬಿಜೆಪಿ ಮತ್ತು ಸ್ವತಂತ್ರರು ಯಾರು ಅಧಿಕಾರ ನಡೆಸಬೇಕೆಂಬುದನ್ನು ನಿರ್ಧರಿಸಬೇಕಾಗಿದೆ. ಪ್ರತಿಷ್ಠಿತ ಕೊಚ್ಚಿ ಮಹಾನಗರ ಪಾಲಿಕೆ ಮತ್ತು ತ್ರಿಶೂರು (55 ಸ್ಥಾನಗಳ ಪೈಕಿ 45ರಲ್ಲಿ ಯುಡಿಎಫ್ ಗೆದ್ದರೆ, ಎಡರಂಗಕ್ಕೆ ಸಿಕ್ಕಿದ್ದು ಕೇವಲ 6ಸೀಟು.ಎರಡು ಸೀಟುಗಳು ಬಿಜೆಪಿಗೆ ಸಿಕ್ಕಿದೆ)ಗಳಲ್ಲಿ ಮೂರು ದಶಕಗಳಿಂದ ಅಧಿಕಾರದಲ್ಲಿದ್ದ ಎಲ್‌ಡಿಎಫ್ ಆಘಾತಕಾರಿ ಸೋಲನುಭವಿಸಿದೆ. ಇಲ್ಲಿ ಕಮ್ಯುನಿಸ್ಟ್ ಪಕ್ಷಗಳು ಬಹುತೇಕ ನಿರ್ನಾಮವಾಗಿವೆ.

ರಾಜಧಾನಿ ತಿರುವನಂತಪುರದಲ್ಲಿ ಮಾತ್ರವೇ ಆಳುವ ಎಲ್‌ಡಿಎಫ್ ತೆಳು ಬಹುಮತದೊಂದಿಗೆ ಮುಖವುಳಿಸಿಕೊಂಡಿದೆ. ಕೊಲ್ಲಂನಲ್ಲಿ ಅದು ಗೆಲುವು ಸಾಧಿಸಿದೆ.

ವಯನಾಡ್, ಕಾಸರಗೋಡು, ಮಲಪ್ಪುರಂ, ತ್ರಿಶೂರು, ಎರ್ನಾಕುಳಂ, ಕೊಟ್ಟಾಯಂ, ಇಡುಕ್ಕಿ ಜಿಲ್ಲೆಗಳಲ್ಲಿ ಯುಡಿಎಫ್ ಜಯಭೇರಿ ಬಾರಿಸಿದ್ದರೆ, ಕಣ್ಣೂರು, ಆಲಪ್ಪುಳಗಳಲ್ಲಿ ಎಡರಂಗ ಅಧಿಕಾರ ಉಳಿಸಿಕೊಂಡಿದೆ. ಪಾಲಕ್ಕಾಡಿನಲ್ಲಿ ಅದರ ಅಧಿಕಾರ ಯುಡಿಎಫ್ ನಿಲುವನ್ನಾಧರಿಸಿದೆ. ಕಳೆದ ಬಾರಿ ಇಲ್ಲಿ ಬಿಜೆಪಿಯನ್ನು ಹೊರಗಿಡಲು ಯುಡಿಎಫ್-ಎಲ್‌ಡಿಎಫ್‌ಗಳು ಒಂದಾಗಿದ್ದವು. ಈ ಬಾರಿಯೂ ಬಿಜೆಪಿ ಇಲ್ಲಿ 16ಸ್ಥಾನಗಳೊಂದಿಗೆ ಎಲ್‌ಡಿಎಫ್‌ಗೆ ಪ್ರಬಲ ಪೈಪೋಟಿ ನೀಡಿ ಅಧಿಕಾರದ ಹೊಸ್ತಿಲಲ್ಲಿ ಬಂದು ನಿಂತಿದೆ.

ನಗರಪಾಲಿಕೆಗಳ ಪೈಕಿ ಕಲ್ಪೆಟ್ಟಾ (ವಯನಾಡ್), ತ್ರಿಪ್ಪುನಿತುರ (ಎರ್ನಾಕುಳಂ), ವರ್ಕಳ, ನಯ್ಯಾಟಿಕ್ಕರ (ತಿರುವನಂತಪುರ), ಚಿತ್ತೂರ್, ತಾತಮಂಗಲಂ(ಪಾಲಕ್ಕಾಡ್)ಗಳಲ್ಲಿ ದಶಕಗಳಿಂದ ಎಲ್‌ಡಿಎಫ್ ಅಧಿಕಾರದಲ್ಲಿತ್ತಾದರೂ ಈ ಬಾರಿ ಯುಡಿಎಫ್ ಅಲ್ಲಿ ಅಧಿಕಾರ ಹಿಡಿದಿದೆ. ಎಲ್‌ಡಿಎಫ್‌ನ ಪಾರಂಪರಿಕ ನೆಲೆಯಾದ ಕಣ್ಣೂರು ಜಿಲ್ಲೆಯಲ್ಲೂ ಯುಡಿಎಫ್ ಬಲ ವೃದ್ಧಿಸಿಕೊಂಡಿದೆ. ಜಿಲ್ಲಾ ಪಂಚಾಯತ್‌ಗಳ ಪೈಕಿ 8ರಲ್ಲಿ ಯುಡಿಎಫ್ ಗೆದ್ದರೆ, 5ರಲ್ಲಿ ಎಲ್‌ಡಿಎಫ್ ಗೆದ್ದಿದೆ. ಬ್ಲಾಕ್ ಪಂಚಾಯತ್‌ಗಳ ಪೈಕಿ 77ರಲ್ಲಿ ಐಕ್ಯರಂಗ ಹಾಗೂ 63ರಲ್ಲಿ ಎಡರಂಗ ಅಧಿಕಾರಕ್ಕೆ ಬಂದಿವೆ.

## ತೃತೀಯ ಶಕ್ತಿಯಾಗಿ ಹೊರಹೊಮ್ಮಿದ ಬಿಜೆಪಿ

ಕೇರಳದ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮಹತ್ವ ಬೆಳವಣಿಗೆ ಎಂದರೆ, ಬಿಜೆಪಿಯ ಕಮಲ ರಾಜ್ಯವ್ಯಾಪಿ ಅರಳಲಾರಂಭಿಸಿರುವುದು.

ಕಟ್ಟಾ ಕಮ್ಯುನಿಸ್ಟರು, ಮುಸ್ಲಿಮ್ ಲಾಬಿ ಮತ್ತು ಕ್ರೈಸ್ತ ಮಿಷನರಿಗಳ ಹಿಡಿತದ ಮಧ್ಯೆ ಬಿಜೆಪಿಗೆ ಜಾಗವೇ ಇಲ್ಲ ಎಂಬ ಸ್ಥಿತಿ ಇತ್ತು. ಹಿಂದುಗಳ ಮತಗಳು ಒಂದೋ ಕಮ್ಯುನಿಸ್ಟರು ಇಲ್ಲವೋ ಕಾಂಗ್ರೆಸ್ ನೇತೃತ್ವದ ಮೈತ್ರಿ ಕೂಟದ ಮಧ್ಯೆ ಹಂಚಿ ಹೋಗುತ್ತಿತ್ತು. ಆದರೆ, ಇತ್ತೀಚೆಗೆ ಹೊರಬಿದ್ದ ಫಲಿತಾಂಶದ ನೀಡಿರುವ ಸೂಚನೆ ಎಂದರೆ ಮುಂಬರುವ ದಿನಗಳಲ್ಲಿ ಬಿಜೆಪಿಗೆ ಇಲ್ಲಿ ಅವಕಾಶ ಇದೆ ಎಂಬುದು. 2005 ರಲ್ಲಿ ಪಾಲಕ್ಕಾಡ್‌ನಲ್ಲಿ ಬಿಜೆಪಿ ಅದ್ವಿತೀಯ ಸಾಧನೆ ತೋರಿಸಿತ್ತು. ಈ ಬಾರಿ ಆ ಸಾಧನೆಯನ್ನು ಉಳಿಸಿಕೊಳ್ಳುವುದರ ಜತೆಗೆ ಅಚ್ಚರಿ ಎನ್ನುವಂತೆ ತಿರುವನಂತಪುರ, ಕೊಚ್ಚಿ ನಗರಪಾಲಿಕೆಗಳು ಸೇರಿದಂತೆ ಇತರೆ ಸ್ಥಳೀಯ ಸಂಸ್ಥೆಗಳಿಗೂ ಬಿಜೆಪಿ ಸದಸ್ಯರು ಆಯ್ಕೆಯಾಗಿದ್ದಾರೆ. ಹಲವು ಪುರಸಭೆ ಮತ್ತು ಪಾಲಿಕೆಗಳಲ್ಲಿ ಪರಸ್ಪರ ಬದ್ಧ ವೈರಿಗಳಾಗಿರುವ ಯುಡಿಎಫ್ ಮತ್ತು ಎಲ್‌ಡಿಎಫ್ ಆಡಳಿತ ಸೂತ್ರ ಹಿಡಿಯಲು ಬಿಜೆಪಿ ನೆರವು ಪಡೆಯಲೇಬೇಕಾಗಿದೆ.

ಪಾಲಕ್ಕಾಡ್‌ನಲ್ಲಿ ಬಿಜೆಪಿ ಕಳೆದ ಬಾರಿ ಅಧಿಕಾರ ಹಿಡಿಯುವುದನ್ನು ತಪ್ಪಿಸಲು ಪರಸ್ಪರ ವೈರಿಗಳಾದ ಯುಡಿಎಫ್ ಮತ್ತು ಎಲ್‌ಡಿಎಫ್‌ಗಳು ಕೈಜೋಡಿಸಿದ್ದವು. 13 ಸೀಟುಗಳನ್ನು ಗೆಲ್ಲುವ ಮೂಲಕ ಅಲ್ಲಿ ಫಲಿತಾಂಶ ಮತ್ತೆ ಪುನರಾವರ್ತನೆಗೊಂಡಿದೆ. ಕಾಸರಗೋಡು ಮುನಿಸಿಪಾಲಿಟಿಯ 11 ವಿಭಾಗಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ನಾಲ್ಕು ಪುರಸಭೆಗಳಲ್ಲಿ ಎಲ್‌ಡಿಎಫ್ ಅಥವಾ ಯುಡಿಎಫ್ ಬಿಜೆಪಿಯ ಸಹಾಯ ಪಡೆಯದೇ ಅಧಿಕಾರ ಹಿಡಿಯಲು ಸಾಧ್ಯವಿಲ್ಲ. ಎರ್ನಾಕುಲಂ ಜಿಲ್ಲೆಯ ಎಲೂರು ಪುರಸಭೆ, ತ್ರಿಶೂರು ಜಿಲ್ಲೆಯ ಕುನ್ನಂಕುಲಂನಲ್ಲಿ ಇದೇ ಸ್ಥಿತಿ ಇದೆ. ಈ ಎರಡೂ ಕಡೆಗಳಲ್ಲಿ ಬಿಜೆಪಿ ಕ್ರಮವಾಗಿ ಮೂರು ಮತ್ತು ಐದು ಡಿವಿಜನ್‌ಗಳಲ್ಲಿ ಗೆಲುವು ಸಾಧಿಸಿದೆ. ಪಾಲಕ್ಕಾಡ್ ಮತ್ತು ಒಟ್ಟಪಾಲಂ ಪುರಸಭೆಯಲ್ಲೂ ತ್ರಿಶಂಕು ಸ್ಥಿತಿ ಇದ್ದು, ಬಿಜೆಪಿಯ ಪಾತ್ರ ಮಹತ್ವದ್ದು.

ಕೇರಳದ ರಾಜಧಾನಿ ತಿರುವನಂತಪುರ ಕಾರ್ಪೊರೇಷನ್‌ಗೆ ನಡೆದ ಚುನಾವಣೆಯಲ್ಲಿ ಒಟ್ಟು ಆರು ಸೀಟುಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಈ ಹಿಂದೆ ಒಂದೇ ಒಂದು ಸ್ಥಾನವನ್ನೂ ಅದು ಗೆದ್ದಿರಲಿಲ್ಲ. ಬಿಜೆಪಿ 19 ಗ್ರಾಮಪಂಚಾಯತ್ ಸೀಟುಗಳನ್ನೂ ಗೆದ್ದಿದೆ. ಶೂರನ್ನೂರು ಪುರಸಭೆಯಲ್ಲಿ 3 ಸ್ಥಾನಗಳು ದೊರೆತರೆ, ವಯನಾಡಿನ ನೂಲಪ್ಪುಳ ಗ್ರಾಮಪಂಚಾಯಿತಿಯಲ್ಲಿ ಅಧಿಕಾರ ಹಿಡಿಯಲು ಬಿಜೆಪಿಯ ನೆರವು ಅಗತ್ಯ. ಕೊಚ್ಚಿಯಲ್ಲಿ 2 ಸ್ಥಾನ ಗೆದ್ದಿದೆ. ಕಾಞ್ಞಂಗಾಡ್ ಪುರಸಭೆಯಲ್ಲಿ 5 ಸ್ಥಾನ ಗೆದ್ದಿದೆ. ಮುಸ್ಲಿಮ್ ಬಹುಸಂಖ್ಯಾತರ ಜಿಲ್ಲೆಯಾಗಿರುವ ಮಲ್ಲಪುರಂನಲ್ಲೂ ಬಿಜೆಪಿ ತನ್ನ ಪ್ರಭಾವ ಬೀರಿದೆ. ಕೊಟ್ಟಕ್ಕಲ್ ಮತ್ತು ಪೋನ್ನಾನಿಯಲ್ಲಿ ಗೆಲವು ಸಾಧಿಸಿದೆ.

ಈ ಬಾರಿ ಎಡರಂಗದ ವಿರುದ್ಧ ಜನತೆ ಆಕ್ರೋಶ ತೋರಿದ್ದು, ಕಾಂಗ್ರೆಸ್ ನೇತೃತ್ವಕ್ಕೆ ಒಲವು ತೋರಿದೆ. ಕಾಂಗ್ರೆಸ್‌ಗೆ ಮುಸ್ಲಿಂ ಮತ್ತು ಕ್ರೈಸ್ತರು ಸಾರಾಸಗಟಾಗಿ ಮತ ಚಲಾಯಿಸಿದ ಪರಿಣಾಮ ಗೆಲವು ಸಾಧಿಸಿದೆ. ಹಿಂದು ವಿರೋಧಿ ನೀತಿ ಮತ್ತು ಮುಸ್ಲಿಂ, ಕ್ರೈಸ್ತರ ತುಷ್ಟೀಕರಣ ಮಾಡುತ್ತಿದ್ದ ಎಡರಂಗಕ್ಕೆ ಸೋಲುಂಟಾಗಿದೆ. ●

# ಪಟ್ಟಣದೆಡೆಗೆ ಮುಖ ಮಾಡಿದ ನರಿಗಳು

"ಗೀದಡ್ ಕೀ ಮೌತ್ ಆತೀ ತೋ ವೋ ಶಹರ್ ಕೀ ತರಫ್ ಭಾಗತೀ ಹೈ". ಹಿಂದಿ ಭಾಷೆಯಲ್ಲಿನ ಗಾದೆ ಮಾತಿದು. "ನರಿಗಳಿಗೆ ಸಾವು ಬಂದಾಗ ಅವು ಪಟ್ಟಣದೆಡೆಗೆ ಧಾವಿಸುತ್ತವಂತೆ". ಅರಣ್ಯ, ಕಾಡುಪ್ರಾಣಿಗಳಿಗೆ ನೆಮ್ಮದಿಯ ತಾಣ. ಅಲ್ಲಿಯೇ ಅವುಗಳ ನೈಸರ್ಗಿಕ ಬದುಕು. ಆಹಾರ, ನೆಲೆ ಎಲ್ಲವೂ ಸಹಜವಾಗಿಯೇ ಅವಕ್ಕೆ ಅಲ್ಲಿ ಲಭ್ಯ. ದುರಾಸೆಯನ್ನೇನಾದರೂ ಪಟ್ಟು ಆಹಾರದ ಆಸೆಯಿಂದಲೋ, ಮತ್ತಿನ್ನೇನಾದರೂ ಪ್ರಲೋಭನೆಯಿಂದಲೋ ಪಟ್ಟಣದೆಡೆಗೆ ನುಗ್ಗಿದರೆ ಅವಕ್ಕೆ ಗಂಡಾಂತರ ತಪ್ಪಿದ್ದಲ್ಲ. ಪಟ್ಟಣದ ಕೃತ್ರಿಮತೆಯ ಕ್ರೌರ್ಯದ ಚಕ್ರವ್ಯೂಹ ಅವನ್ನು ಹಿಂಡಿ ಹಿಪ್ಪೆ ಮಾಡಿ ಎಸೆಯಬಹುದು. ಜೀವಕ್ಕೆ ಅಪಾಯ ಎದುರಾಗಬಹುದು.

ದುರಾಸೆ ಎಂಬುದು ಮನುಷ್ಯನಿಗೂ ಬರುವ ಕಾಹಿಲೆ. ಎಲ್ಲವೂ ಸರಿಇದ್ದರೂ ಇನ್ನೂ ಬೇಕೆಂಬ ಹಂಬಲ. ಕೆಲವೊಮ್ಮೆ ಅದು ಅತಿಯಾದಾಗ, ನಿಂತ ನೆಲವನ್ನೇ ಧಿಕ್ಕರಿಸುವ ದಾರ್ಷ್ಟ್ಯ. ಅಂಥ ಸಮಯದಲ್ಲಿ ಯಾವ ಹಿತವಚನವೂ ಕೆಲಸಕ್ಕೆ ಬಾರದು. ಯಾವ ಸನ್ನಡತೆಯೂ ಮನಸ್ಸಿನಲ್ಲಿ ಸುಳಿಯದು.

ಅನರ್ಹಗೊಂಡ ರಾಜ್ಯ ಬಿಜೆಪಿಯ 11 ಶಾಸಕರು ಇಂತಹುದೇ ದುರಾಸೆಗೆ ಬಲಿಯಾದರು. ಜನತೆಯ ಆಶೀರ್ವಾದದಿಂದ ದಕ್ಷಿಣ ಭಾರತದ ಮೊಟ್ಟಮೊದಲ ಬಿಜೆಪಿ ಸರ್ಕಾರವೆಂಬ ಹೆಗ್ಗಳಿಕೆಯಿಂದ ಜನಾನುರಾಗಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಆಡಳಿತಕ್ಕೆ ಕೊಡಲಿಯೇಟು ನೀಡುವ ಕೆಲಸಕ್ಕೆ ಈ ಶಾಸಕರು ಕೈ ಹಾಕಿದರು. ಅವರಲ್ಲಿ ಕೆಲವರು ಸಚಿವರೂ ಆಗಿದ್ದರು. ಜೊತೆಗೆ 6 ಜನ, ಪಕ್ಷೇತರರಾಗಿ ಸರ್ಕಾರಕ್ಕೆ ಬೆಂಬಲ ನೀಡಿ ಸಚಿವರಾದವರು. ಜಿಲ್ಲಾ ಉಸ್ತುವಾರಿ ಜವಾಬ್ದಾರಿ ಬೇರೆ ಹೆಗಲಿಗೇರಿತ್ತು. ಹೀಗಿದ್ದು ಯಾರಿಗೂ ಆಗದ ತೊಂದರೆ ಈ ಸರ್ಕಾರದಲ್ಲಿ ಅವರಿಗೇನಾಯ್ತು?

ಅದೇ, ಅದೇ, ವಿನಾಶಕಾಲೇ ವಿಪರೀತ ಬುದ್ದಿ ಅಂತಾರಲ್ಲ, ಹಾಗೆ ಶ್ರೀ ಎಚ್.ಡಿ. ಕುಮಾರಸ್ವಾಮಿಯಂಥ ಶನಿ ಇವರ ಕೈ ಕುಲುಕಿತ್ತು. ಆರು ದಶಕಗಳಿಂದಲೂ ದೇಶದೆಲ್ಲೆಡೆ ವಿರೋಧಿ ಸರ್ಕಾರಗಳನ್ನು ಉರುಳಿಸಲು ಹೊಂಚು ಹಾಕಿ ಕಾಯುವ ಬುದ್ಧಿಯ ಕಾಂಗ್ರೆಸ್ ಸಾಥ್ ನೀಡಿತ್ತು. ರಾಹು ಕೇತುಗಳಂತೆ ಈ ಎರಡು ಶಕ್ತಿಗಳು ಎಡಬಲಕ್ಕೆ ಸಹಾಯಕ್ಕೆ ನಿಂತಾಗ ಈ ಭಿನ್ನಮತೀಯರ ಮನಸ್ಸು ಕೆಡಲು ಇನ್ನೇನುಬೇಕು?

ಗೆದ್ದಕ್ಷೇತ್ರ, ಗೆಲ್ಲಿಸಿದ ಜನ, ಜನರ ಕಣ್ಣೀರೊರೆಸಲು ಕಟಿಬದ್ಧವಾದ ಸರ್ಕಾರ ಇವೆಲ್ಲರನ್ನೂ ಬಿಟ್ಟು ಹೊರಟು ನಿಂತರು ಈ ಶಾಸಕರು. ಗುಲ್ಬರ್ಗಾ ಸಚಿವ ಸಂಪುಟ ಸಭೆ ಮುಗಿದಂದೇ ಮಾಧ್ಯಮಗಳಲ್ಲಿ ಗುಸುಗುಸು. ಈ ಸವಾರಿ ಕರ್ನಾಟಕದ ಗಡಿದಾಟಿ ತಮಿಳುನಾಡಿನ ಹೊಸೂರಿಗೆ ತಲುಪಿತ್ತು. ಅಲ್ಲಿಂದ ಚೆನ್ನೈಗೆ. ಗೀದಡ್(ನರಿ) ಶಹರದ ಕಡೆ ಮುಖಮಾಡಿಯಾಗಿತ್ತು. ಭಿನ್ನಮತದ ಈ ಅಪಸ್ವರ ಮೊಳಗಿದಾಗ ರಾಜ್ಯಕ್ಕೆ ರಾಜ್ಯವೇ ತಲ್ಲಣ.

ಚೆನ್ನೈನಲ್ಲಿ ನೆಲೆಗೆ ಅಡ್ಡಿ ಎನಿಸತೊಡಗಿದಾಗ ಕೇರಳದ ಕೊಚ್ಚಿ. ಅಲ್ಲಿಂದ ನೇರವಾಗಿ ಗೋವಾ. ಗೋವಾದಲ್ಲಿ ಕಾಂಗ್ರೆಸ್ ಸರ್ಕಾರ. ಅಲ್ಲಿಯ ಹಿರಿಯ ಕಾಂಗ್ರೆಸ್ ಮುಖಂಡ ಹಾಗೂ ಭಿನ್ನಮತೀಯರಲ್ಲೊಬ್ಬರೆನಿದ ಶ್ರೀ ಆನಂದ ಅಸ್ನೋಟಿಕರ್ ಮಾವ ಶ್ರೀ ಬಾಂದೋಡ್ಕರ್‌ರಿಂದ ಈ ಶಾಸಕರಿಗೆ ರಕ್ಷಣೆ.

ಶುಭ್ರ ನೀರನ್ನು ಕದಡುವುದು, ಕದಡಿದ ನೀರಿನಲ್ಲಿ ಮೀನು ಹಿಡಿಯುವುದು ಇದನ್ನೇ ಉದ್ಯೋಗವನ್ನಾಗಿಸಿಕೊಂಡಿರುವ ರಾಜ್ಯ ಜೆಡಿಎಸ್ ಅಧ್ಯಕ್ಷ ಶ್ರೀ ಕುಮಾರಸ್ವಾಮಿಯವರೇ ಖುದ್ದಾಗಿ ಈ ಭಿನ್ನಮತೀಯರ ನಾಯಕತ್ವ ವಹಿಸಿದ್ದರು. ಗೋವಾಕ್ಕೆ ತೆರಳಿ ಹೆಚ್ಚೂ ಕಡಿಮೆ ದಿಗ್ಬಂದನ ಹೇರಿ ಅವರನ್ನು ಊರಿನಿಂದ ಊರಿಗೆ ಸ್ಥಳಾಂತರಿಸುವ ಜವಾಬ್ದಾರಿ ಹೊತ್ತಿದ್ದರು. ಈ ನಡುವೆ ಕಾಂಗ್ರೆಸ್ ತನ್ನ ಶಾಸಕರನ್ನು ಪುಣೆಯ ಹೋಟೇಲ್ ಒಂದಕ್ಕೆ ಸ್ಥಳಾಂತರಿಸಿತ್ತು.

ಭಿನ್ನಮತೀಯರು ನೇರವಾಗಿ ರಾಜ್ಯಪಾಲರಿಗೆ ಪತ್ರನೀಡಿ ರಾಜ್ಯ ಬಿಜೆಪಿ ನಾಯಕತ್ವ ಬದಲಾವಣೆಗೆ ಆಗ್ರಹಿಸಿದ್ದರು. ಈ ಸಂದರ್ಭದಲ್ಲಿ ರಾಜ್ಯಪಾಲರ ಪಾತ್ರವನ್ನೂ ರಾಜಕೀಯ ವಿಶ್ಲೇಷಕರು ತೀವ್ರ ವಿಮರ್ಶೆಗೆ ಒಳಪಡಿಸಿದ್ದರು. ವಿಧಾನಸಭೆಯಲ್ಲಿ ಬಹುಮತ ಸಾಬೀತಿಗೆ ನಿರ್ದೇಶಿಸಿದ ರಾಜ್ಯಪಾಲರು ಅಕ್ಟೋಬರ್ 11ರ ದಿನಾಂಕವನ್ನು ಅದಕ್ಕೆಂದು ನಿಗದಿ ಪಡಿಸಿದರು.

ಬಹುಮತ ಸಾಬೀತಿನ ದಿನ ವಿಧಾನಸೌಧದ ಆವರಣ ಅಕ್ಷರಶಃ ರಣರಂಗವನ್ನಾಗಿ ವಿರೋಧಪಕ್ಷದವರು ಹಾಗೂ ಅನರ್ಹಗೊಂಡ ಶಾಸಕರು ನಿರ್ಮಿಸಿದ್ದರು. ಎಲ್ಲಾ ಭದ್ರತೆಯ ವ್ಯವಸ್ಥೆಯನ್ನು ಅವರು ಗಾಳಿಗೆ ತೂರಿದರು. 1994ರಲ್ಲಿ ಶ್ರೀ ದೇವೇಗೌಡರು ಮುಖ್ಯಮಂತ್ರಿಯಾಗಿ ಆಯ್ಕೆಗೊಂಡ ದಿನದ ಅನುಭವದ ಹಿನ್ನೆಲೆಯಲ್ಲಿ ಸರ್ಕಾರ ಸೂಕ್ತ ಭದ್ರತೆಯ ಕ್ರಮವನ್ನೇ ಏರ್ಪಡಿಸಿತ್ತು. ಪೋಲೀಸ್ ಆಯುಕ್ತ ಶ್ರೀ ಶಂಕರ್ ಬಿದರಿಯವರೇ ಸ್ವತಃ ವಿಧಾನಸೌಧದ ಪರಿಸರದ ಭದ್ರತೆಯ ಉಸ್ತುವಾರಿ ವಹಿಸಿದ್ದರು. 1994ರಲ್ಲಿ 50 ಸಾವಿರಕ್ಕೂ ಹೆಚ್ಚು ಜನತಾದಳ ಕಾರ್ಯಕರ್ತರು ದೇವೇಗೌಡರ ಪರವಾಗಿ ವಿಧಾನಸೌಧದೆಡೆಗೆ ನುಗ್ಗಿದ್ದರು. ದೇವೇಗೌಡರಿಗೆ ಸವಾಲು ನೀಡಬಹುದೆಂಬ ಶಂಕೆಯಿಂದ ದಿ.ರಾಮಕೃಷ್ಣ ಹೆಗಡೆಯವರ ವಿರುದ್ಧ, ಶ್ರೀ ಆರ್.ವಿ. ದೇಶಪಾಂಡೆಯವರ ವಿರುದ್ಧ ದಿಗ್ಬಂಧನವನ್ನೇ ಹೂಡಿದ್ದರು. ವಿಧಾನಸೌಧಕ್ಕೆ ಸಾಗುವ ದಾರಿ ಅಕ್ಷರಶಃ ರಣರಂಗವಾಗಿತ್ತು.

ಅಕ್ಟೋಬರ್ 11 ರಂದು ಈ ಹಿನ್ನೆಲೆಯಲ್ಲಿ ಏರ್ಪಾಡಾಗಿದ್ದ ಭದ್ರತೆಯನ್ನು ಭೇದಿಸಿದ ವಿರೋಧಿಪಕ್ಷ ಶಾಸಕರು ವಿಧಾನಸೌಧದ ಗಾಜನ್ನು ಪುಡಿಮಾಡಿದರು. ಅನರ್ಹಗೊಂಡ ಶಾಸಕರು ಹಾಗೂ ಪಕ್ಷೇತರರು ಗೂಂಡಾಗಳಂತೆ ವಿಧಾನಸೌಧಕ್ಕೆ ನುಗ್ಗಿ ಅಧಿವೇಶನದ ಸಭಾಂಗಣದಲ್ಲಿ ದೊಂಬಿ ಎಬ್ಬಿಸಿದರು. ವಿರೋಧ ಪಕ್ಷದ ನಾಯಕ ಶ್ರೀ ಸಿದ್ದರಾಮಯ್ಯ ಸ್ವತಃ ಅವರಿಗೆ ಬೆಂಬಲನೀಡಿ ಅವರನ್ನು ಒಳಗೆ ಕರೆದೊಯ್ದರು. ಮಾಜಿ ಮಂತ್ರಿ ಶ್ರೀ ಗೂಳಿಹಟ್ಟಿ ಶೇಖರ್ ಅಸಹ್ಯಕರವಾಗಿ ಶರ್ಟ್ ಬಿಚ್ಚಿ ಕುರ್ಚಿಯನ್ನೇರಿ ನರ್ತಿಸಿದರು. ದೊಂಬಿ ಎಬ್ಬಿಸುವುದೇ ವಿರೋಧ ಪಕ್ಷದ ಉದ್ದೇಶವಾಗಿತ್ತಾದರೂ ಆಳುವ

ಪಕ್ಷದ ಶಾಸಕರ ಸಂಯಮದ ಮುಂದೆ ಅವರಾಟ ನಡೆಯಲಿಲ್ಲ.

ಧ್ವನಿಮತದಿಂದ ಸರ್ಕಾರ ಬಹುಮತ ಸಾಬೀತು ಮಾಡಿತ್ತು. ಆದರೆ ವಿರೋಧ ಪಕ್ಷಗಳು ರಾಜಭವನದತ್ತ ಮುಖಮಾಡಿದವು. ಸಂಜೆಯ ಹೊತ್ತಿಗೆ ರಾಜ್ಯದಲ್ಲಿ ರಾಜ್ಯಪಾಲರ ಆಡಳಿತವನ್ನು ಶಿಫಾರಸು ಮಾಡಿ ಕೇಂದ್ರಕ್ಕೆ ಪತ್ರ ರವಾನಿಸಿದ ರಾಜ್ಯಪಾಲರು ಅನಿರೀಕ್ಷಿತ ಕ್ರಮ ಕೈಗೊಂಡಿದ್ದರು. ವಿರೋಧಿ ಪಾಳಯದಲ್ಲಿ ಉಲ್ಲಾಸ, ಉತ್ಸಾಹ, ಸಂಭ್ರಮ ಮನೆಮಾಡಿತ್ತು.

ಆದರೆ ಕೇಂದ್ರ ಸರ್ಕಾರ ಆತಂಕದಲ್ಲಿತ್ತು. ಮಹಾರಾಷ್ಟ್ರದಂತಹ ಕಾಂಗ್ರೆಸ್ ಆಡಳಿತದ ರಾಜ್ಯಗಳ ಪರಿಸ್ಥಿತಿ ಅನುಕೂಲಕರವಾಗಿರಲಿಲ್ಲ. ಜೊತೆಗೆ ರಾಷ್ಟ್ರಪತಿ ಆಳ್ವಿಕೆ ಹೇರಿದಲ್ಲಿ ಕರ್ನಾಟಕದ ಜನಪ್ರಿಯ ಬಿಜೆಪಿ ಸರ್ಕಾರ ಮತ್ತೊಮ್ಮೆ ಹೆಚ್ಚಿನ ಬಹುಮತದಿಂದ ಅಧಿಕಾರಕ್ಕೆ ಬರುವ ಹೆದರಿಕೆಯೂ ಅದಕ್ಕಿತ್ತು. ಕೇಂದ್ರ ಸಚಿವ ಸಂಪುಟ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಲು ಹಿಂಜರಿದ ಪರಿಣಾಮವಾಗಿ ಒಂದೇ ವಾರದಲ್ಲಿ ಎರಡನೇ ಬಾರಿ ಬಹುಮತ ಸಾಬೀತು ಪಡಿಸುವಂತೆ ರಾಜ್ಯಪಾಲರು ಸರ್ಕಾರಕ್ಕೆ ಆದೇಶಿಸಿದರು.

**ಸ್ಪೀಕರ್ ಕ್ರಮ:** ರಾಜ್ಯಪಾಲರಿಗೆ ನೇರವಾಗಿ ಪತ್ರ ಬರೆಯುವ ಮೂಲಕ ಬಿಜೆಪಿ ಭಿನ್ನಮತೀಯರು ಹಾಗೂ ಪಕ್ಷೇತರ ಶಾಸಕರನ್ನು ಪಕ್ಷಾಂತರ ಕಾಯ್ದೆಯಡಿ ಅನರ್ಹಗೊಳಿಸಬೇಕೆಂಬ ಬೇಡಿಕೆಗನುಗುಣವಾಗಿ ಸ್ಪೀಕರ್ ಶ್ರೀ ಬೋಪಯ್ಯನವರು ಸಂವಿಧಾನದ ಚೌಕಟ್ಟಿನಲ್ಲಿ ಕ್ರಮಕೈಗೊಂಡರು. ಸಮಜಾಯಿಷಿ ನೀಡುವಂತೆ ಸ್ಪೀಕರ್ ನೀಡಿದ ಪತ್ರವನ್ನು ಶಾಸಕರ ವಿಳಾಸಕ್ಕೆ ಕಳುಹಿಸಲಾಯಿತು. ಶಾಸಕರ ಭವನದ ಅವರ ಕೊಠಡಿಗೂ ಅಂಟಿಸಲಾಯಿತು. ಆದರೆ ಶಾಸಕರು ವಿರೋಧಿ ನಾಯಕರ ಜೊತೆಗೂಡಿ ಸರ್ಕಾರ ಬೀಳಿಸುವ ಹುಮ್ಮಸ್ಸಿನಲ್ಲಿದ್ದರು.

ಸಂವಿಧಾನದ ವಿಧಿಗನುಗುಣವಾಗಿ ಸ್ಪೀಕರ್‌ರವರು ಭಿನ್ನಮತೀಯ ಬಿಜೆಪಿ ಶಾಸಕರು ಹಾಗೂ ಬಿಜೆಪಿಯೊಂದಿಗೆ ಗುರುತಿಸಿಕೊಂಡಿರುವ ಪಕ್ಷೇತರ ಶಾಸಕರನ್ನು ಅನರ್ಹಗೊಳಿಸಿ ಆದೇಶ ನೀಡಿದರು.

ಅಕ್ಟೋಬರ್ 14ರಂದು ನಡೆದ ವಿಶ್ವಾಸಮತ ಯಾಚನೆಯಲ್ಲಿ ಬಿಜೆಪಿ ಸರ್ಕಾರ 106–100ರ ಅಂತರದಲ್ಲಿ ಮತ್ತೊಮ್ಮೆ ಬಹುಮತ ಸಾಬೀತು ಪಡಿಸಿತು. ಈ ನಡುವೆ ಭಿನ್ನಮತೀಯರನ್ನು ಹಾಗೂ ಪಕ್ಷೇತರರನ್ನು ಅನರ್ಹಗೊಳಿಸಿದ ಸ್ಪೀಕರ್ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರತ್ಯೇಕವಾಗಿ ಪ್ರಶ್ನಿಸಲಾಗಿತ್ತು. ಎಲ್ಲರ ಕುತೂಹಲ ಕೆರಳಿಸಿದ್ದ ನ್ಯಾಯಾಲಯದ ದ್ವಿಸದಸ್ಯ ಬೆಂಚ್ ನೀಡಿದ ತೀರ್ಪಿನಲ್ಲಿ ಮುಖ್ಯನ್ಯಾಯಾಧೀಶ ಮಾನ್ಯ ಶ್ರೀ ಖೇಹರ್‌ರವರು 11 ಬಿಜೆಪಿ ಸದಸ್ಯರನ್ನು ಅನರ್ಹಗೊಳಿಸಿ ಆದೇಶ ನೀಡಿದ ಸ್ಪೀಕರ್ ತೀರ್ಪನ್ನು ಎತ್ತಿ ಹಿಡಿದಿದ್ದರೆ, ನ್ಯಾಕುಮಾರ್‌ರವರು ವ್ಯತಿರಿಕ್ತ ತೀರ್ಪು ನಿಡಿದ್ದರು.

ಹೀಗಾಗಿ ನ್ಯಾ. ವಿ.ಜಿ. ಸಭಾಹಿತರ ಮೂರನೆ ಬೆಂಚ್‌ಗೆ ಈ ಕೇಸನ್ನು ವರ್ಗಾಯಿಸಲಾಯಿತು. ನ್ಯಾ. ಸಭಾಹಿತರೂ ಸ್ಪೀಕರ್ ಆದೇಶವನ್ನು ಎತ್ತಿ ಹಿಡಿದು ತೀರ್ಪುನೀಡಿದ್ದಾರೆ. ಪಕ್ಷೇತರ ಶಾಸಕರ ಅನರ್ಹತೆಯ ವಿಚಾರ ಇನ್ನೂ ವಿಚಾರಣೆಯ ಹಂತದಲ್ಲಿದ್ದು ತೀರ್ಪು ಬರಬೇಕಿದೆ.

ಒಂದು ಕುಟುಂಬದಂತಿರಬೇಕಿದ್ದ ರಾಜ್ಯ ಬಿಜೆಪಿಯಲ್ಲಿ ಅಶಾಂತಿಯ ಸೆಳೆಯೊಂದನ್ನು ಹುಟ್ಟುಹಾಕಿದ ವಿರೋಧ ಪಕ್ಷಗಳು ಅನರ್ಹಗೊಂಡ ಶಾಸಕರನ್ನು ದಾರಿತಪ್ಪಿಸಿ ಅತಂತ್ರರನ್ನಾಗಿ ಮಾಡಿವೆ. ಸ್ವಂತ ವಿವೇಚನೆಯಿಲ್ಲದೆ ಹೇಳಿದವರ ಕುತಂತ್ರದ ಆಮೀಷಕ್ಕೆ ಬಿದ್ದು 15 ದಿನಗಳ ಚದುರಂಗದಾಟದಲ್ಲಿ ಪಾತಾಳಕ್ಕೆ ಕುಸಿದಿರುವ ಅನರ್ಹ ಶಾಸಕರು ಒಬ್ಬರನ್ನೊಬ್ಬರು ದೂರುವ ಹಂತ ತಲುಪಿದ್ದಾರೆ.

ಅಧಿಕಾರದ ತನ್ನ ಅವಧಿ ಮುಗಿಸಿ ಬಿಜೆಪಿಗೆ ಅವಕಾಶ ನೀಡುವಾಗಲೂ ಬೆನ್ನಿಗೆ ಚೂರಿ ಹಾಕಿ ವಚನ ಭ್ರಷ್ಟತೆ ಮೆರೆದ ಜೆಡಿಎಸ್, ಇದೀಗ ಮತ್ತೊಮ್ಮೆ ರಕ್ತರಹಿತ ಕ್ರಾಂತಿಗೆ ಹೊಂಚು ಹಾಕಿ ಎಡವಿ ಬಿದ್ದಿದೆ. ಪ್ರಜಾಪ್ರಭುತ್ವದ ಅಣಕವಾಡಿದೆ. ಜವಾಬ್ದಾರಿಯುತ ರಾಜಕೀಯ ಪಕ್ಷವಾಗಿ ತನ್ನ ನಡವಳಿಕೆಗಳನ್ನು ರೂಪಿಸಿಕೊಳ್ಳುವ ಸಂಸ್ಕೃತಿಯೇ ಆ ಪಕ್ಷಕ್ಕಿಲ್ಲ. ಕಾಂಗ್ರೆಸ್ಸಿಗೋ, ಅಧಿಕಾರವಿಲ್ಲದೆ ಚಡಪಡಿಸುವುದು ಅದರ ಜಾಯಮಾನ. ಇದೊಂದು ದೊಡ್ಡ ದುರಂತ.

ದೇಶದ ರಾಜಕೀಯ ಇತಿಹಾಸದ ಪುಟಗಳಲ್ಲಿ ಕುತಂತ್ರದ ಕರಾಳ ಅಧ್ಯಾಯವೊಂದನ್ನು ರಾಜ್ಯದ ಜೆಡಿಎಸ್ ಹಾಗೂ ಕಾಂಗ್ರೆಸ್ ಪಕ್ಷಗಳು ಭಿನ್ನಮತೀಯರ ಮೂಲಕ ಬರೆಸಿದೆ.

–ನಮ್ಮ ಪ್ರತಿನಿಧಿಯಿಂದ

# ವಿರೋಧ ಪಕ್ಷಗಳ ಪ್ರಜಾಪ್ರಭುತ್ವ ವಿರೋಧಿ ಧೋರಣೆಗೆ ಪ್ರತಿಭಟನೆ

ಬೆಳಗಾವಿ: ದಿನಾಂಕ: 19–10–2010ರಂದು ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳ ನಿವಾಸದ ಆವರಣದಲ್ಲಿ ಕಾಂಗ್ರೆಸ್ ನಾಯಕರು ನಡೆಸಿದ ಅಟ್ಟಹಾಸದ ವಿರೋಧವಾಗಿ ಬಿಜೆಪಿ ಬೆಳಗಾವಿ ಜಿಲ್ಲೆಯ ಧುರೀಣರು ಹಾಗೂ ಕಾರ್ಯಕರ್ತರು ಬೃಹತ್ ಪ್ರತಿಭಟನೆಯನ್ನು ಚನ್ನಮ್ಮಾ ವೃತ್ತದಲ್ಲಿ ನಡೆಸಿದರು. ಕಾರ್ಯಕ್ರಮದ ಮುಖಂಡತ್ವವನ್ನು ಮಹಾನಗರದ ಅಧ್ಯಕ್ಷರಾದ ಶ್ರೀ ರಾಘವೇಂದ್ರ ಪೂಜಾರ ವಹಿಸಿದ್ದರು.

ಮಂಡ್ಯ: ಗಣಿ ಮಾಫಿಯಾ ಹಣವನ್ನು ಬಳಸಿ ಆಡಳಿತ ರೂಢ ಬಿಜೆಪಿ ಸರ್ಕಾರವನ್ನು ಅಸ್ಥಿರಗೊಳಿಸಲು ಪ್ರತಿಪಕ್ಷ ನಾಯಕರು ಹುನ್ನಾರ ನಡೆಸುತ್ತಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಶ್ರೀ ಅಶ್ವತ್ಥ ನಾರಾಯಣ ಕಿಡಿಕಾರಿದರು.

ಬಿಜೆಪಿ ವತಿಯಿಂದ ನಗರದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಆಯೋಜಿಸಲಾಗಿದ್ದ ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಪಾಂಡವಪುರ: ವಿರೋಧ ಪಕ್ಷದ ನಾಯಕ ಶ್ರೀ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ಮುಖಂಡರು ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಅವರ ನಿವಾಸದೆದುರು ಪ್ರತಿಭಟನೆ ನಡೆಸಿರುವುದನ್ನು ಖಂಡಿಸಿ ಬಿಜೆಪಿ ಕಾರ್ಯಕರ್ತರು ಪಟ್ಟಣದಲ್ಲಿ ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು.

ಪಟ್ಟಣದ ಡಾ. ರಾಜ್‌ಕುಮಾರ್ ವೃತ್ತದಲ್ಲಿ ಜಮಾಯಿಸಿದ ನೂರಾರು ಮಂದಿ ಕಾರ್ಯಕರ್ತರು, ಶ್ರೀ ಸಿದ್ದರಾಮಯ್ಯ, ಶ್ರೀ ದೇಶಪಾಂಡೆ, ಶ್ರೀ ಡಿ.ಕೆ. ಶಿವಕುಮಾರ್ ಮತ್ತಿತರರ ವಿರುದ್ಧ ಘೋಷಣೆಗಳನ್ನು ಕೂಗಿದರು.

ಜಿಲ್ಲಾ ವಕ್ತಾರ ಶ್ರೀ ಎಚ್.ಎನ್. ಮಂಜುನಾಥ್ ಮಾತನಾಡಿ, ರಾಜ್ಯದಲ್ಲಿ ಶಾಸಕರ ಆಪರೇಷನ್ ಮಾಡಿದ್ದು ಕಾಂಗ್ರೆಸ್‌ನವರೇ ಹೊರತು ಬಿಜೆಪಿಯವರಲ್ಲ ಎಂದು ದೂರಿದರು.

# ಗೆದ್ದ ಬಿಜೆಪಿ, ಸೋತ ವಿರೋಧ ಪಕ್ಷಗಳು

ಬಿಜೆಪಿ ಸರ್ಕಾರದ ಪತನ ತಂತ್ರಗಾರಿಕೆಯಲ್ಲಿ ಎರಡನೇ ಬಾರಿಯೂ ಹೆಜ್ಜೆ ತಪ್ಪಿರುವ ಮಾಜಿ ಮುಖ್ಯಮಂತ್ರಿ ಶ್ರೀ ಎಚ್.ಡಿ. ಕುಮಾರಸ್ವಾಮಿ ಮತ್ತೊಮ್ಮೆ ರಾಜಕೀಯ ಕಳಂಕವನ್ನು ಮೈಮೇಲೆ ಎಳೆದುಕೊಂಡಿದ್ದಾರೆ. ಅವರನ್ನು ನಂಬಿಕೊಂಡಿದ್ದ ಬಿಜೆಪಿ ಭಿನ್ನರು ಮತ್ತು ಐವರು ಪಕ್ಷೇತರರ ರಾಜಕೀಯ ಭವಿಷ್ಯವು ಅತಂತ್ರವಾಗಿದೆ. ತಂತ್ರಕ್ಕೆ ಪ್ರತಿತಂತ್ರ ರೂಪಿಸಿದ ಶ್ರೀ ಯಡಿಯೂರಪ್ಪ ಗೆದ್ದಿದ್ದಾರೆ. ರಾಜಕೀಯ ಲೆಕ್ಕಾಚಾರ ಸಂಪೂರ್ಣ ತಲೆಕೆಳಗಾಗಿ ಶ್ರೀ ಕುಮಾರಸ್ವಾಮಿ ಜಾರಿಬಿದ್ದಿದ್ದಾರೆ.



28 ಶಾಸಕರ ಬಲ ಹೊಂದಿರುವ ಜೆಡಿಎಸ್ ಕಳೆದ ಎರಡೂ ಕಾಲು ವರ್ಷಗಳ ಬಿಜೆಪಿ ಅಧಿಕಾರಾವಧಿಯಲ್ಲಿ ಸರ್ಕಾರದ ಪತನದ ಕನಸುಕಂಡಿದ್ದು ಹಲವುಬಾರಿ. ಕಳೆದ ಬಾರಿ ಸರ್ಕಾರ ಪತನಕ್ಕೆ ತನ್ನ ಶಕ್ತಿಯನ್ನು ಧಾರೆಯೆರೆಯಲು ಮುಂದಾಗಿತ್ತು. ಆದರೆ ಬಿಜೆಪಿ ಈ ಸಂಕಷ್ಟವನ್ನು ಸುಧಾರಿಸಿಕೊಂಡು ಎದ್ದುನಿಂತಿತ್ತು. ಈ ಬಾರಿಯಂತೂ ಬಿಜೆಪಿಯಲ್ಲಿ ಬೆಂಕಿಗೆ ಶ್ರೀ ಕುಮಾರಸ್ವಾಮಿ ಚೆನ್ನಾಗಿಯೇ ತುಪ್ಪ ಸುರಿದರು, ಬೆಂಕಿ ಢಾಳಾಗಿ ಉರಿಯಿತು. ಆದರೆ ಕೊನೆಗೆ ಉಳಿದಿದ್ದು ಬೂದಿ ಎನ್ನುವಂತೆ ಬಿಜೆಪಿಗೆ ಎದುರಾಗಿದ್ದ ಸವಾಲು ಕರಗಿ ಸರ್ಕಾರ ಮತ್ತೆ ಸ್ಥಿರತೆಯತ್ತ ಹೊರಳಿದೆ. ನಾಲ್ಕೇ ದಿನದ ಅವಧಿಯಲ್ಲಿ ಎರಡು ಬಾರಿ ವಿಶ್ವಾಸಮತ ಗೆದ್ದ ಶ್ರೀ ಯಡಿಯೂರಪ್ಪ, ಶ್ರೀ ಕುಮಾರಸ್ವಾಮಿಯತ್ತ ನೋಡಿ ನಗೆ ಬೀರಿದ್ದಾರೆ.

ಬಿಜೆಪಿಯ ಭಿನ್ನಮತದ ಅಧ್ಯಾಯವನ್ನು ಆ ಪಕ್ಷದ ಆಂತರಿಕ ವಿಚಾರ ಎಂದು ಶ್ರೀ ಕುಮಾರಸ್ವಾಮಿ ಹೇಳಿದರೂ ಅವರ ಪಕ್ಷದ ನೇರ ಆಟವನ್ನು ರಾಜ್ಯದ ಜನತೆ ಸ್ಪಷ್ಟವಾಗಿಯೇ ಕಂಡಿದ್ದಾರೆ. ಜೆಡಿಎಸ್ ಗುರಿಸಾಧನೆಗೆ ಇಟ್ಟುಕೊಂಡಿದ್ದ 2 ಅಂಶಗಳೆಂದರೆ, ಬಿಜೆಪಿ ಸರ್ಕಾರವನ್ನು ಪತನಗೊಳಿಸುವುದು, ನಂತರ ಸಾಂದರ್ಭಿಕ ರಾಜಕಾರಣದ ಲಾಭ ಪಡೆದು ಪರ್ಯಾಯ ಸರ್ಕಾರ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿ, ದೊಡ್ಡಪಾಲು ಪಡೆಯುವುದು. ಇವೆರಡೂ ಸಾಧ್ಯವಾಗದೇ ಮಧ್ಯಂತರ ಚುನಾವಣೆ ಎದುರಾದರೇ, ಚುನಾವಣೆ ನಂತರ ಸೃಷ್ಟಿಯಾಗಬಹುದಾದ ಅತಂತ್ರ ವಿಧಾನಸಭೆ ಸ್ಥಿತಿಯಲ್ಲಿ ಮತ್ತೆ ನಿರ್ಣಾಯಕ ಸ್ಥಾನದಲ್ಲಿ ರಾಜಕೀಯ ಆಟವಾಡಿ ಗುರಿ ಈಡೇರಿಸಿಕೊಳ್ಳುವುದು.

ಈ ಅಪಾಯಕಾರಿ ರಾಜಕೀಯ ಆಟ ಆರಂಭಿಸಿದ ಜೆಡಿಎಸ್‌ಗೆ, ಪರ್ಯಾಯ ಸರ್ಕಾರ ರಚನೆ 2ನೇ ಆದ್ಯತೆಯಾಗಿತ್ತು. ಮೊದಲು ಬಿಜೆಪಿ ಸರ್ಕಾರ ಉರುಳಬೇಕು. ನಂತರ ಉದ್ಭವಿಸುವ ರಾಜಕೀಯ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಸಖ್ಯದಲ್ಲಿ ಪರ್ಯಾಯ ಸರ್ಕಾರದಲ್ಲಿ ದೊಡ್ಡ ಶಕ್ತಿಯಾಗಬೇಕು ಎನ್ನುವುದು ರಾಜ್ಯ ರಾಜಕಾರಣದ ಪ್ರಮುಖ ರಾಜಕೀಯ ಪಕ್ಷಗಳ ಪೈಕಿ ಚಿಕ್ಕದಾಗಿರುವ ಜೆಡಿಎಸ್‌ನ ದೊಡ್ಡ ಗುರಿ. ಏಕೆಂದರೆ ಪರ್ಯಾಯ ಸರ್ಕಾರ ರಚನೆ ಸುಲಭದ ತುತ್ತಲ್ಲ ಎನ್ನುವುದು ಜೆಡಿಎಸ್ ವರಿಷ್ಠರಿಗೆ ಗೊತ್ತಿಲ್ಲದ ವಿಷಯವಲ್ಲ. ಜೆಡಿಎಸ್ ಬಳಿ ಇರುವುದು ಸ್ವಂತದ್ದು ಎಂದರೆ 28 ಸ್ಥಾನ. ಬಿಜೆಪಿ ಭಿನ್ನಮತೀಯರ ಸಂಖ್ಯೆ 20 ಆದರೂ ಬಹುಮತ ಸಾಧ್ಯವಿರಲಿಲ್ಲ. ಪರ್ಯಾಯ ಸರ್ಕಾರ ರಚನೆಗೆ ಕಾಂಗ್ರೆಸ್ ವರಿಷ್ಠರು ಸಮ್ಮತಿಸದೇ ಹೋದದ್ದು ಶ್ರೀ ಕುಮಾರಸ್ವಾಮಿಗೆ ಎದುರಾದ ಮೊದಲ ಸೋಲು. ರಾಜ್ಯಪಾಲರ ವರದಿ ಒಪ್ಪಿಕೊಂಡು ಸರ್ಕಾರದ ವಜಾಕ್ಕೆ ಮುಂದಾಗದೇ ಇದ್ದದ್ದು 2ನೇ ಸೋಲು.

ಆರಂಭದಿಂದಲೂ ಜೆಡಿಎಸ್‌ನ ಮೊದಲ ಗುರಿಯಾಗಿದ್ದು ಬಿಜೆಪಿ ಸರ್ಕಾರದ ಪತನ. ಮೊದಲು ಸರ್ಕಾರ ಬೀಳಲಿ ಆಮೇಲೆ ನೋಡಿಕೊಳ್ಳೋಣ ಎನ್ನುವ ಲೆಕ್ಕಾಚಾರ. ಪರ್ಯಾಯ ಸರ್ಕಾರ ರಚನೆಯಾಗದಿದ್ದರೂ ಮಧ್ಯಂತರ ಚುನಾವಣೆ ಎದುರಿಸೋಣ ಎನ್ನುವ ಹುಂಬು ಧೈರ್ಯ. ಆದ್ದರಿಂದಲೇ ಬಿಜೆಪಿ ಬೆಂಕಿಗೆ ತುಪ್ಪ ಸುರಿದ ಜೆಡಿಎಸ್, ತೆರೆಮರೆಯನ್ನು ಸರಿಸಿ ಇಣುಕಿ ಪ್ರೇಕ್ಷಕರೆಂಬ ರಾಜ್ಯದ ಜನರ ಮುಂದೆ ತನ್ನ ಪಾತ್ರವನ್ನು ಮುಚುಗರವಿಲ್ಲದೇ, ಖಚಿತಪಡಿಸುವ ಉತ್ಸಾಹ ತೋರಿತು. ಕಳೆದ ಹಲವು ದಿನಗಳಲ್ಲಿ ಶ್ರೀ ಕುಮಾರಸ್ವಾಮಿ ತಮ್ಮ ನಡೆ, ನುಡಿಯಲ್ಲಿ ಸರ್ಕಾರದ ಪತನದ ಸೂತ್ರಧಾರರಾಗಿ ಕಾಣಿಸಿಕೊಳ್ಳತೊಡಗಿದ್ದರು.

## ಜೆಡಿಎಸ್ ಕಾರ್ಯತಂತ್ರ

ಬಿಜೆಪಿ ಸಮಸ್ಯೆ ಇತ್ತೀಚಿನ ಸಂಪುಟ ಪುನರ್‌ರಚನೆ ಕಸರತ್ತಿನಲ್ಲಿ ಇನ್ನಷ್ಟು ಜೋರಾದಾಗಲೇ ಜೆಡಿಎಸ್ ಲೆಕ್ಕಾಚಾರ ಆರಂಭವಾಗಿತ್ತು. ಬಿಜೆಪಿ ಪತನದ ಕನಸು ಸೃಷ್ಟಿಯಾಗಿತ್ತು. ಶ್ರೀ ಕುಮಾರಸ್ವಾಮಿ ಹಾಗೂ ಸಹೋದರ ಶ್ರೀ ಎಚ್.ಡಿ. ರೇವಣ್ಣ ಸರ್ಕಾರದ ವಿರುದ್ಧ ಆರೋಪಗಳ ಸುರಿಮಳೆಗೈಯ್ದರು. ಇಂತಹ ಗಂಭೀರ ಆರೋಪಗಳ ಮೂಲಕ ಒಂದು ಕಡೆ ದೊಡ್ಡ ಗೊಂದಲ ಸೃಷ್ಟಿಸುವುದು, ಇನ್ನೊಂದೆಡೆ ಭಿನ್ನಮತಕ್ಕೆ ತುಪ್ಪ ಸುರಿದು ಸರ್ಕಾರದ ಬುಡವನ್ನು ಅಲ್ಲಾಡಿಸುವುದು ಜೆಡಿಎಸ್‌ನ ಕಾರ್ಯತಂತ್ರವಾಗಿತ್ತು, ಚೆನ್ನೈ ಸೇರಿದ ಬಿಜೆಪಿ ಭಿನ್ನಮತೀಯ ಶಾಸಕರನ್ನು ಜೆಡಿಎಸ್‌ನ ಕೆಲವು ನಾಯಕರು ಭೇಟಿಯಾಗುವ ಮೂಲಕ ಜೆಡಿಎಸ್, ಬಿಜೆಪಿ ಭಿನ್ನರ ಜೊತೆ ನೇರ ಸಂಪರ್ಕ ಬೆಳೆಸಿದ್ದು ಸ್ಪಷ್ಟವಾಯಿತು. ಶ್ರೀ ಯಡಿಯೂರಪ್ಪ ಸರ್ಕಾರದಲ್ಲಿ ಪಕ್ಷೇತರ ಸಚಿವರ ಬೇಡಿಕೆಗಳನ್ನು

ಸ್ವತಃ ಶ್ರೀ ಕುಮಾರಸ್ವಾಮಿ ಮಾಧ್ಯಮದ ಮುಂದೆ ಪಟ್ಟಿಮಾಡುವ ಮೂಲಕ ಅವರ ಪರ ವಕಾಲತ್ತುವಹಿಸತೊಡಗಿದ್ದರು. ಆ ಮೂಲಕ ಭಿನ್ನಮತೀಯರಿಗೆ ತಮ್ಮ ಅನುಕಂಪದ ಸಂದೇಶ ರವಾನಿಸಿದರು. ಪರ್ಯಾಯ ಸರ್ಕಾರದಲ್ಲಿ ಬಿಜೆಪಿ ಭಿನ್ನಮತೀಯರಿಗೆ ಆಕರ್ಷಕ ಖಾತೆಗಳನ್ನು ಕೊಡುವ ಭರವಸೆಗಳನ್ನು ಜೆಡಿಎಸ್ ಪಾಳಯದಿಂದ ನೀಡಲಾಗಿತ್ತು ಎಂದು ಮೂಲಗಳು ಹೇಳುತ್ತವೆ. ಸ್ವತಃ ಶ್ರೀ ಕುಮಾರಸ್ವಾಮಿಯೇ ಗೋವಾಕ್ಕೆ ತೆರಳಿ ಭಿನ್ನಮತೀಯರ ಜೊತೆ ಮಾತುಕತೆ ನಡೆಸಿದರು.

## ಗೆಲುವಿನ ಹಾದಿ

ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಕೇವಲ ಮೂರೇ ದಿನಗಳ ಅಂತರದಲ್ಲಿ ಸರ್ಕಾರವೊಂದು ಎರಡು ಬಾರಿ ವಿಶ್ವಾಸಮತ ಯಾಚಿಸಿ ಜಯಗಳಿಸಿದ ಇತಿಹಾಸಕ್ಕೆ ರಾಜ್ಯ ವಿಧಾನಸಭೆ ಸಾಕ್ಷಿಯಾಯಿತು. ಕೇವಲ ಎರಡು ದಿನಗಳ ಹಿಂದೆ ಅಲ್ಲೋಲಕಲ್ಲೋಲದ ಮಧ್ಯೆ ವಿಶ್ವಾಸಮತ ಯಾಚನೆ ನಡೆದಿತ್ತು. ಆದರೆ ಅದಕ್ಕೆ ತದ್ವಿರುದ್ಧ ಎಂಬಂತೆ 2ನೇ ಬಾರಿ ಅದು ಅತ್ಯಂತ ಶಾಂತಿಯುತವಾಗಿ ನಡೆಯಿತು. ವಿಶ್ವಾಸಮತದ ನಿರ್ಣಯದ ಪರವಾಗಿ ಬಿಜೆಪಿಯ 105 ಶಾಸಕರು ಓರ್ವ ಪಕ್ಷೇತರ ಶಾಸಕ ಮತ ಚಲಾಯಿಸಿದರೆ ವಿರುದ್ಧವಾಗಿ ಕಾಂಗ್ರೆಸ್‌ನ 73, ಜೆಡಿಎಸ್‌ನ 27 ಸದಸ್ಯರು ಮತ ಚಲಾಯಿಸಿದರು. ಹೀಗಾಗಿ ವಿಶ್ವಾಸಮತ 2ನೇ ಬಾರಿಗೆ ಸರ್ಕಾರದ ಪರವಾಯಿತು.

ಮೂರು ದಿನಗಳ ಹಿಂದಷ್ಟೇ ನಡೆದ ವಿಧಾನಸಭೆಯ ಅಧಿವೇಶನದಲ್ಲಿ ರಾಜ್ಯಪಾಲರ ಸೂಚನೆ ಅನುಸಾರ ವಿಶ್ವಾಸಮತಗಳಿಸಿದ್ದ ಸರ್ಕಾರ, ರಾಜಕೀಯ ವಿದ್ಯಮಾನಗಳ ಹಿನ್ನಲೆಯಲ್ಲಿ ಮತ್ತೆ ರಾಜ್ಯಪಾಲರ ಸೂಚನೆಗನುಗುಣವಾಗಿ ಪುನಃ ವಿಧಾನಸಭೆ ವಿಶೇಷ ಅಧಿವೇಶನದಲ್ಲಿ ಎರಡನೇ ಬಾರಿಗೆ ವಿಶ್ವಾಸಮತ ಯಾಚಿಸಿದ್ದು ಅದರಲ್ಲೂ ಗೆಲುವು ಪಡೆಯಿತು.

ಇದರೊಂದಿಗೆ ರಾಜ್ಯದಲ್ಲಿನ ಬಿಜೆಪಿ ಸರ್ಕಾರವನ್ನು ಉರುಳಿಸಲು ಜೆಡಿಎಸ್ ಜೊತೆ ಸೇರಿ ಕಾಂಗ್ರೆಸ್ ಪಕ್ಷ ನಡೆಸಿದ ರಾಜಕೀಯ ಕಾರ್ಯತಂತ್ರಕ್ಕೆ ಸೋಲುಂಟಾದಂತಾಗಿದೆ.

ಸದನದಲ್ಲಿ ವಿಶ್ವಾಸಮತದ ಅಗ್ನಿಪರೀಕ್ಷೆಯಲ್ಲಿ ಸರ್ಕಾರ ತೇರ್ಗಡೆಯಾಗಿರುವ ಹಿನ್ನಲೆಯಲ್ಲಿ ಸಂವಿಧಾನದ ರೀತ್ಯ ಸರ್ಕಾರ ಮುಂದಿನ ಆರು ತಿಂಗಳವರೆಗೆ ಸದನದಲ್ಲಿ ವಿಶ್ವಾಸ ಮತ ಯಾಚಿಸುವಂತಿಲ್ಲ ಅಥವಾ ಸರ್ಕಾರದ ವಿರುದ್ಧ ಪ್ರತಿಪಕ್ಷಗಳು ಅವಿಶ್ವಾಸ ಮಂಡಿಸುವಂತಿಲ್ಲ. ಹೀಗಾಗಿ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಅಪಾಯದಿಂದ ಪಾರಾದಂತಾಗಿದೆ.

ವಿಧಾನಸಭೆಯಲ್ಲಿ ಶ್ರೀ ಯಡಿಯೂರಪ್ಪ ಸರ್ಕಾರಕ್ಕೆ ಸದನದ ವಿಶ್ವಾಸಮತ ಕೋರುವ ನಿರ್ಣಯವನ್ನು ಮಂಡಿಸಿದರು.

ಮೊದಲು ಆಡಳಿತ ಪಕ್ಷದ ಸದಸ್ಯರು ಧ್ವನಿಮತದ ಮೂಲಕ ನಿರ್ಣಯವನ್ನು ಬೆಂಬಲಿಸಿದರು. ಈ ಹಂತದಲ್ಲಿ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ನಿರ್ಣಯವನ್ನು ಸದನದಲ್ಲಿ ಮತಕ್ಕೆ ಹಾಕಬೇಕೆಂದು ಒತ್ತಾಯಿಸಿದ್ದರು.

ಈ ಹಿನ್ನೆಲೆಯಲ್ಲಿ ಸಭಾಧ್ಯಕ್ಷ ಕೆ.ಜಿ. ಬೋಪಯ್ಯ ಸದನದಲ್ಲಿ ಹಾಜರಿದ್ದ ಸದಸ್ಯರ ಸಂಖ್ಯೆ ಆಧರಿಸಿ ನಿರ್ಣಯವನ್ನು ಮತಕ್ಕೆ ಹಾಕಿದರು. ಮೊದಲು ಆಡಳಿತ ಪಕ್ಷದ ಸಾಲಿನಲ್ಲಿ ಸದಸ್ಯರು ಎದ್ದು ನಿಂತು ನಿರ್ಣಯಕ್ಕೆ ಬೆಂಬಲ ಸೂಚಿಸಿದರು. ನಂತರ ಪ್ರತಿಪಕ್ಷದ ಸದಸ್ಯರು ಎದ್ದು ನಿಂತು ನಿರ್ಣಯವನ್ನು ವಿರೋಧಿಸಿದರು. ಈ ಹಂತದಲ್ಲಿ ನಿರ್ಣಯದ ಪರ ಹಾಗೂ ವಿರುದ್ಧ ಇರುವ ಸದಸ್ಯರನ್ನು ಕ್ರಮವಾಗಿ ಎಣಿಕೆ ಮಾಡಲಾಯಿತು.

ಈ ಪ್ರಕ್ರಿಯೆ ಮುಗಿದ ನಂತರ ಸಭಾಧ್ಯಕ್ಷ ಬೋಪಯ್ಯ, ನಿರ್ಣಯದ ಪರವಾಗಿ 106 ಮತಗಳು ಹಾಗೂ ನಿರ್ಣಯದ ವಿರುದ್ಧವಾಗಿ 100 ಮತಗಳು ಬಂದಿದ್ದು ವಿಶ್ವಾಸ ಮತ ಕೋರಿ ಸದನದಲ್ಲಿ ಮುಖ್ಯಮಂತ್ರಿಗಳು ಮಂಡಿಸಿದ್ದ ಪ್ರಸ್ತಾಪ ಅಂಗೀಕೃತವಾಗಿದೆ ಎಂದು ಪ್ರಕಟಿಸುವ ಮೂಲಕ ಸರ್ಕಾರ ವಿಶ್ವಾಸಮತ ಗೆದ್ದಿರುವುದನ್ನು ಬಹಿರಂಗ ಪಡಿಸಿದರು.

### ಜೆಡಿಎಸ್ ಲೆಕ್ಕಾಚಾರ

ಘಟನಾವಳಿಗಳು ಪ್ರತಿ ದಿನ ಬದಲಾಗತೊಡಗಿತು. ಕುಮಾರಸ್ವಾಮಿ ಲೆಕ್ಕಾಚಾರದಂತೆ ಯಾವುದೂ ಫಲಿಸಲಿಲ್ಲ. ಐವರು ಪಕ್ಷೇತರರು 11 ಮಂದಿ ಬಿಜೆಪಿ ಭಿನ್ನರನ್ನು ಸ್ಪೀಕರ್ ಅನರ್ಹಗೊಳಿಸಿದ ಪ್ರಕರಣ ಜೆಡಿಎಸ್ ಲೆಕ್ಕಾಚಾರವನ್ನು ದಿಕ್ಕು ತಪ್ಪಿಸಿತು. ಧ್ವನಿಮತದಲ್ಲಿ ಶ್ರೀ ಯಡಿಯೂರಪ್ಪ ವಿಶ್ವಾಸಮತ ಗೆದ್ದರೂ ಜೆಡಿಎಸ್‌ನ ಆತ್ಮವಿಶ್ವಾಸ ಕುಂದಿರಲ್ಲಿಲ್ಲ ವಿಶ್ವಾಸಮತ ಯಾಚನೆಯ ಕ್ರಮಬದ್ಧತೆ ಬಗ್ಗೆ ತಕರಾರು ತೆಗೆದ ಜೆಡಿಎಸ್‌ಗೆ ರಾಜ್ಯಪಾಲರು ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರುವಂತೆ ವರದಿ ಕಳುಹಿಸಿದ್ದು ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದಂತೆ ಆಗಿತ್ತು. ಆದರೆ ಕೇಂದ್ರ ಸರ್ಕಾರ ಈ ವರದಿ ಒಪ್ಪಿಕೊಳ್ಳದೇ ಹೋದದ್ದು, ಶ್ರೀ ಯಡಿಯೂರಪ್ಪ ಅವರಿಗೆ ವಿಶ್ವಾಸಮತ ಯಾಚನೆಗೆ ರಾಜ್ಯಪಾಲರು ಅವಕಾಶ ಮಾಡಿಕೊಟ್ಟ ಕ್ರಮದಿಂದ ಜೆಡಿಎಸ್ ಕಂಗೆಟ್ಟಿತು.

ಶ್ರೀ ಯಡಿಯೂರಪ್ಪ ಎರಡನೇ ಬಾರಿ ವಿಶ್ವಾಸಮತ ಗೆದ್ದಿದ್ದಾರೆ. ಜೆಡಿಎಸ್ ಸಾಲಿನಲ್ಲಿ ಚನ್ನಪಟ್ಟಣ ಶಾಸಕ ಅಶ್ವತ್ಥ್ ಗೈರು ಹಾಜರಾಗಿ ಸಣ್ಣ ಆಘಾತ ನೀಡಿದ್ದಾರೆ. ಒಟ್ಟಾರೆ ರಾಜಕೀಯ ವಿದ್ಯಮಾನದಲ್ಲಿ ಜೆಡಿಎಸ್ ನಂಬಿಕೊಂಡಿದ್ದ ಪಕ್ಷೇತರರು ಮತ್ತು ಬಿಜೆಪಿ ಭಿನ್ನರು ಸೇರಿ 16 ಮಂದಿ ಸ್ಥಿತಿ ತ್ರಿಶಂಕು ಸ್ವರ್ಗದಂತಾಗಿದೆ. ಪರ್ಯಾಯದ ಅವರ ಕನಸುಗಳು ತಿರುಕನ ಕನಸಾಗಿ ಉಳಿದಿದೆ. ಅವರಿಗೆ ಕುಮಾರಸ್ವಾಮಿ ಯಾವ ಸಮಧಾನ ಹೇಳುತ್ತಾರೋ ಗೊತ್ತಿಲ್ಲ ಈ ಅಪಾಯಕಾರಿ ಆಟದಲ್ಲಿ ಕುಮಾರಸ್ವಾಮಿ ಸೋತಿದ್ದಾರೆ.

ಇದಕ್ಕೂ ಮುನ್ನ ಸದನ ಬೆಳಿಗ್ಗೆ 10-45 ಗಂಟೆಗೆ ಸಮಾವೇಶಗೊಂಡಿತು. ಸದಸ್ಯರ ಸಮಾವೇಶಕ್ಕಾಗಿ ಬಾರಿಸುವ

ಕೋರಂ ಗಂಟೆ ಸದ್ದು ಮಾಡುವ ಮುನ್ನವೆ ಆಡಳಿತ ಹಾಗೂ ಪ್ರತಿಪಕ್ಷದ ಸದಸ್ಯರು ಸದನಕ್ಕೆ ಹಾಜರಾಗಿ ತಮಗೆ ನಿಗದಿ ಪಡಿಸಿದ್ದ ಆಸನಗಳಲ್ಲಿ ಕುಳಿತರು. ಪಕ್ಷಾಂತರ ನಿಷೇಧ ಕಾಯ್ದೆ ಉಲ್ಲಂಘನೆಯ ಹಿನ್ನಲೆಯಲ್ಲಿ ಸದನದ ಸದಸ್ಯತ್ವದಿಂದ ಐವರು ಪಕ್ಷೇತರರು ಹಾಗೂ 11 ಮಂದಿ ಬಿಜೆಪಿ ಶಾಸಕರು ಅನರ್ಹಗೊಂಡಿದ್ದರಿಂದಾಗಿ ಸದನದಲ್ಲಿನ ಹಿಂದಿನ ಸಾಲುಗಳ ಕುರ್ಚಿಗಳು ಖಾಲಿಯಾಗಿ ಕಂಡು ಬಂದವು.

ಇನ್ನುಳಿದಂತೆ ಜೆಡಿಎಸ್ ನಿಂದ ಚನ್ನಪಟ್ಟಣ ಶಾಸಕ ಶ್ರೀ ಅಶ್ವಥ್ ಹಾಗೂ ಬಿಜೆಪಿಯ ಶಾಸಕ ಶ್ರೀ ಮಾನಪ್ಪ ವಜ್ಜಲ್ ಸದನಕ್ಕೆ ಗೈರು ಹಾಜರಾಗಿದ್ದರು. ಹೀಗಾಗಿ ಸದನದ ಒಟ್ಟು 224 ಸದಸ್ಯರ ಪೈಕಿ 206 ಮಂದಿ ಮಾತ್ರ ಹಾಜರಾಗಿ ಕಲಾಪದಲ್ಲಿ ಪಾಲ್ಗೊಂಡರು. ಕಾಂಗ್ರೆಸ್ ಪಕ್ಷದ 73 ಶಾಸಕರು ಜಾತ್ಯತೀತ ಜನತಾದಳ 27 ಶಾಸಕರು ವಿಶ್ವಾಸಮತ ಕೋರುವ ನಿರ್ಣಯವನ್ನು ವಿರೋಧಿಸಿದರೆ, ಬಿಜೆಪಿಗೆ ಬೆಂಬಲ ವ್ಯಕ್ತ ಪಡಿಸಿದ್ದ ಪಕ್ಷೇತರ ಶಾಸಕ ಶ್ರೀ ವರ್ತೂರು ಪ್ರಕಾಶ್ ಹಾಗೂ ಬಿಜೆಪಿ 105 ಸದಸ್ಯರು ನಿರ್ಣಯದ ಪರವಾಗಿ ಮತ ಚಲಾಯಿಸುವ ಮೂಲಕ ಸರ್ಕಾರವನ್ನು ಅಪಾಯದಿಂದ ಪಾರು ಮಾಡಿದರು. ನಾಮಕರಣ ಸದಸ್ಯ ಶ್ರೀ ಡೆರಿಕ್ ಫುಲಿನ್‌ಫಾ ಕೂಡಾ ನಿರ್ಣಯದ ಪರ ತನ್ನ ಮತ ಚಲಾಯಿಸಿದರು.

ಸಭಾಧ್ಯಕ್ಷರ ಸೂಚನೆಗನುಸಾರ ಮುಖ್ಯಮಂತ್ರಿ ತಮ್ಮ ನೇತೃತ್ವದ ಸರ್ಕಾರದಲ್ಲಿ ಸದನದ ವಿಶ್ವಾಸಮತವನ್ನು ಯಾಚಿಸುವುದಾಗಿ ನಿರ್ಣಯ ಮಂಡಿಸಿದರೆ ಮತ್ತೆ ಶ್ರೀ ಸಿದ್ದರಾಮಯ್ಯ ಸೇರಿದಂತೆ ಪ್ರತಿಪಕ್ಷದ ಕೆಲವು ಸದಸ್ಯರು ಆಕ್ಷೇಪ ಎತ್ತಿ ನಿರ್ಣಯದ ಮೇಲೆ ಚರ್ಚೆ ನಡೆಯಬೇಕೆಂದು ಆಗ್ರಹಿಸಿದರು. ಈ ಬೇಡಿಕೆಯನ್ನು ಮತ್ತೆ ತಿರಸ್ಕರಿಸಿದ ಸಭಾಧ್ಯಕ್ಷರು, ನಿರ್ಣಯವನ್ನು ಧ್ವನಿ ಮತಕ್ಕೆ ಹಾಕಿದರು. ನಂತರ ಸದಸ್ಯರ ತಲೆ ಎಣಿಕೆಗೆ ಪ್ರತಿಪಕ್ಷದ ಕಡೆಯಿಂದ ಒತ್ತಾಯ ಕೇಳಿಬಂದಾಗ ಮತ್ತೆ ಸದನದ ಕೋರಂ ಗಂಟೆ ಸದ್ದು ಮಾಡಿತು. ಕೆಲ ನಿಮಿಷಗಳ ನಂತರ ಸದಸ್ಯರ ಎಣಿಕೆ (ತಲೆ ಎಣಿಕೆ) ನಡೆಸಲಾಯಿತು. ವಿಧಾನಸಭೆ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಶ್ರೀ ಧ್ರುವಕುಮಾರ್ ಸದಸ್ಯರ ತಲೆ ಎಣಿಕೆ ಪ್ರಕ್ರಿಯೆ ನಡೆಸಿದರು. ಅನಾರೋಗ್ಯ ಪೀಡಿತರಾಗಿದ್ದೂ ಸದನಕ್ಕೆ ಹಾಜರಾಗಿದ್ದ ಬಿಜೆಪಿ ಶಾಸಕ ಶ್ರೀ ಈಶಣ್ಣ ಗುಳಣ್ಣನವರ್‌ಗೆ ಕುಳಿತೇ ಮತ ಚಲಾಯಿಸಲು ಅವಕಾಶ ಮಾಡಿಕೊಡಲಾಯಿತು. ಸುಮಾರು 30 ನಿಮಿಷಗಳ ಪ್ರಕ್ರಿಯೆ ಪೂರ್ಣಗೊಂಡ ನಂತರ ಸಭಾಧ್ಯಕ್ಷ ಬೋಪಯ್ಯ ವಿಶ್ವಾಸಮತ ಕೋರುವ ನಿರ್ಣಯ ಅಂಗೀಕಾರವಾಗಿದೆ ಎಂದೂ ಪ್ರಕಟಿಸಿ ಸದನದ ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು.

## ಬಿಜೆಪಿ ವಲಯದಲ್ಲಿ ಸಂಭ್ರಮ

ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪ 2ನೇ ಬಾರಿ ವಿಶ್ವಾಸಮತ ಗೆಲ್ಲುತ್ತಿದ್ದಂತೆ ಬಿಜೆಪಿ ಪಾಳಯ ಸಂಭ್ರಮದಲ್ಲಿ ತೇಲಾಡಿತು.

ಬೆಳಗ್ಗೆ ವಿಧಾನಸಭೆಯಲ್ಲಿಯೇ ಆಡಳಿತ ಬಿಜೆಪಿ ಸಾಲಿನಲ್ಲಿ ಸಂಭ್ರಮದ ಮಿಂಚು ಹರಿಯುತ್ತಿತ್ತು. ಸದನ ಆರಂಭವಾಗುವ ಅರ್ಧಗಂಟೆ ಮುಂಚೆ ಸಚಿವರು, ಶಾಸಕರೊಂದಿಗೆ ಸದನ ಪ್ರವೇಶಿಸಿದ ಪಕ್ಷದ ರಾಜ್ಯ ಅಧ್ಯಕ್ಷ ಶ್ರೀ ಕೆ.ಎಸ್. ಈಶ್ವರಪ್ಪ ಜೋರಾಗಿ ನಗುತ್ತಾ ಸಂಭ್ರಮ ಹಂಚಿಕೊಳ್ಳುತ್ತಿದ್ದರು. ನಂತರ ಸದನ ಪ್ರವೇಶಿಸಿದ್ಧ ಶ್ರೀ ಯಡಿಯೂರಪ್ಪ ಮುಖದಲ್ಲಿ ಕಳೆದ ಕೆಲವು ದಿನಗಳಿಂದ ಇದ್ದ ಕಳವಳ ಮಾಯವಾಗಿತ್ತು. ಅವರು ನಿರಾಳವಾಗಿದ್ದರು.

ವಿಶ್ವಾಸಮತಯಾಚನೆಗೆ ಜಯ ಸಿಕ್ಕಿದ್ದನ್ನು ಸ್ಪೀಕರ್ ಶ್ರೀ ಕೆ.ಜಿ. ಬೋಪಯ್ಯ ಸದನದಲ್ಲಿ ವ್ಯಕ್ತಪಡಿಸುತ್ತಿದ್ದಂತೆಯೇ ಆಡಳಿತ ಪಕ್ಷದ ಸಾಲಿನಲ್ಲಿ ಹರ್ಷೋದ್ಘಾರ ಉಂಟಾಯಿತು. ತಕ್ಷಣ ಎದ್ದು ನಿಂತ ಶ್ರೀ ಯಡಿಯೂರಪ್ಪ ತಮ್ಮ ಪಕ್ಷದ ಸಾಲಿನತ್ತ ವಿಜಯದ ಚಿಹ್ನೆ ಪ್ರಕಟಿಸಿ ಸಂತೋಷ ಹಂಚಿಕೊಂಡರು. ಪ್ರತಿಪಕ್ಷಗಳತ್ತಲೂ ವಿಜಯದ ಚಿಹ್ನೆ ಪ್ರದರ್ಶಿಸಿದರು. ಆಡಳಿತ ಪಕ್ಷದ ಸದಸ್ಯರು ಎದ್ದು ನಿಂತು ಕೈಬೀಸುತ್ತಾ ಸಂಭ್ರಮ ಪ್ರದರ್ಶಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸುದ್ದಿಗೋಷ್ಠಿಗೆ ಮುನ್ನ ನಡೆದ ಬಿಜೆಪಿ ಶಾಸಕರು, ಸಚಿವರು, ಸಂಸದರ ಸಭೆಯಲ್ಲಿ ಗೆಲುವಿನ ಸಂಭ್ರಮ ಎದ್ದು ಕಾಣುತ್ತಿತ್ತು. ಪಕ್ಷದ ರಾಜ್ಯ ಅಧ್ಯಕ್ಷ ಶ್ರೀ ಕೆ.ಎಸ್. ಈಶ್ವರಪ್ಪ ಮುಖ್ಯಮಂತ್ರಿಗಳಿಗೆ ಸಿಹಿ ತಿನ್ನಿಸಿ ಸಂಭ್ರಮಿಸಿದರು. ಮುಖ್ಯಮಂತ್ರಿಗಳನ್ನು ಅಭಿನಂದಿಸಲು ಶಾಸಕರು, ಸಂಸದರು, ಪಕ್ಷದ ನಾಯಕರಲ್ಲಿ ತರಾತುರಿ ಕಾಣಿಸಿತು.

ಬಿಜೆಪಿ ವಿಶ್ವಾಸಮತ ಗೆದ್ದ ತಕ್ಷಣವೇ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಮುಖ್ಯಮಂತ್ರಿಗಳ ನಿವಾಸದಲ್ಲಿಯೂ ಸಂಭ್ರಮ ಕಾಣಿಸಿತು. ಅಲ್ಲಿ ಆಗಲೇ ನೆರೆದಿದ್ದ ನೂರಾರು ಮಂದಿ ನಾಯಕರು, ಕಾರ್ಯಕರ್ತರು, ಶ್ರೀ ಯಡಿಯೂರಪ್ಪ ಮತ್ತು ಬಿಜೆಪಿ ಪರವಾಗಿ ಜಯಕಾರ ಕೂಗಿದರು. ಪರಸ್ಪರ ಸಿಹಿ ಹಂಚಿಕೊಂಡರು. ನಾಯಕನ ಬರುವಿಗಾಗಿ ಕಾರ್ಯಕರ್ತರು ಕಾದುನಿಂತರು.

ಕೆಲವು ದಿನಗಳಿಂದ ಸರಕಾರಕ್ಕೆ ಹಿಡಿದಿದ್ದ ಗ್ರಹಣ ಬಿಡುತ್ತಲೇ ಮಲ್ಲೇಶ್ವರಂನಲ್ಲಿರುವ ಬಿಜೆಪಿ ಕಛೇರಿಗೆ ಕಳೆ ಏರಿತು. ಕಛೇರಿ ಎದುರು ಜಮಾಯಿಸಿದ್ದ ನೂರಾರು ಕಾರ್ಯಕರ್ತರು ಪಟಾಕಿ ಸಿಡಿಸಿ ಹರ್ಷೋದ್ಘಾರ ಮಾಡಿದರು. ಬಹುತೇಕ ವಿದ್ಯುನ್ಮಾನ ವಾಹಿನಿಗಳು ಕಲಾಪವನ್ನು ನೇರಪ್ರಸಾರ ಮಾಡಿದ್ದವು. ಇದರಿಂದಾಗಿ ಅಂಗಡಿ, ಹೋಟೆಲ್‌ಗಳಲ್ಲಿರುವ ಟಿವಿಗಳ ಮುಂದೆ ಜನಜಾತ್ರೆಯೇ ನೆರೆದಿತ್ತು.

●

ಧ್ಯೇಯ ಕಮಲ ಮಾಸ ಪತ್ರಿಕೆ

ಧ್ಯೇಯಕಮಲ ಪತ್ರಿಕೆಗೆ ತಮ್ಮ ವಾರ್ಷಿಕ ಚಂದಾ ಅವಧಿ ಮುಕ್ತಾಯಗೊಳ್ಳುವ ತಿಂಗಳನ್ನು ಈ ಸಂಚಿಕೆಗೆ ಅಂಟಿಸಿರುವ ತಮ್ಮ ವಿಳಾಸದ ಚೀಟಿಯ ಮೂಲೆ ಭಾಗದಲ್ಲಿ ನಮೂದಿಸಲಾಗಿದೆ. ದಯವಿಟ್ಟು ಅವಧಿಗೆ ಮುನ್ನ ರೂ. 100/- ವಾರ್ಷಿಕ ಚಂದಾ ಹಣವನ್ನು ಎಂ.ಓ.ಮೂಲಕ 'ಧ್ಯೇಯಕಮಲ' ಕಾರ್ಯಾಲಯಕ್ಕೆ ಕಳುಹಿಸಿತಮ್ಮ ಚಂದಾ ಸದಸ್ಯತ್ವವನ್ನು ನವೀಕರಿಸುವುದು. ವಿವರಗಳಿಗೆ ಧ್ಯೇಯ ಕಮಲ ಪ್ರಕಾಶನ ವಿಭಾಗವನ್ನು ಸಂಪರ್ಕಿಸಿ. – ಸಂಪಾದಕರು

# ಸ್ಲಂ ಹುಡುಗನಿಗೆ ದಾರಿ ತೋರಿದ ಮುಖ್ಯಮಂತ್ರಿಗಳು

ಮುಖ್ಯಮಂತ್ರಿಯವರು ದತ್ತು ಪಡೆದ ಹತ್ತು ವರ್ಷದ ಬಾಲಕ ವಿಶ್ವನಾಥ್‌ಗೆ ವಿಶ್ವವಿಖ್ಯಾತ ದಸರಾ ಜಂಬೂ ಸವಾರಿ ವೀಕ್ಷಿಸುವ ಸೌಭಾಗ್ಯ. ಮೈಸೂರು ದಸರಾ ಕುರಿತು ಪುಸ್ತಕದಲ್ಲಿ ಓದಿದ್ದ ವಿಶ್ವನಾಥ್, ತಂದೆ–ತಾಯಿಯ ಜತೆಗೂಡಿ ದಸರಾ ವೀಕ್ಷಿಸಿ ಪುಳಕಿತಗೊಂಡ.



ಲಲಿತ್‌ಮಹಲ್ ಪ್ಯಾಲೇಸ್‌ನಲ್ಲಿ ಮುಖ್ಯಮಂತ್ರಿ ಜತೆ ಕುಟುಂಬ ಸದಸ್ಯರೊಂದಿಗೆ ಕುಳಿತು ಭೋಜನ ಸವಿದು ಸಂಜೆ ಬನ್ನಿಮಂಟಪದಲ್ಲಿ ಆಕರ್ಷಕ ಪಂಜಿನ ಮೆರವಣಿಗೆ, ಮೈ ನವಿರೇಳಿಸುವ ಸಾಹಸ ಪ್ರದರ್ಶನ ಕಂಡು ಸಂತುಷ್ಟನಾದ.

ಗುಲ್ಬರ್ಗಾದಿಂದ ಉದ್ಯೋಗವನ್ನರಸಿ ರಾಜಧಾನಿ ಬೆಂಗಳೂರಿಗೆ ಬಂದು ನೆಲೆಗೊಂಡಿರುವ ಕಟ್ಟಡ ಕೂಲಿ ಕಾರ್ಮಿಕರಾದ ಶ್ರೀ ಬಸವರಾಜ, ಶ್ರೀಮತಿ ಶಿವಮ್ಮ ದಂಪತಿಗಳು, ಪುತ್ರ ವಿಶ್ವನಾಥ್‌ಗೆ ಒದಗಿ ಬಂದ ಅದೃಷ್ಟಕ್ಕೆ ಸಂತಸಗೊಂಡು ತಾಯಿ ಚಾಮುಂಡೇಶ್ವರಿಗೆ ಕೈಮುಗಿದು ನಮಿಸಿದರು. ರಾತ್ರಿ ಮುಖ್ಯಮಂತ್ರಿ ಉಳಿದಿದ್ದ ಲಲಿತ್‌ಮಹಲ್ ಪ್ಯಾಲೇಸ್‌ನಲ್ಲೇ ವಾಸ್ತವ್ಯವಿದ್ದ ವಿಶ್ವನಾಥ್, ಬೆಳಗ್ಗೆ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪ ಅವರ ಜತೆಯಲ್ಲಿಯೇ ಸುತ್ತೂರು ಸ್ವಾಮೀಜಿಯವರ ಆಶೀರ್ವಾದ ಪಡೆದ. ಆತನ ವಿದ್ಯಾಭ್ಯಾಸವನ್ನು ಶ್ರೀ ಮಠದ ಶಿಕ್ಷಣ ಸಂಸ್ಥೆಯಲ್ಲಿಯೇ ಮುಂದುವರಿಸಲು ಅವಕಾಶ ನೀಡುವಂತೆ ಮುಖ್ಯಮಂತ್ರಿಯವರು ಮನವಿ ಮಾಡಿದ್ದಾರೆ.

ವಿಧಾನಸಭೆಯಲ್ಲಿ 2ನೇ ಬಾರಿ ವಿಶ್ವಾಸಮತ ಯಾಚನೆಗೆ ನಿಗದಿಯಾಗಿದ್ದ ದಿನ ಮುಖ್ಯಮಂತ್ರಿಯವರು ಗಾಳಿ ಆಂಜನೇಯ ದೇವಾಲಯದಲ್ಲಿ ಪೂಜೆ ಸಲ್ಲಿಸಲು ತೆರಳಿದ್ದರು. ಆ ಸಂದರ್ಭದಲ್ಲಿ ದೇವಾಲಯಕ್ಕೆ ಹೋಗಲು ವಿಶ್ವನಾಥ್ ಯತ್ನಿಸಿದಾಗ ಭದ್ರತೆಗಿದ್ದ ಪೊಲೀಸರು ತಡೆದಿದ್ದರು.

ಇದರಿಂದ ಬೇಸರಗೊಂಡ ವಿಶ್ವನಾಥ್ ಅಳುತ್ತಿದ್ದ. ಇದನ್ನು ಗಮನಿಸಿದ ಮುಖ್ಯಮಂತ್ರಿಯವರು ವಿಶ್ವನಾಥ್‌ನನ್ನು ಒಳಗೆ ಬಿಡುವಂತೆ ಪೊಲೀಸರಿಗೆ ಸೂಚಿಸಿ ತಮ್ಮೊಂದಿಗೆ ದೇವಾಲಯದ ಒಳಗೆ ಕರೆದೊಯ್ದು ಪೂಜೆಯಲ್ಲಿ ಪಾಲ್ಗೊಂಡಿದ್ದರು. ನಂತರ ದೇವರ ಸಮ್ಮುಖದಲ್ಲಿ "ಈ ಹುಡುಗನನ್ನು ದತ್ತು ತೆಗೆದುಕೊಳ್ಳುತ್ತಿದ್ದೇನೆ. ಈತನ ವಿದ್ಯಾಭ್ಯಾಸಕ್ಕೆ ಅಗತ್ಯವಾದ ನೆರವು ನೀಡಲಿದ್ದೇನೆ. ಎಲ್ಲಿಯವರೆಗೆ ಓದಿದರೂ ಸಹಾಯ ಮಾಡಲಿದ್ದೇನೆ" ಎಂದು ಘೋಷಿಸಿದರು.

ನಂತರ ಆಯುಧಪೂಜೆಯ ದಿನದಂದು ಶ್ರೀ ಯಡಿಯೂರಪ್ಪನವರು ಬಸವರಾಜ–ಶಿವಮ್ಮ ದಂಪತಿ ವಾಸಿಸುತ್ತಿದ್ದ ಎಂಸಿಟಿ ಕೊಳೆಗೇರಿಗೆ ಭೇಟಿ ನೀಡಿ ಅವರ ಮನೆಯವರ ಜತೆ ಚರ್ಚಿಸಿದ್ದರು. ಇಬ್ಬರು ಗಂಡು ಮಕ್ಕಳು, ಮೂವರು ಹೆಣ್ಣು ಮಕ್ಕಳನ್ನು ಹೊಂದಿರುವ ಆ ಕುಟುಂಬವು ಸ್ವತಃ ಮುಖ್ಯಮಂತ್ರಿಗಳೇ ಮನೆಗೆ ಬಂದಿದ್ದರಿಂದ ಸಂತೋಷಪಟ್ಟು ಮಗನ ಶಿಕ್ಷಣಕ್ಕೆ ನೆರವಾಗಿದ್ದಕ್ಕೆ ಕೃತಜ್ಞತೆ ಸಲ್ಲಿಸಿದರು.

ವಿಶ್ವನಾಥ್ ಪ್ರಸ್ತುತ ಬಾಪೂಜಿ ನಗರದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದು ಮುಂದಿನ ವಿದ್ಯಾಭ್ಯಾಸ ಸುತ್ತೂರು ಮಠದಲ್ಲಿ ಮುಂದುವರೆಸಲಿದ್ದಾನೆ.

ಮುಖ್ಯಮಂತ್ರಿಯವರ ಸೂಚನೆ ಮೇರೆಗೆ ಗಾಳಿ ಆಂಜನೇಯಸ್ವಾಮಿ ವಾರ್ಡ್‌ನ ಪಾಲಿಕೆ ಸದಸ್ಯ ಶ್ರೀ ಆನಂದ್ ಹಾಗೂ ಬಿಜೆಪಿ ಕಾರ್ಯಕರ್ತರು ವಿಶ್ವನಾಥ್ ಕುಟುಂಬವನ್ನು ಮೈಸೂರು ದಸರಾ ವೀಕ್ಷಿಸಲು ಕರೆದೊಯ್ದಿದ್ದರು. ●

# ಕಾಶ್ಮೀರದಲ್ಲಿ ಶಾಂತಿ ಸ್ಥಾಪನೆಗಾಗಿ–ಯುವ ಮೋರ್ಚಾ ಧರಣಿ

ಕಾಶ್ಮೀರವಿಂದು ಉಗ್ರಗಾಮಿಗಳ ಬೀಡಾಗಿದೆ. ಕೇಂದ್ರ ಯುಪಿಎ ಸರ್ಕಾರ ಹಾಗೂ ಕಾಶ್ಮೀರದ ಓಮರ್ ಅಬ್ದುಲ್ಲಾ ಸರ್ಕಾರಗಳೆರಡೂ ಕಾಶ್ಮೀರದಲ್ಲಿನ ಅಶಾಂತಿಯನ್ನು ತಡೆಯಲು ವಿಫಲವಾಗಿದೆ. ಕಾಂಗ್ರೆಸ್‌ನ ತಪ್ಪು ನೀತಿಯ ಕೂಸಾದ ಕಾಶ್ಮೀರ ಸಮಸ್ಯೆ ತೀವ್ರವಾಗಿ ಬಿಗಡಾಯಿಸಿದೆ. ಹಲವು ದಶಕಗಳಿಂದ ಕಾಶ್ಮೀರಿ ಪಂಡಿತರು ಅತಂತ್ರರಾಗಿದ್ದಾರೆ. ನಮ್ಮ ಸೈನಿಕರ ಮನಸ್ಥೈರ್ಯವನ್ನು ಕುಂದಿಸುವ ಪ್ರಯತ್ನ ಕೇಂದ್ರ ಸರ್ಕಾರದಿಂದಲೇ ಸಾಗಿದೆ. ಕಾಶ್ಮೀರದ ವಿಘಟನಕಾರಿ ಶಕ್ತಿಗಳಿಗೆ ಅರುಂಧತಿರಾಯ್‌ರಂಥ ಅವಿವೇಕಿಗಳ ನೇರ ಸಹಾಯವೂ ವ್ಯಕ್ತವಾಗಿದೆ. ಒಟ್ಟಿನಲ್ಲಿ ಕಾಶ್ಮೀರವಿಂದು ಅಗ್ನಿಕುಂಡದಂತೆ ಉರಿಯುತ್ತಿದ್ದು ಅಶಾಂತಿಯ ನೆಲೆ ಎನಿಸಿದೆ.

ಬಿಜೆಪಿ ಯುವ ಮೋರ್ಚಾ ಅಕ್ಟೋಬರ್ 26 ರಂದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಧರಣಿ ನಡೆಸಿ ಕಾಶ್ಮೀರದಲ್ಲಿ ಶಾಂತಿ ನೆಲೆಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳುವಂತೆ ಕೇಂದ್ರ ಸರ್ಕಾರವನ್ನು ಆಗ್ರಹಿಸಿತು. ಜಿಲ್ಲಾ ಕೇಂದ್ರಗಳಲ್ಲಿ ಸೇರಿದ ಯುವ ಮೋರ್ಚಾ ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಪಕ್ಷದ ಪ್ರಮುಖರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸುವುದರ ಮೂಲಕ ಕಾಶ್ಮೀರ ಸಂಬಂಧವಾಗಿ ಕೇಂದ್ರದ ತಪ್ಪು ನೀತಿಗಳನ್ನು ಖಂಡಿಸಿತಲ್ಲದೇ, ಕಾಶ್ಮೀರದಲ್ಲಿ ತೀವ್ರ ಪ್ರತಿರೋಧದ ನಡುವೆ ಕಾರ್ಯವೆಸಗುತ್ತಿರುವ ಸೈನಿಕ ಹಾಗೂ ಅರೆಸೈನಿಕ ಪಡೆಗಳಿಗೆ ಸೂಕ್ತ ಭದ್ರತೆ ಒದಗಿಸುವ ಹಾಗೂ ಅವರಿಗೆ ನೀಡಿರುವ ಅಧಿಕಾರವನ್ನು ಮೊಟಕುಗೊಳಿಸದಂತೆ ಆಗ್ರಹಿಸಿತು.

ರಾಜ್ಯದೆಲ್ಲೆಡೆ ಧರಣಿ ಸತ್ಯಾಗ್ರಹಗಳು ನಡೆದಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಯುವಕ–ಯುವತಿಯರು ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು.

## ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆ–ಮೈಸೂರು.

# ಜಿಪಂ, ತಾಪಂ ಚುನಾವಣೆ ಎದುರಿಸಲು ಕಾರ್ಯತಂತ್ರ

ನವೆಂಬರ್ 3, 2010 ರಂದು ಮೈಸೂರಿನ ರಾಜೇಂದ್ರ ಕಲಾಮಂದಿರದಲ್ಲಿ ಒಂದು ದಿನದ ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸಭೆ ನಡೆಯಿತು. ಸಭೆಯಲ್ಲಿ ಬಿಜೆಪಿ ರಾಜ್ಯ ಅಧ್ಯಕ್ಷ ಶ್ರೀ ಕೆ.ಎಸ್. ಈಶ್ವರಪ್ಪ, ರಾಷ್ಟ್ರೀಯ ಸಹಸಂಘಟನಾ ಕಾರ್ಯದರ್ಶಿ ಶ್ರೀ ವಿ. ಸತೀಶ್‌ಜೀ, ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ, ಸಚಿವರು ಸೇರಿದಂತೆ 385 ಅಪೇಕ್ಷಿತರು ಉಪಸ್ಥಿತರಿದ್ದರು. ರಾಜ್ಯದಲ್ಲಿ ಚುನಾಯಿತ ಬಿಜೆಪಿ ಸರ್ಕಾರವನ್ನು ಉರುಳಿಸಲು ನಡೆದ ಕುತಂತ್ರ, ಈ ಅಗ್ನಿ ಪರೀಕ್ಷೆಯಲ್ಲಿ ಗೆದ್ದ ಸರ್ಕಾರ, ಇಂಥ ವಿಕ್ಷಿಪ್ತ ಪರಿಸ್ಥಿತಿ ಹಿನ್ನೆಲೆಯಲ್ಲಿ ಬರಲಿರುವ ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಚುನಾವಣೆಗಳನ್ನು ಎದುರಿಸುವ ತಯಾರಿಗೋಸ್ಕರ ಸೇರಿದ ಈ ಕಾರ್ಯಕಾರಿಣಿ ರಾಜ್ಯದಲ್ಲಿ ಎಲ್ಲರ ಗಮನ ಸೆಳೆದಿತ್ತು.

ಸಭೆಯ ಪ್ರಾರಂಭದಲ್ಲಿ ಬೆಳಗಾವಿಯಲ್ಲಿ ಜೂನ್ 7, 8 ರಂದು ನಡೆದ ಹಿಂದಿನ ಕಾರ್ಯಕಾರಿಣಿ ಸಭೆಯ ನಂತರ ದೈವಾಧೀನರಾದ ಅನೇಕ ಹಿರಿಯರು ಹಾಗೂ ವಿವಿಧ ಕ್ಷೇತ್ರಗಳ ಗಣ್ಯರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು. ಶ್ರದ್ಧಾಂಜಲಿ ನಿರ್ಣಯವನ್ನು ಶ್ರೀ ಗೋಪಿನಾಥ ರೆಡ್ಡಿ ಓದಿ ಹೇಳಿದರು.

### ಅನರ್ಹ ಶಾಸಕರಿಗೆ ಶಿಸ್ತಿನ ರುಚಿ– ಶ್ರೀ ಈಶ್ವರಪ್ಪ.

ಸಭೆಯನ್ನು ಉದ್ಘಾಟಿಸಿ ಮಾತನಾಡಿದ ರಾಜ್ಯ ಬಿಜೆಪಿ ಅಧ್ಯಕ್ಷ ಶ್ರೀ ಕೆ.ಎಸ್. ಈಶ್ವರಪ್ಪನವರು ಸರ್ಕಾರಕ್ಕೆ ಗಂಡಾಂತರ ತಂದ ಭಿನ್ನಮತೀಯರು ಯಾವುದೇ ಬುದ್ದಿ ಮಾತು ಕೇಳದೆ ಇಂದು ಅನರ್ಹರಾಗಿದ್ದಾರೆ. ಅವರನ್ನು ಪಕ್ಷದಿಂದ ಹೊರದೂಡಿ ಬಿಜೆಪಿ ಶಿಸ್ತಿನ ಪಕ್ಷವೆಂಬ ಹೆಸರನ್ನು ಸಾರ್ಥಕಪಡಿಸಿಕೊಂಡಿದೆ ಎಂದು ನುಡಿದರು.

ವಿರೋಧಿಗಳ ಅಸಹಕಾರ, ಕುತಂತ್ರಗಳ ನಡುವೆ ರಾಜ್ಯ ಬಿಜೆಪಿ ಸರ್ಕಾರ ಜನಮನ್ನಣೆಯೊಂದಿಗೆ ಮುನ್ನಡೆದಿದೆ. ನಾವು ಹೋರಾಟದ ಮೂಲಕ ಅಧಿಕಾರಕ್ಕೆ ಬಂದವರು. 1–4–40–44–79–110 ಹೀಗೆ ಶಾಸಕರ ಸಂಖ್ಯೆ ಪ್ರತಿ ಚುನಾವಣೆಯಲ್ಲೂ ವೃದ್ಧಿಗೊಳ್ಳುತ್ತಾ ಹೋಗಿ ಈಗ ಸರ್ಕಾರ ರಚಿಸಿದ್ದೇವೆ. ಈ ರೀತಿಯಾಗಿ ನಾವು ಅಧಿಕಾರಕ್ಕೆ ಬರುವಲ್ಲಿ ಅನೇಕ ತ್ಯಾಗ, ಬಲಿದಾನ, ಹೋರಾಟಗಳ ರೋಚಕ ಸಂಗತಿಗಳಿವೆ ಎಂದು ಅವರು ನುಡಿದರು.

20 ಅಂಶಗಳ ಅನುಷ್ಠಾನದಲ್ಲಿ ರಾಜ್ಯ ಸರ್ಕಾರ ಗುಜರಾತ್ ನಂತರ ದೇಶದಲ್ಲಿ 2ನೇ ಸ್ಥಾನದಲ್ಲಿದೆ. ಹೀಗಿದ್ದೂ ವಿರೋಧಪಕ್ಷಗಳು ಜವಾಬ್ದಾರಿಯಿಂದ ನಡೆದುಕೊಳ್ಳುತ್ತಿಲ್ಲ. ವಿಧಾನಸಭಾ ಅಧಿವೇಶನವೇ ನಡೆಯುದಂತೆ ನೋಡಿಕೊಂಡ ವಿರೋಧ'ಪಕ್ಷಗಳು ಜವಾಬ್ದಾರಿಯುತವಾಗಿ ನಡೆದುಕೊಳ್ಳುತ್ತಿವೆಯೇ? ಸಲಹೆ ಮಾರ್ಗದರ್ಶನವಿದ್ದರೆ ಸರ್ಕಾರ ಇನ್ನೂ ಚೆನ್ನಾಗಿ ಕೆಲಸಮಾಡಬಹುದು. ಬದಲಾಗಿ ವಿರೋಧಿಗಳು ಬೇಜವಾಬ್ದಾರಿತನದಿಂದ ನಡೆದು ಪ್ರಜಾಪ್ರಭುತ್ವದ ಅಣಕ ಮಾಡುತ್ತಿವೆ ಎಂದು ಅವರು ಅಭಿಪ್ರಾಯಪಟ್ಟರು.

ಎಲ್ಲಾ ಶಾಸಕರು ಸಚಿವರಾಗಲಾರರು. ಮಂತ್ರಿಪದವಿಗಾಗಿ ಒತ್ತಾಯಿಸುತ್ತಿರುವ ಶಾಸಕರು ತಮಗಾಗಿ ಲಕ್ಷಾಂತರ ಕಾರ್ಯಕರ್ತರು ನಿಸ್ವಾರ್ಥ ಸೇವೆಯಿಂದ ಸೇವೆಗೈಯುತ್ತಿರುವುದನ್ನು ಮರೆಯಬಾರದೆಂದು ಅವರು ಕಿವಿಮಾತು ಹೇಳಿದರು.

ಒಂದು ಕಡೆ ಶಿಸ್ತಿಗೆ ಒತ್ತನ್ನು ನೀಡುತ್ತಾ, ರಾಜ್ಯ ಸರ್ಕಾರದ ಅಭಿವೃದ್ಧಿಪರ ಯೋಜನೆಗಳನ್ನು ನಾವು ಗಮನಿಸಬೇಕಾಗಿದೆ ಎಂದು ಹೇಳುತ್ತಾ, ಬರಲಿರುವ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಗಳಲ್ಲಿ ಬಿಜೆಪಿ ದಿಗ್ವಿಜಯ ಸಾಧಿಸುವದೆಂಬ ಭರವಸೆಯನ್ನು ಅವರು ವ್ಯಕ್ತಪಡಿಸಿದರು. ಈ ಚುನಾವಣೆಗಳಲ್ಲಿ ಎಲ್ಲರೂ ಹೆಚ್ಚಿನ ಶಕ್ತಿ ಹಾಕಿ ಪಕ್ಷವನ್ನು ಬಲಪಡಿಸಬೇಕೆಂದು ಅವರು ಕರೆನೀಡಿದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಬಗ್ಗೆ ಶ್ರೀಮತಿ ಸೋನಿಯಾ ಗಾಂಧಿಯವರು ಬಳಸಿದ ಪದಗಳ ಬಗ್ಗೆ ಆಕ್ಷೇಪಿಸಿದ ಶ್ರೀ ಈಶ್ವರಪ್ಪನವರು ಸಂಘವನ್ನು ವಿನಾಕಾರಣ ದೂಷಿಸಿ ಶ್ರೀಮತಿ ಸೋನಿಯಾ ಗಾಂಧಿಯವರು ದೇಶದ ಜನತೆಗೆ ಅಪಮಾನಗೈದಿದ್ದಾರೆಂದು ಅಭಿಪ್ರಾಯಪಟ್ಟರು.

### "ನ ದೈನ್ಯಂ, ನ ಪಲಾಯನಂ"–
### ಶ್ರೀ ಬಿ.ಎಸ್. ಯಡಿಯೂರಪ್ಪ.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ರಾಜ್ಯದಲ್ಲಿ ಆಗಿಹೋಗಿರುವ ರಾಜಕೀಯ ವಿದ್ಯಮಾನಗಳಿಂದ ತಾನು ಸಾಕಷ್ಟು ಪಾಠ ಕಲಿತಿರುವುದಾಗಿ ನುಡಿದರು. ನನ್ನ ಧೋರಣೆಯಲ್ಲಿ ಕಳೆದ ಕೆಲ ದಿನಗಳ ಘಟನೆಗಳಿಂದ ಅನೇಕ ಸಕಾರಾತ್ಮಕ ಬದಲಾವಣೆಗಳು ಆಗಿವೆ. ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಆಸ್ಥೆ ವಹಿಸಿ ಉತ್ತಮ ಆಡಳಿತ ನೀಡುವ ಜೊತೆಗೆ ಕಾರ್ಯಕರ್ತರೊಂದಿಗೆ ಹೆಚ್ಚಿನ ಸಮನ್ವಯ ಸಾಧಿಸಲು ಯತ್ನಿಸುವುದಾಗಿ ಅವರು ಭರವಸೆ ನೀಡಿದರು.

ಮಾನ್ಯ ಶ್ರೀ ವಾಜಪೇಯಿಯವರು ಅವರ ಅನಾರೋಗ್ಯದ ನಡುವೆಯೂ ರಾಜ್ಯದ ವಿದ್ಯಮಾನಗಳನ್ನು ಗಮನಿಸುತ್ತಿದ್ದಾರೆ. ಅವರು ಹೇಳಿದಂತ "ನ ದೈನ್ಯಂ, ನ ಪಲಾಯನಂ" ಎಂಬ ಧ್ಯೇಯ ವಾಕ್ಯವನ್ನು ನಾನೂ ಸಹ ಸದಾಸ್ಮರಣೆಯಲ್ಲಿಡುತ್ತೇನೆ. ಅದನ್ನು ನಾವೆಲ್ಲ ನೆನಪಿನಲ್ಲಿಟ್ಟುಕೊಳ್ಳಬೇಕಿದೆ. ಚಿಕ್ಕ ವಯಸ್ಸಿನಲ್ಲೇ ಮಾನ್ಯ ಶ್ರೀ ವಾಜಪೇಯಿಯವರು ದೇಶದ ಪ್ರಧಾನಿಯಾಗಿದ್ದರೆ ದೇಶ ಇನ್ನೂ ಬಹು ಮುಂದೆ ಸಾಗುತ್ತಿತ್ತು ಎಂದು ಶ್ರೀ ಯಡಿಯೂರಪ್ಪ ಅಭಿಪ್ರಾಯಪಟ್ಟರು.

ಪರಿವಾರದವರ ಅಪೇಕ್ಷೆಗೆ ತಕ್ಕಂತೆ ನಾವು ನಡೆದುಕೊಳ್ಳುತ್ತಿಲ್ಲವೆಂದು ಅಭಿಪ್ರಾಯವಿದೆ. ನನ್ನನ್ನೂ ಸೇರಿ ಎಲ್ಲರೂ ಆತ್ಮಾವಲೋಕನ ಮಾಡಿಕೊಳ್ಳುವ ಅವಶ್ಯಕತೆಯಿದೆ. ಹಿಂದಿನ ಯಾವುದೇ ಮುಖ್ಯಮಂತ್ರಿಗೆ ಈ ಪರಿಯ ಅಗ್ನಿಪರೀಕ್ಷೆಗಳು ಎದುರಾಗಿರಲಿಲ್ಲ, ಕುರ್ಚಿಗೆ ಅಂಟಿಕೊಂಡಿರುವವರು ನಾವಲ್ಲ. 20 ತಿಂಗಳು ಉಪಮುಖ್ಯಮಂತ್ರಿಯಾಗಿದ್ದಾಗ ಮುಖ್ಯಮಂತ್ರಿಗಳ ಪಕ್ಕಕ್ಕೆ ಕುಳಿತು ಯಾವುದೇ ಬೇಡಿಕೆಗೆ ಸಹಿ ಪಡೆದ ಸಂದರ್ಭ ಬರಲಿಲ್ಲ. ಆದರೆ ನಮಗೆ ಅಧಿಕಾರ ನೀಡುವ ಬಯಕೆ ಜನತೆಗಿತ್ತು. ಹಿರಿಯರ ಅಪೇಕ್ಷೆಗನುಗುಣವಾಗಿ, ಸಂದರ್ಭಕ್ಕೆ ತಕ್ಕಂತೆ ಅಂದು ನಮ್ಮ ಪಕ್ಷದ ಎಲ್ಲಾ ಸಚಿವರು ರಾಜಭವನಕ್ಕೆ ತೆರಳಿ ಚಕಾರವೆತ್ತದೆ ರಾಜಿನಾಮೆ ನೀಡಿದ್ದನ್ನು ನಾನು ಮರೆಯಲಾರೆ ಎಂದು ಅವರು ಸ್ಮರಿಸಿದರು.

ಮಾನ್ಯಶ್ರೀ ಅಡ್ವಾಣಿಜೀ ಹಾಗೂ ಮಾನ್ಯಶ್ರೀ ನಿತೀನ್ ಗಡ್ಕರಿಯವರ ಅಪೇಕ್ಷೆ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರದಲ್ಲಿ 5 ವರ್ಷ ಪೂರ್ಣಗೊಳಿಸಬೇಕು, ಜನಪರ ಆಡಳಿತ ನೀಡಬೇಕು ಎಂಬುದು. ಒಂದೇ ವಾರದಲ್ಲಿ ಎರಡು ಬಾರಿ ವಿಧಾನಸಭೆಯಲ್ಲಿ ಬಹುಮತ ಸಾಬೀತು ಮಾಡಲಾಯಿತು. ಇದು ಇತಿಹಾಸ ಸೃಷ್ಟಿಸಿತು. ಸಾಧನೆಯ ಹಾದಿಯಲ್ಲಿ

ಸಾಧಕನಿಗೆ ಅನೇಕ ಪದವಿಗಳು ದೊರಕುತ್ತವೆ. ಅದರಿಂದ ವಿಚಲಿತನಾಗಿ ಬೇಜವಾಬ್ದಾರಿತನ ತೋರಿದರೆ ಯಾರೂ ಕ್ಷಮಿಸಲಾರರು ಎಂದು ಶ್ರೀ ಯಡಿಯೂರಪ್ಪ ನುಡಿದರು.

**Democracy is good, because other systems are worse** ಎಂದು ಅನೇಕ ಹಿರಿಯರು ಹೇಳಿದ್ದಾರೆ. ಇದನ್ನು ನಂಬಿ ನಾವು ಮುನ್ನಡೆಯಬೇಕಾಗಿದೆ. ಸುಮಾರು ಹನ್ನೊಂದುವರೆ ಲಕ್ಷ ಕುಟುಂಬಗಳಿಗೆ ಭಾಗ್ಯಲಕ್ಷ್ಮಿ ಯೋಜನೆಯ ಫಲ ತಲುಪಿದೆ. ನಾನು ಹೆಚ್ಚು ಮಾತನಾಡಬಾರದೆಂದು ತೀರ್ಮಾನಿಸಿದ್ದೇನೆ. ನಮ್ಮ ಕೆಲಸಗಳು ಮಾತನಾಡಬೇಕೆಂದು ಅವರು ಅಭಿಪ್ರಾಯಪಟ್ಟರು.

ಪರಿವಾರದ ಬಗ್ಗೆ ನಾಲಿಗೆ ಹರಿಬಿಟ್ಟು ಬೇಜವಾಬ್ದಾರಿತನದಿಂದ ಮಾತನಾಡಬಾರದೆಂದು ಶ್ರೀಮತಿ ಸೋನಿಯಾಗಾಂಧಿಯವರಿಗೆ ಆಗ್ರಹಿಸಿದ ಮುಖ್ಯಮಂತ್ರಿಗಳು ಅಭಿವೃದ್ಧಿಯಲ್ಲಿ ರಾಜ್ಯ 2ನೇ ಸ್ಥಾನದಲ್ಲಿರುವ ಬಗ್ಗೆ ಕಾಂಗ್ರೆಸ್‌ನವರು ಏನು ಹೇಳುತ್ತಾರೆ? ನಮಗೆ ಆಡಳಿತ ಅನುಭವದ ಕೊರತೆ ಇದೆ ನಿಜ. ಈ ಹಿನ್ನೆಲೆಯಲ್ಲಿ ವಿಷನ್–20, ಶ್ರೀ ಕಸ್ತೂರಿ ರಂಗನ್ ನೇತೃತ್ವದ–ಜ್ಞಾನ ಆಯೋಗ, ವಿಜ್ಞಾನ–ತಂತ್ರಜ್ಞಾನ ಸಮಿತಿ, ಶ್ರೀ ಸಿ.ಎಸ್. ವಿಶ್ವನಾಥನ್ ಸಮಿತಿ, ಐಟಿ–ಬಿಟಿ ಕ್ಷೇತ್ರದಲ್ಲಿ ಶ್ರೀ ಗೋಪಾಲಕೃಷ್ಣ ಸಮಿತಿ, ಅಭಯ, ಡಾ. ಆನಂದ್ ಸಂಚಾಲಕತ್ವದಲ್ಲಿ ಸಾವಯವ ಕೃಷಿಮಿಷನ್ ಹೀಗೆ ಅನೇಕ ತಜ್ಞರ ಸಮಿತಿ ರಚಿಸಿ ಸಲಹೆ ಪಡೆದು ಉತ್ತಮ ಆಡಳಿತ ನೀಡುವ ಪ್ರಯತ್ನ ನಡೆಸಿದ್ದೇವೆ ಎಂದು ಅವರು ನುಡಿದರು.

ನಮ್ಮಲ್ಲಿ ಯಾವಾಗಲೂ ಆತ್ಮವಿಶ್ವಾಸ ತುಂಬಿರಬೇಕು. **I am the best, I can do it, God is always with me** ಹಾಗೂ **Today is my day** ಎಂಬ ಹುಮ್ಮಸ್ಸಿನಿಂದ ಮುನ್ನುಗ್ಗಿ ಕ್ರಿಯಾಶೀಲನಾದರೆ ಯಶಸ್ಸು ತಾನಾಗಿಯೇ ಬರುತ್ತದೆ. ವಿರೋಧಿಗಳ ಅಪಪ್ರಚಾರದ ನಡುವೆಯೂ ಉತ್ತಮ ಆಡಳಿತ ನೀಡಲು ಆತ್ಮವಿಶ್ವಾಸ ಅಗತ್ಯ ಎಂದು ಅವರು ಒತ್ತಿ ಹೇಳಿದರು.

ಪ್ರಸಕ್ತ ಹಣಕಾಸಿನ ಸಾಲಿನ ಮೊದಲ 6 ತಿಂಗಳಲ್ಲಿ ತೆರಿಗೆ ಹಣ ಏರಿಕೆ ರಾಜ್ಯದಲ್ಲಿ ಶೇ 37% ರಷ್ಟಾಗಿದ್ದು ಇದು ಅಕ್ಕಪಕ್ಕದ ರಾಜ್ಯಗಳಿಗಿಂತ ಸಾಕಷ್ಟು ಹೆಚ್ಚಿನ ಪ್ರಮಾಣವಾಗಿದೆ. ರಾಜ್ಯದ ತಲಾವಾರು ಯೋಜನಾ ಸಾಧನೆ ದೇಶದಲ್ಲೇ ಗರಿಷ್ಠವೆನಿಸಿದೆ. ಅಕ್ರಮ ಗಣಿಗಾರಿಕೆಯನ್ನು ನಿಲ್ಲಿಸಿ ಹೊರದೇಶಕ್ಕೆ ರಫ್ತು ನಿರ್ಬಂಧಿಸಿದ್ದೇವೆ. ಆದರೆ ಪಾದಯಾತ್ರೆ ನಡೆಸಿದ ಕಾಂಗ್ರೆಸ್ಸಿಗರು ಇಂದು ಅದರ ವಿರುದ್ಧ ನ್ಯಾಯಾಲಯಕ್ಕೆ ಹೋಗಿದ್ದಾರೆ ಎಂದು ಅವರು ದೂರಿದರು.

ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಚುನಾವಣೆಗಳಲ್ಲಿ ರಾಜ್ಯದಲ್ಲಿ ಶೇ. 70% ರಷ್ಟು ಸ್ಥಾನಗಳನ್ನು ಗಳಿಸುವುದರಿಂದ ಬಿಜೆಪಿಯನ್ನು ತಡೆಯಲು ಯಾವ ಶಕ್ತಿಗೂ ಸಾಧ್ಯವಿಲ್ಲ. ನಿಮ್ಮೆಲ್ಲರ ಸಹಕಾರದಿಂದ ರಾಜ್ಯವನ್ನು ಮಾದರಿಯನ್ನಾಗಿ ಮಾರ್ಪಡಿಸೋಣ. ಈ ಎರಡು ವರ್ಷ ಹೆಚ್ಚಿನ ಶಕ್ತಿ ಹಾಕಿ, ಪಕ್ಷಕ್ಕೆ ಧಕ್ಕೆ ತರದಂತೆ ನಡೆದುಕೊಳ್ಳಿ. ಬರುವ 20 ವರ್ಷ ನೀವು ಅಧಿಕಾರದಲ್ಲಿರುವಂತೆ ನಾನು ನೋಡಿಕೊಳ್ಳುತ್ತೇನೆ ಎಂದು ಅವರು ಭರವಸೆ ತುಂಬಿದರು.

ರಾಜ್ಯ ಗ್ರಾಮೀಣ ಅಭಿವೃದ್ಧಿ ಸಚಿವ ಶ್ರೀ ಜಗದೀಶ ಶೆಟ್ಟರ್‌ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀ ಮೈ.ವಿ. ರವಿಶಂಕರ್ ಸ್ವಾಗತಿಸಿದರು. ಮೈಸೂರು ನಗರ ಬಿಜೆಪಿ ಅಧ್ಯಕ್ಷ ಶ್ರೀ ಶಿವಕುಮಾರ್ ವಂದನಾರ್ಪಣೆಗೈದರು. ರಾಜ್ಯ ಬಿಜೆಪಿ ಉಪಾಧ್ಯಕ್ಷ ಶ್ರೀ ರಘುನಾಥರಾವ್ ಮಲ್ಕಾಪುರೆ ಕಾರ್ಯಕ್ರಮವನ್ನು ನಿರೂಪಿಸಿದರು.

ನಿರ್ಣಯಗಳು: ಕಾರ್ಯಕಾರಿಣಿ ಸಭೆಯಲ್ಲಿ ಎರಡು ಪ್ರಮುಖ ನಿರ್ಣಯಗಳನ್ನು ಮಂಡಿಸಿ ಅಂಗೀಕರಿಸಲಾಯಿತು.

ರಾಜಕೀಯ ನಿರ್ಣಯವನ್ನು ರಾಜ್ಯ ಬಿಜೆಪಿ ಪ್ರ.ಕಾರ್ಯದರ್ಶಿ ಶ್ರೀ ಸಿ.ಟಿ.ರವಿಯವರು ಮಂಡಿಸಿದರು. ಕಾಶ್ಮೀರ ಸಮಸ್ಯೆಗೆ ಸಂಬಂಧಿಸಿದ ನಿರ್ಣಯವನ್ನು ರಾಜ್ಯ ಯುವ ಮೋರ್ಚಾ ಅಧ್ಯಕ್ಷ ಶ್ರೀ ಸುನೀಲ್‌ಕುಮಾರ್‌ರವರು ಮಂಡಿಸಿದರು.

## ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಚುನಾವಣಾ ಸಿದ್ಧತೆ.

ಬರಲಿರುವ ತಾಲ್ಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಚುನಾವಣೆಗೆ ಸಂಬಂಧಿಸಿದಂತೆ ರಾಜ್ಯ ಬಿಜೆಪಿ ಉಪಾಧ್ಯಕ್ಷ ಶ್ರೀ ಭಾನುಪ್ರಕಾಶ್‌ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕೆಳಹಂತದ ಚುನಾವಣೆಗಳಲ್ಲಿ ನಮ್ಮ ಪಕ್ಷ ಜಯಿಸಿದಾಗ ಮಾತ್ರ ನಮ್ಮದು ನಿಜವಾದ ಗೆಲುವೆನಿಸುತ್ತದೆ. ಆಗ ಮಾತ್ರ ಪಕ್ಷವೂ ಕೆಳಹಂತದಲ್ಲಿ ಗಟ್ಟಿಯಾಗಿದೆ ಎಂಬುದು ಸಾಬೀತಾಗುತ್ತದೆ ಎಂದು ಅವರು ನುಡಿದರು.

ಚುನಾವಣೆಗೆ ಸಂಬಂಧಿಸಿದಂತೆ ಸಭೆಯಲ್ಲಿ ಅನೇಕರು ಉಪಯುಕ್ತ ಸಲಹೆಗಳನ್ನಿತ್ತರು. ಶ್ರೀ ಪಾಣಿ ರಾಜಪ್ಪ, ಶ್ರೀಮತಿ ಗಿರಿಜಾಬಾಯಿ, ಶ್ರೀ ಎಂ.ಬಿ. ಜಿರಲಿ, ಶ್ರೀ ಸಿದ್ದು ಸವದಿ, ಶ್ರೀ ಪದ್ಮನಾಭ ಕೋಠಾರಿ, ಶ್ರೀ ದತ್ತಾತ್ರಿ, ಶ್ರೀ ರಾಮುಸ್ವಾಮಿ (ಚಿಕ್ಕಮಗಳೂರು), ಶ್ರೀ ಸುನೀಲ್‌ಕುಮಾರ್, ಶ್ರೀ ಚಂದ್ರಶೇಖರ್ (ಬಾಗಲಕೋಟೆ), ಶ್ರೀ ಬಾಳೆಕಾಯಿ ನಾಗರಾಜ, ಶ್ರೀ ಶಿವಬಸಪ್ಪ, ಶ್ರೀ ನಾಗೇಶ್ (ಬೆಂ.ಗ್ರಾಮಾಂತರ), ಶ್ರೀ ಅಶ್ವತ್ಥನಾರಾಯಣ(ಬಿನ್ನಿಪೇಟೆ) ಮುಂತಾದವರು ನೀಡಿದ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳುವುದಾಗಿ ರಾಜ್ಯ ಅಧ್ಯಕ್ಷರು ತಿಳಿಸಿದರು.

## ತಾಲ್ಲೂಕು ಪಂಚಾಯತ್ ಸದಸ್ಯರಿಗೆ ಹೆಚ್ಚಿನ ಅಧಿಕಾರ– ಶ್ರೀ ಜಗದೀಶ್ ಶೆಟ್ಟರ್.

ಬರಲಿರುವ ದಿನಗಳಲ್ಲಿ ತಾಲ್ಲೂಕು ಪಂಚಾಯತ್ ಸದಸ್ಯರಿಗೆ ಹೆಚ್ಚಿನ ಅಧಿಕಾರ ನೀಡಲು ಬಿಜೆಪಿ ಸರ್ಕಾರ ಯೋಚಿಸಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಶ್ರೀ ಜಗದೀಶ ಶೆಟ್ಟರ್ ಸಭೆಗೆ ತಿಳಿಸಿದರು.

ಈಗಿರುವ ವ್ಯವಸ್ಥೆಯಲ್ಲಿ ಜಿಲ್ಲಾ ಪಂಚಾಯತ್ ಹಾಗೂ ಗ್ರಾಮಪಂಚಾಯತ್ ಸದಸ್ಯರಿಗೆ ಹೋಲಿಸಿದಲ್ಲಿ ತಾಲ್ಲೂಕು ಪಂಚಾಯತ್ ಸದಸ್ಯರ ಅಧಿಕಾರ ನಗಣ್ಯವೆನಿಸಿದೆ ಎಂಬ ಸದಸ್ಯರ ಹೇಳಿಕೆಯ ಹಿನ್ನೆಲೆಯಲ್ಲಿ ಸಚಿವರು ಈಗಿರುವ ವ್ಯವಸ್ಥೆಯಲ್ಲಿ ಸುಧಾರಣೆಯ ಬಗ್ಗೆ ನಾವು ನಿರಂತರ ಚಿಂತನೆ ನಡೆಸಬೇಕಿದೆ ಎಂದು ತಿಳಿಸಿದರು.

ಕರ್ನಾಟಕ ಪಂಚಾಯತಿ ರಾಜ್ ವ್ಯವಸ್ಥೆಯ ಬಗ್ಗೆ ಬೇರೆ ರಾಜ್ಯಗಳಲ್ಲಿ ಸದಭಿಪ್ರಾಯವಿದೆ. ಪಂಚಾಯತ್‌ಗಳ ಅಧಿಕಾರವನ್ನು ಬಿಜೆಪಿ ಸರ್ಕಾರ ಮೊಟಕುಗೊಳಿಸಿಲ್ಲ ಎಂದು ಅವರು ವಿವರಿಸಿದರು.

ಉದ್ಯೋಗ ಖಾತ್ರಿ ಯೋಜನೆಯ ಸದುಪಯೋಗವನ್ನು ನಾವು ತೆಗೆದುಕೊಳ್ಳಬೇಕಿದೆ. ಪಿಎಂಜಿಎಸ್‌ವೈ ಯೋಜನೆಯಡಿ ಗ್ರಾಮೀಣ ರಸ್ತೆ ನಿರ್ಮಾಣ ಕಾರ್ಯವನ್ನು ರಾಜ್ಯ ಸರ್ಕಾರದ ವತಿಯಿಂದ ಕೈಗೊಳ್ಳಲಾಗುತ್ತಿದೆ ಎಂದು ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಚುನಾವಣೆಗಳಿಗೆ ಸಂಬಂಧಿಸಿದಂತೆ ಈ ಕೆಳಗಿನಂತೆ ಕೆಲವು

ಸೂಚನೆಗಳನ್ನು ರಾಜ್ಯ ಬಿಜೆಪಿ ಕಾರ್ಯದರ್ಶಿ ಶ್ರೀ ನಂದೀಶ್‌ರವರು ಸಭೆಗೆ ನೀಡಿದರು.

* ಎಲ್ಲಾ ಚಟುವಟಿಕೆಗಳು ಜಿಲ್ಲಾ ಕೋರ್ ಕಮಿಟಿ ಹಾಗೂ ಜಿಲ್ಲಾ ಸಮಿತಿಯ ಸಮನ್ವಯತೆಯೊಂದಿಗೆ ನಡೆಯಬೇಕು.
* ಮುಖ್ಯಮಂತ್ರಿಗಳ ಭಾಗ್ಯಲಕ್ಷ್ಮಿ ಯೋಜನೆಯ ಜಿಲ್ಲಾ ಕಾರ್ಯಕ್ರಮಗಳು ಪೂರ್ಣಗೊಂಡ ನಂತರ ಮತಗಟ್ಟೆ ಸಮಿತಿ ಕಾರ್ಯಕರ್ತರ ಸಮಾವೇಶ ನಡೆಯಲಿದೆ.
* ಮತದಾರ ಪಟ್ಟಿ ಪರಿಷ್ಕರಣೆ ಆಗಬೇಕಿದೆ.
* ಮತಗಟ್ಟೆ ಸಮಿತಿ ಸಭೆಗಳು ಹಾಗೂ ಶಕ್ತಿಕೇಂದ್ರ ಸಮಿತಿ ಸಭೆಗಳು ನಡೆಯಬೇಕು.
* ಚುನಾವಣಾ ನಿರ್ವಹಣಾ ಸಮಿತಿ (ಜಿಲ್ಲಾ, ಮಂಡಲ ಹಾಗೂ ಗ್ರಾ.ಪಂ. ಮಟ್ಟದಲ್ಲಿ) ರಚನೆಯಾಗಬೇಕು.
* ಪಕ್ಷಕ್ಕೆ ಬದ್ಧತೆ, ಅನುಶಾಸನ ಹೊಂದಿದ ಅಭ್ಯರ್ಥಿಗಳನ್ನೇ ಹೆಚ್ಚಾಗಿ ಆಯ್ಕೆ ಮಾಡಬೇಕು.
* ನಗರ ಮಟ್ಟದ ಕಾರ್ಯಕರ್ತರನ್ನೂ ಪ್ರಕ್ರಿಯೆಯಲ್ಲಿ ಜೋಡಿಸಿಕೊಳ್ಳಬೇಕು.
* ಎ.ಪಿ.ಎಂ.ಸಿ. ಚುನಾವಣೆಗಳ ಬಗ್ಗೆಯೂ ಗಮನ ನೀಡಬೇಕು.
* ಅನರ್ಹಗೊಂಡ ಹಾಗೂ ರಾಜೀನಾಮೆ ನೀಡಿದ 19 ಶಾಸಕರ ಉಪಚುನಾವಣೆ ಬಗ್ಗೆ ತಯಾರಿ.
* ಜಿಲ್ಲಾ ಅಭ್ಯಾಸವರ್ಗಗಳು ಪೂರ್ಣಗೊಳ್ಳಬೇಕು.
* ಮಂಡಲ ಮಟ್ಟದ ಹಾಗೂ ಮೋರ್ಚಾಗಳ ಚುನಾಯಿತ ಪ್ರತಿನಿಧಿಗಳ ಅಭ್ಯಾಸವರ್ಗ ಪೂರ್ಣಗೊಳ್ಳಬೇಕು.
* ಸಂಘದ ಬಗ್ಗೆ ಕಾಂಗ್ರೆಸ್ ಧೋರಣೆ ವಿರುದ್ಧ ಏರ್ಪಾಡಾಗಿರುವ ನವೆಂಬರ್ 10ರ ಧರಣಿಯನ್ನು ಯಶಸ್ವಿಗೊಳಿಸಬೇಕು.
* ಮತದಾರ ಪಟ್ಟಿ ಪರಿಷ್ಕರಣೆಗೆ ಪ್ರತಿ ಮಂಡಲಕ್ಕೆ ಒಬ್ಬ ಪ್ರಮುಖರ ನೇಮಕವಾಗಲಿದೆ.

ಸಾಯಂಕಾಲದ ಗೋಷ್ಠಿಯಲ್ಲಿ ಶ್ರೀ ಈಶ್ವರಪ್ಪನವರು, ರಾಷ್ಟ್ರೀಯ ಸಂಘಟನಾ ಸಹ ಕಾರ್ಯದರ್ಶಿ ಶ್ರೀ ಸತೀಶ್‌ಜಿ, ಸಚಿವ ಡಾ॥ ವಿ.ಎಸ್. ಆಚಾರ್ಯರವರು ವೇದಿಕೆಯಲ್ಲಿದ್ದರು.

ಗೋಷ್ಠಿಯ ಪ್ರಾರಂಭದಲ್ಲಿ ವಿವಿಧ ಮೋರ್ಚಾಗಳ ಹಾಗೂ ವಿಭಾಗ ಮಟ್ಟದಲ್ಲಿ ಸಂಘಟನಾ ವರದಿಗಳನ್ನು ಪಡೆಯಲಾಯಿತು.

## ಸಂಘಟನೆಯ ಕಾರ್ಯ ಯಾಂತ್ರಿಕವಾಗಬಾರದು: ಶ್ರೀ ಸಂತೋಷ್‌ಜಿ

ಮೋರ್ಚಾಗಳು ಹಾಗೂ ವಿಭಾಗೀಯ ಉಸ್ತುವಾರಿಗಳು ನೀಡಿದ ಸಂಘಟನಾತ್ಮಕ ವರದಿಯನ್ನು ವಿಶ್ಲೇಷಿಸಿದ ರಾಜ್ಯ ಬಿಜೆಪಿ ಸಂ. ಪ್ರಧಾನ ಕಾರ್ಯದರ್ಶಿ ಶ್ರೀ ಸಂತೋಷ್‌ಜಿಯವರು ನಮ್ಮ ಸಂಘಟನೆ ಒಂದು ಕುಟುಂಬ, ಇಲ್ಲಿಯ ಕಾರ್ಯಚಟುವಟಿಕೆಗಳು ಕಾರ್ಯಕರ್ತರನ್ನು ಹತ್ತಿರ ತರುವಂಥ ಆತ್ಮೀಯತೆ ಬೆಳೆಸುವಲ್ಲಿ ಸಹಕಾರಿಯಾಗಿರಬೇಕು, ಇಲ್ಲವಾದಲ್ಲಿ ಸಂಘಟನಾ ಕಾರ್ಯ ಯಾಂತ್ರಿಕವೆನಿಸುತ್ತದೆ ಎಂದು ಸಲಹೆ ನೀಡಿದರು.

ನಮ್ಮ ಜಿಲ್ಲೆಯಲ್ಲೂ ಹೇಗೆ ಕಾರ್ಯಕ್ರಮ ರೂಪಿಸಬೇಕೆಂಬುದನ್ನು ಉಳಿದ ಜಿಲ್ಲೆಗಳ ವರದಿಗಳಿಂದ ತುಲನಾತ್ಮಕವಾಗಿ ಯೋಚಿಸಿ ರೂಪಿಸಿಕೊಳ್ಳಲು ಅನುಕೂಲ. ಆದರೆ ರಾಜ್ಯದಿಂದ ಸೂಚಿಸಲ್ಪಟ್ಟ ಕಾರ್ಯಕ್ರಮದ ಆಚರಣೆ ಎಂದರೆ ಹೇಗೆ? ನಮ್ಮದೇ ಆದ ಸಂಘಟನೆ, ಕಾರ್ಯಕ್ರಮ ರೂಪಿಸಿಕೊಳ್ಳುವುದು ಯಾವಾಗ ಎಂದು ಅವರು ಪ್ರಶ್ನಿಸಿದರು.

"ಕುಟುಂಬ ಮಿಲನ" ಹೊಸ ಹೊಳಹು ನೀಡಿದ ಕಾರ್ಯಕ್ರಮ. ನಾವು ಮತಗಳ ದೃಷ್ಟಿಯಿಂದ ಬೆಳೆದಿದ್ದೇವೆ. ಆದರೆ ಸಂಸ್ಕೃತಿಯ ದೃಷ್ಟಿಯಿಂದ ಬೆಳೆದಿದ್ದೇವೆಯೇ ಯೋಚಿಸಬೇಕಿದೆ. ಒಬ್ಬ ಅನರ್ಹ ವ್ಯಕ್ತಿ ಸಂಘಟನೆಯಿಂದ ಹೊರಹೋದಾಗ ಇಷ್ಟೊಂದು ವರ್ಷ ದುಡಿದರೂ ನಾವು ಸಂಘಟನೆಯಲ್ಲಿ ಅವನನ್ನು ಉಳಿಸಿಕೊಳ್ಳಲಾಗಲಿಲ್ಲವಲ್ಲ ಎಂದು ಯೋಚಿಸಬೇಕು. ಇಲ್ಲವಾದಲ್ಲಿ ನಾವು ಕೇವಲ **vote gaining machine** ಎನಿಸಿಕೊಳ್ಳುತ್ತೇವೆ. ಶ್ರೀ ನಳಿನಕುಮಾರ್ ಕಟೀಲ್‌ರವರು ಸುಮಾರು 25 ದಿನ ಗ್ರಾಮ ನಿವಾಸ ಮಾಡಿದ್ದಾರೆ. ನಮ್ಮ ಕೋರ್ ಕಮಿಟಿ ಸಭೆಗಳಲ್ಲಿ ಹೀಗೆ ತಂಡವಾಗಿ ಬೆಳೆಯುವ ಬಗ್ಗೆ, ಆತ್ಮೀಯತೆಯನ್ನು ಗಟ್ಟಿಗೊಳಿಸುವ ಬಗ್ಗೆ ಯೋಚನೆ ನಡೆಯಬೇಕಿದೆ. ಆ ಜಿಲ್ಲೆಯಲ್ಲಿ ಸಂಘಟನೆಯನ್ನು ಹೇಗೆ ಕಟ್ಟಬೇಕು ಎಂಬ ಬಗ್ಗೆ ನಿರ್ದಿಷ್ಟ ಚರ್ಚೆ ನಡೆಯಬೇಕು. ಓಟದ ಸ್ಪರ್ಧೆಯಲ್ಲಿ ಓಡಲು ತಯಾರಾಗಿ ನಿಂತ ಸ್ಪರ್ಧಿಗಳಿಗೆ ಗೆಲ್ಲಲು ಮುಟ್ಟುವ ಗೆರೆಯೊಂದೇ ಗುರಿಯಾಗಿರುತ್ತದೆ. ಅವರಲ್ಲಿ ಪರಸ್ಪರ ಬೇರಾವ ಆತ್ಮೀಯತೆಗೂ ಅಲ್ಲಿ ಆಸ್ಪದ ವಿರುವುದಿಲ್ಲ. ನಮ್ಮ ಸಂಘಟನೆಯಲ್ಲಿ ಹೀಗೆ ಗೆಲ್ಲುವ ಗುರಿಯೊಂದೇ ಬೆಳೆಯಬಾರದು. ಪರಸ್ಪರ ಸಂಬಂಧವನ್ನು ಗಟ್ಟಿಗೊಳಿಸುವ ಗುಣಾತ್ಮಕ ಚರ್ಚೆಗಳು ಏರ್ಪಟ್ಟಾಗ ಪಕ್ಷದಲ್ಲಿನ ಅನೇಕ ಅನಾಹುತಗಳನ್ನು ತಪ್ಪಿಸಬಹುದು ಎಂದು ಅವರು ನುಡಿದರು.

ನಾವು ಸಂಘಟನೆಯಲ್ಲಿ ಕೆಲಸಗಳನ್ನು ಹಂಚಿಕೊಂಡಿದ್ದೇವೆಯೇ? ನಮ್ಮಲ್ಲಿ ಕೆಲಸಗಳು ಕೇಂದ್ರೀಕೃತಗೊಂಡಿವೆಯೇ ಎಂಬುದನ್ನು ಯೋಚಿಸಬೇಕು. ಕಾರ್ಯಕಾರಿಣಿ ಸದಸ್ಯನಾಗಿ ನಮ್ಮ ಕರ್ತವ್ಯವೇನೆಂಬುದು ನಮಗೆ ತಿಳಿದಿರಬೇಕು. ಕೇವಲ ರಾಜ್ಯ ಮಟ್ಟದಿಂದ ಹೇಳಲಾದ ಕೆಲಸಗಳಷ್ಟೇ ನಮ್ಮ ಜವಾಬ್ದಾರಿಗಳಲ್ಲ. ಅದನ್ನು ಮೀರಿ ನಾವು ಸಕಾರಾತ್ಮಕವಾಗಿ ಯೋಚಿಸಿ ಕಾರ್ಯಪ್ರವೃತ್ತರಾಗಬೇಕೆಂದು ಅವರು ಕರೆ ನೀಡಿದರು.

ಕಳೆದ ತಿಂಗಳು 34 ಜಿಲ್ಲೆಗಳಲ್ಲಿ ಕೇವಲ 11 ಜಿಲ್ಲಾ ಸಭೆಗಳು ನಡೆದಿವೆ. ಸರ್ಕಾರಕ್ಕೆ ತೊಂದರೆಯಾದ ಹಿನ್ನೆಲೆಯಲ್ಲಿ ನಮ್ಮ ಸಂಘಟನೆಯ ಕೆಲಸ ನಿಲ್ಲಬಾರದು. ಕುದುರೆ ಮುಖದ ಕಬ್ಬಿಣ ಅದಿರು ನಿರ್ಯಾತ ಕಾರ್ಯದಲ್ಲಿ ಅಲ್ಲಿನ ಅದಿರನ್ನು ಕೆಸರಿನ ರೂಪಕ್ಕೆ ತಂದು ಸಾಗಿಸಲಾಗುತ್ತಿತ್ತು. ಹಾಗೆ ಅದಿರನ್ನು ಕೆಸರಿನ ರೂಪಕ್ಕೆ ತರಲು ಯಂತ್ರವೊಂದು 36 ವರ್ಷಗಳ ಕಾಲ ಒಂದು ನಿಮಿಷವೂ ನಿಲ್ಲದೆ ಕಾರ್ಯವೆಸಗಿತ್ತು. ಅದು ನಿಂತರೆ ಇಡೀ ಯೂನಿಟ್ ಘನರೂಪ ಹೊಂದಿ ಕುದುರೆಮುಖ ಯೋಜನೆಯೇ ನಿಂತುಹೋಗುವ ಸಾಧ್ಯತೆ ಇತ್ತು. ಹೀಗೆ ನಿರಂತರವಾಗಿ ಯಾವುದೇ ಅಡೆ ತಡೆಯಿಲ್ಲದೆ ಕಾರ್ಯವೆಸಗುವ ಪ್ರವೃತ್ತಿ ನಮ್ಮದಾಗಿರಲಿ. ನಮ್ಮ ಕೆಲಸ ಯಾವುದೇ ಬೆಳವಣಿಗೆಗಳ ಪ್ರಭಾವದಿಂದ ಹಿನ್ನಡೆ ಹೊಂದಬಾರದು ಎಂದು ಅವರು ಸಲಹೆ ನೀಡಿದರು.

## ಸಮಾರೋಪ ಸಮಾರಂಭ:

ಸಂಜೆಯ ಸಮಾರೋಪ ಸಮಾರಂಭದಲ್ಲಿ ರಾಜ್ಯಾಧ್ಯಕ್ಷ ಶ್ರೀ ಈಶ್ವರಪ್ಪನವರು ಮಾತನಾಡಿ ನಮ್ಮ ಪಕ್ಷಕ್ಕೆ ಉಜ್ವಲ ಭವಿಷ್ಯವಿದೆ. ನಮ್ಮ ಸರ್ಕಾರ ಗೋ ಹತ್ಯೆ ನಿಷೇಧ ಕಾಯ್ದೆ ಅಂಗೀಕರಿಸಿದಂತೆ ಅನೇಕ ಜನಪರ ಯೋಜನೆಗಳನ್ನು ಜಾರಿಗೊಳಿಸಿದ್ದಕ್ಕೆ ನಾವು ಹೆಮ್ಮೆ ಪಡಬೇಕು. ಇತ್ತೀಚೆಗೆ ಇಷ್ಟೆಲ್ಲಾ ಅವಾಂತರಗಳ ನಡುವೆಯೂ ರೆಸಾರ್ಟನಲ್ಲಿದ್ದ ನಮ್ಮ ಶಾಸಕರೊಬ್ಬರು ನಡುರಾತ್ರಿಯಲ್ಲಿ ಹೊರಬಂದು ಲಕ್ಷಾಂತರ ಕಾರ್ಯಕರ್ತರ ಶ್ರಮದಿಂದ ಕಟ್ಟಲಾದ ನಮ್ಮ ಪಕ್ಷ ಇಂಥ ಅಗ್ನಿ

ಪರೀಕ್ಷೆಗಳನ್ನು ಎದುರಿಸಬೇಕಾಗಿದೆಯಲ್ಲ ಎಂದು ದುಃಖಪಟ್ಟಿದ್ದರು. ಇಂಥ ಮನೋಭಾವವಿರುವವರೆಗೆ ನಮಗೆ ಸೋಲೆಂಬುದಿಲ್ಲ. ಹಿಂದೆ ಜನಸಂಘದ ಕಾಲದಲ್ಲಿ ಯಾವುದೋ ರಾಜ್ಯದಲ್ಲಿ ಒಂದು ಸಣ್ಣ ಚುನಾವಣೆ ಗೆದ್ದರೂ ನಾವು ನಮ್ಮ ಊರಲ್ಲಿ ಪಟಾಕಿ ಹೊಡೆಯುತ್ತಿದ್ದೆವು. ಹೆಂಡ-ಹಣ ಹಂಚದೇ ಗೆದ್ದ ಸಂತೋಷ ನಮ್ಮಲ್ಲಿರುತ್ತಿತ್ತು. ಬರಲಿರುವ ದಿನಗಳಲ್ಲಿ ಎಲ್ಲ ರೀತಿಯ ತ್ಯಾಗ ಮನೋಭಾವದಿಂದ ಸಂಘಟನೆಯನ್ನು ಬಲಪಡಿಸೋಣವೆಂದು ಅವರು ಹಾರೈಸಿದರು.

## ಸಂಘಟನೆ ನಮಗೆ ಸರ್ವೋಚ್ಛ -ಶ್ರೀ ಸತೀಶ್‌ಜಿ.

ಕಾರ್ಯಕಾರಿಣಿಯ ಸಮಾರೋಪ ಭಾಷಣ ಮಾಡಿದ ಬಿಜೆಪಿ ರಾಷ್ಟ್ರೀಯ ಸಂಘಟನಾ ಸಹಕಾರ್ಯದರ್ಶಿ ಶ್ರೀ ಸತೀಶ್‌ಜಿಯವರು ನಮ್ಮದು ವ್ಯಕ್ತಿ ಆಧಾರಿತ ಪಕ್ಷವಲ್ಲ, ಸಂಘಟನೆಯೇ ನಮಗೆ ಸರ್ವೋಚ್ಛ ಎಂದು ಪುನರುಚ್ಚರಿಸಿದರು.

ಇಂದಿನ ಕಾರ್ಯಕಾರಿಣಿ ಸಭೆಯಲ್ಲಿ ನಡೆದ ಸಕಾರಾತ್ಮಕ ಚರ್ಚೆ, ಸಂವಾದಗಳಿಗಿಂತ ಹೆಚ್ಚಾಗಿ ಮಾಧ್ಯಮಗಳಿಗೆ ಇಂದಿನ ಅನುಪಸ್ಥಿತಿಯ ಬಗ್ಗೆಯೇ ಹೆಚ್ಚಿನ ಒಲವು ಉಂಟಾಗಿದ್ದು ಅದನ್ನೇ ಎತ್ತಿ ಪ್ರಸಾರ ಮಾಡುತ್ತಿವೆ. ಇಲ್ಲಿಯ ಗುಣಾತ್ಮಕ ಚರ್ಚೆಗಳ ಬಗ್ಗೆ ಅವು ಪ್ರಸ್ತಾಪಿಸುತ್ತಿಲ್ಲವೆಂದು ತಿಳಿದು ಬಂದಿದೆ. ನಾವು ಆ ಬಗ್ಗೆ ಚಿಂತಿಸಬೇಕಿಲ್ಲ. ನಮಗೇನು ಬೇಕೋ ಆ ಬಗ್ಗೆ ನಾವು ಚರ್ಚಿಸಿದ್ದೇವೆ, ನಮಗೆ ಅದೇ ಮುಖ್ಯ ಎಂದು ಅವರು ವಿಶ್ಲೇಷಿಸಿದರು.

ಗುಜರಾತ್‌ನ ಖತ್ಲಾಲ್ ಕ್ಷೇತ್ರದ ಉಪಚುನಾವಣೆ ಫಲಿತಾಂಶ ಕಾಂಗ್ರೆಸ್ಸಿಗೆ ದಿಗ್ಭ್ರಮೆ ಉಂಟುಮಾಡಿದೆ. ಈವರೆಗೆ ಎಂದೂ ಕಾಂಗ್ರೆಸ್ ಸೋಲದ, ಶೇ. 50 ರಷ್ಟು ಅಲ್ಪ ಸಂಖ್ಯಾತರನ್ನು ಹೊಂದಿದ ಆ ಕ್ಷೇತ್ರದಲ್ಲಿ ಮೊಟ್ಟ ಮೊದಲಿಗೆ ಬಿಜೆಪಿ ಗೆದ್ದಿರುವುದು ಕಾಂಗ್ರೆಸ್‌ಗೆ ನುಂಗಲಾರದ ತುತ್ತಾಗಿದೆ. 106 ಮುಸ್ಲಿಂ ಹಾಗೂ 6 ಕ್ರಿಶ್ಚಿಯನ್ ಬಿಜೆಪಿ ಅಭ್ಯರ್ಥಿಗಳ ಗೆಲುವಿನೊಂದಿಗೆ ಗುಜರಾತ್ ನಗರಸಭೆ ಚುನಾವಣೆಯನ್ನು ಗೆದ್ದಿರುವ ಬಿಜೆಪಿ ಕಾಂಗ್ರೆಸ್‌ನ್ನು ಪರಾಭವಗೊಳಿಸಿದೆ ಎಂದು ಅವರು ವಿವರ ನೀಡಿದರು.

ಬರಲಿರುವ ಬಿಹಾರ್ ಚುನಾವಣೆಯಲ್ಲೂ ನಾವು ಗೆಲ್ಲುವ ಭರವಸೆಯಿದೆ. ಆಂಧ್ರದ ಉಪ ಚುನಾವಣೆಯನ್ನು 12,000 ಅಧಿಕ ಮತಗಳಿಂದ ಜಯಿಸಿದ್ದೇವೆ. ಗುಜರಾತ್ ಸಹಕಾರಿ ರಂಗದ ಚುನಾವಣೆಯಲ್ಲಿ ಶೇ. 70 ರಷ್ಟು ಸ್ಥಾನ ಗೆದ್ದಿದ್ದೇವೆ ಎಂದು ಅವರು ತಿಳಿಸಿದರು.

ಮುಂಬೈನಲ್ಲಿ "ಉತ್ತಮ ಆಡಳಿತ"ದ ಬಗ್ಗೆ ಕಾರ್ಯಾಗಾರ ನಡೆಸಲಾಗಿದೆ. ರಂಗನಾಥ ಮಿಶ್ರಾ ವರದಿ ವಿರುದ್ಧ ದೇಶಾದ್ಯಂತ ಪ್ರತಿಭಟನೆ ನಡೆಸಿದ್ದೇವೆ. ಹೀಗೆ ಎಲ್ಲಾ ಹಂತಗಳಲ್ಲೂ ನಾವು ಕ್ರಿಯಾಶೀಲತೆ ಮೆರೆದಿದ್ದೇವೆ. 2009 ರ ನಂತರ ಇಡೀ ದೇಶದಲ್ಲಿ ಬಿಜೆಪಿಯ ಮತದ ಪ್ರಮಾಣ (vote share) ಹೆಚ್ಚಿದೆ ಎಂದು ಅವರು ತಿಳಿಸಿದರು.

ನಮ್ಮದು ಸಾಂಘಿಕ ನಾಯಕತ್ವ ಹಾಗೂ ಸಂಘಟನೆಯಾಧಾರಿತ ಪಕ್ಷವಾಗಿದೆ. ನಾವು ಒಂದು ತಂಡವಾಗಿ ಕೆಲಸಮಾಡಬೇಕು. ಮಾನವೀಯ ಸಂಬಂಧಗಳಿಗೆ ಪರ್ಯಾಯವೆಂಬುದಿಲ್ಲ. **Share & Care** (ಹಂಚಿಕೊಳ್ಳುವುದು-ನಿಗಾವಹಿಸುವುದು) ಇದು ನಮ್ಮ ಮಾರ್ಗವಾಗಿರಬೇಕು ಎಂದು ಅವರು ಸ್ಪಷ್ಟಪಡಿಸಿದರು.

ಒಂದು ಕಾಲವಿತ್ತು. ದೀಪ ಮೇ ತೇಲ್‌ನಹೀ - ರಾಜ ಚಲಾನಾ ಖೇಲ್ ನಹೀ (ದೀಪದಲ್ಲಿ ಎಣ್ಣೆಯಿಲ್ಲ, ರಾಜ್ಯವಾಳುವುದು ಆಟವಲ್ಲ) ಎಂದು ಅಂದಿನ ಜನಸಂಘವನ್ನು (ದೀಪದ ಚಿಹ್ನೆ) ವಿರೋಧಿಗಳು ಗೇಲಿ ಮಾಡುತ್ತಿದ್ದರು. "ನೀವೇನು ವಿದೇಶ ನೀತಿಯ ಬಗ್ಗೆ ವಿವರಿಸುವುದು, ನಿಮ್ಮಲ್ಲಿ ಯಾರಾದರೂ ವಿದೇಶ ಹೇಗಿದೆ ಎಂದು ನೋಡಿದ್ದೀರೋ" ಎಂದು ನೆಹರೂರವರು ಜನಸಂಘದ ಅಂದಿನ ನಾಯಕರನ್ನು ಮೂದಲಿಸುತ್ತಿದ್ದರು. ಅಂದು ಬೀಜಾಂಕುರ ಸ್ಥಿತಿಯಲ್ಲಿದ್ದ ಪಕ್ಷ ಇಂದು ಹೆಮ್ಮರವಾಗಿ ಬೆಳೆಯಲು ನಮ್ಮ ತಾಳ್ಮೆ, ಸಹೃದಯತೆ ಎಲ್ಲವೂ ಕಾರಣ ಎಂದು ಶ್ರೀ ಸತೀಶ್‌ಜಿ ವಿವರಿಸಿದರು.

ಕೇರಳದಲ್ಲಿ ಗಾಡಿಯ ಮೇಲೆ ಬಾಳೆಹಣ್ಣು ಮಾರಿ ಜೀವಿಸುವ ಪಕ್ಷದ ಕಾರ್ಯಕರ್ತನೊಬ್ಬ ಸಂಘಟನೆಗೋಸ್ಕರ ಪ್ರಾಣ ಬಿಟ್ಟಿದ್ದಾನೆ. ಈ ಸಂಘಟನೆಗೋಸ್ಕರ ಎಷ್ಟೋ ಜನ ಪ್ರಾಣ ತ್ಯಜಿಸಿದ್ದಾರೆ. ಒಂದು ದಿನ ಈ ಪಕ್ಷ ಅಧಿಕಾರಕ್ಕೆ ಬರಲಿದೆ ಎಂಬ ಆಶಾಭಾವನೆಯಿಂದ ಕೋಟ್ಯಾಂತರ ಕಾರ್ಯಕರ್ತರು ದಶಕಗಳ ಕಾಲದಿಂದ ಕೆಲಸ ಮಾಡುತ್ತಾ ಬಂದಿದ್ದಾರೆ. ಅಧಿಕಾರದ ಎಲ್ಲಾ ಹುದ್ದೆಗಳು ಸೇರಿ ಕೆಲವು ಲಕ್ಷದಷ್ಟಾಗಬಹುದು. ಆದರೆ ಕಾರ್ಯಕರ್ತರು ಕೋಟಿಗಟ್ಟಲೇ ಇದ್ದಾರೆ. ತನಗೆ ಜೀವಮಾನವಿಡೀ ಯಾವುದೇ ಸ್ಥಾನ ಸಿಗದೇ ಹೋಗಬಹುದೆಂದು ಗೊತ್ತಿದ್ದೂ ಹಲವಾರು ಕಾರ್ಯಕರ್ತರು ಪಕ್ಷಕ್ಕಾಗಿ ಜೀವ ಸವೆಸಿದ್ದಾರೆ. ಆದರೆ ಅರ್ಥಕಾ ಅಭಾವ-ಅರ್ಥಕಾ ಪ್ರಭಾವ (ಹಣದ ಕೊರತೆ ಹಾಗೂ ಹಣದ ಪ್ರಭಾವ) ಎರಡೂ ಮನುಷ್ಯನನ್ನು ಹಾಳು ಮಾಡಬಹುದು ಎಂದು ಪಂ. ದೀನದಯಾಳಜಿ ಹೇಳುತ್ತಿದ್ದರು. ಸಂಘಟನೆಯಲ್ಲಿ ಹಣ, ಅಧಿಕಾರದ ಬಗ್ಗೆ ನಿರ್ಲಿಪ್ತತೆ ಬಹುಮುಖ್ಯ ಎಂದು ಶ್ರೀ ಸತೀಶ್‌ಜಿ ವಿವರಿಸಿದರು.

ಸಂಸದರು, ಶಾಸಕರು, ಮಹಾಪೌರರು ಇವರೆಲ್ಲಾ ಪಕ್ಷದ ಎಷ್ಟು ಸಭೆಗಳಲ್ಲಿ ಭಾಗವಹಿಸುತ್ತಾರೆ? ಕೆಲವು ನಾಯಕರು, ಜನ ಪ್ರತಿನಿಧಿಗಳು ಸಂಘಟನೆಯೊಂದಿಗೆ ಸಂಪರ್ಕ ಹೊಂದಿರುವುದಿಲ್ಲ. ಅವರ ಮನವೊಲಿಸಿ ಕ್ರಿಯಾಶೀಲರನ್ನಾಗಿಸಬೇಕಿದೆ ಎಂದು ಅವರು ಕರೆನೀಡಿದರು.

**If party survives-every thing survives, if not - nothing survives** (ಪಕ್ಷ ಉಳಿದರೆ ಎಲ್ಲವೂ ಉಳಿಯುತ್ತದೆ, ಇಲ್ಲವಾದಲ್ಲಿ ಏನೂ ಉಳಿಯಲಾರದು). ನಾವು ಅಧಿಕಾರಕ್ಕೆ ಬಂದನಂತರ ಉಂಟಾಗಬಹುದಾದ ವಿಕಾರಗಳ ಬಗ್ಗೂ ಯೋಚಿಸಬೇಕಾಗಿದೆ ಎಂದು ಅವರು ತಿಳಿಸಿದರು.

ಇಲ್ಲಿ ಸಂಘಟನೆ ಸಾಕಷ್ಟು ಸಾಕಷ್ಟು ಕ್ರಿಯಾಶೀಲವಾಗಿದೆ. ಸರ್ಕಾರವೂ ಉತ್ತಮ ಕೆಲಸ ಮಾಡುತ್ತಿದೆ. ಆದರೆ ನಮ್ಮ ಸಂಘಟನೆಯಲ್ಲಿನ ಕೊರತೆಯ ಬಗ್ಗೂ ಚಿಂತಿಸಬೇಕಿದೆ. ಕೊರತೆ ನಮ್ಮೆಲ್ಲರಲ್ಲೂ ಇರಬಹುದು. ನಾವೆಲ್ಲರೂ ಸೇರಿ ಸಂಯಮದಿಂದ ಯೋಚಿಸಿ ಪರಿಹಾರ ಕಂಡುಕೊಳ್ಳಬೇಕಿದೆ. ಪ್ರತಿ ಪ್ರಾಂತದಲ್ಲೂ ನಮ್ಮ ಸಂಘಟನೆ ಬಲಗೊಂಡು 2014ರ ಹೊತ್ತಿಗೆ ಕೇಂದ್ರದಲ್ಲೂ ನಮ್ಮ ಸರ್ಕಾರ ರಚನೆಯಾಗಿ, ಸಮಾಜಮುಖಿಯಾಗಿ ನಮ್ಮ ಆಡಳಿತ ಎದ್ದು ನಿಲ್ಲುವಂತಾಗಬೇಕೆಂದು ಅವರು ಆಶಿಸಿದರು.

ನಾವು ಮೊದಲು ನಮ್ಮನ್ನು ಗೆಲ್ಲಬೇಕಿದೆ. **Human Relation** (ಮಾನವೀಯ ಸಂಬಂಧ)ಗಳಿಂದಲೇ ನಾವು ಪರಿಸ್ಥಿತಿಯನ್ನು ನಿಭಾಯಿಸಬಹುದು. ಕಾರ್ಯಕರ್ತರಿಗೆ ಎರಡು ನಿಮಿಷ ನೀಡದವ ಹೇಗೆ ನಾಯಕನಾಗುತ್ತಾನೆ? ಕಾರ್ಯಕರ್ತನಾದವನೂ ನಾಯಕರ ತೊಂದರೆ, ಸಮಯದ ಅಭಾವದ ಬಗ್ಗೆ ಯೋಚಿಸಬೇಕು. ಒಟ್ಟಿನಲ್ಲಿ ಇದು ಮಾನವೀಯ ಸಂಬಂಧದ ಸಮಸ್ಯೆಯಾಗಿದೆ ಎಂದು ಅವರು ವಿಶ್ಲೇಷಿಸದರು.

ಈ ಸವಾಲಿನ ಕಾಲಘಟ್ಟದಲ್ಲಿ ಕಾರ್ಯಕಾರಿಣಿ ಸಭೆ ನಡೆದಿದೆ. ಈ ರಾಜ್ಯದ ಮಟ್ಟಿಗೆ ಹೇಳುವುದಾದರೆ ಸಮಸ್ಯೆ ಏನಾದರೂ ಇದ್ದರೆ ಅದು **war within** (ನಮ್ಮೊಳಗಿನ ಯುದ್ಧ)ವಾಗಿದ್ದು ಇದನ್ನು ನಾವು ಗೆಲ್ಲಲೇ ಬೇಕಿದೆ. ನಮ್ಮ "ವಿಕಾರ"ಗಳ ಮೇಲೆ ನಾವು ವಿಜಯ ಸಾಧಿಸಲೇಬೇಕಿದೆ.

26 ಲಕ್ಷ ಸದಸ್ಯ ಪಡೆಯ ಬಲ ರಾಜ್ಯ ಬಿಜೆಪಿಗೆ ಇದ್ದು, ಕೆಲವೇ ವ್ಯಕ್ತಿಗಳಿಂದಾಗಿ ಸಂಘಟನೆಯನ್ನು ಹಾಳುಗೆಡವುವಂತಿಲ್ಲ ಎಂಬುದನ್ನು ನಾವು ನೆನಪಿನಲ್ಲಿಡಬೇಕಾಗಿದೆ ಎಂದು ಶ್ರೀ ಸತೀಶ್‌ಜಿ ಮಾರ್ಮಿಕವಾಗಿ ನುಡಿದರು.

ಶ್ರೀ ಮೈ.ವಿ. ರವಿಶಂಕರ್ ವಂದನಾರ್ಪಣೆಗೈದರು. ರಾಜ್ಯ ಕಾರ್ಯದರ್ಶಿ ಶ್ರೀಮತಿ ಶರ್ವಾಣಿಯವರು ಕಾರ್ಯಕ್ರಮ ನಿರೂಪಿಸಿದರು.

ಸಂಘಟನೆಗೆ ಹೆಚ್ಚು ಶಕ್ತಿ ತುಂಬುವ ದಿಕ್ಕಿನಲ್ಲಿ ಹಾಗೂ ಬರಲಿರುವ ಚುನಾವಣೆಗಳನ್ನು ಹೆಚ್ಚು ಸಮರ್ಪಕವಾಗಿ ಎದುರಿಸುವ ದಿಕ್ಕಿನಲ್ಲಿ ಮೈಸೂರಿನ ಒಂದು ದಿನದ ರಾಜ್ಯ ಬಿಜೆಪಿ ಕಾರ್ಯಕಾರಿಣಿ ಹೆಚ್ಚಿನ ಬೆಳಕನ್ನು ಚೆಲ್ಲಿದೆ.

---

## ನಿರ್ಣಯ–1

ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಬಡತನ ನಿರ್ಮೂಲನೆಯ 20 ಅಂಶ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಕರ್ನಾಟಕ ಸರ್ಕಾರವು ದೇಶದಲ್ಲೇ 2ನೇ ಸ್ಥಾನದಲ್ಲಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಚಾರವಾಗಿದೆ. ಈ ಸಾಧನೆಗಾಗಿ ಜನಪ್ರಿಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್ ಯಡಿಯೂರಪ್ಪನವರಿಗೆ ಹಾಗೂ ಅವರ ಸಚಿವ ಸಂಪುಟ ಸಹೋದ್ಯೋಗಿಗಳಿಗೆ ರಾಜ್ಯ ಕಾರ್ಯಕಾರಿಣಿಯು ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಹನ್ನೊಂದು ಜನ ಶಾಸಕರನ್ನು ಪಕ್ಷಾಂತರ ನಿಷೇಧ ಕಾನೂನಿನನ್ವಯ ವಿಧಾನಸಭಾಧ್ಯಕ್ಷರು ಅನರ್ಹಗೊಳಿಸಿದ್ದ ವಿಚಾರದಲ್ಲಿ ರಾಜ್ಯ ಉಚ್ಚ ನ್ಯಾಯಾಲಯದ ತ್ರಿಸದಸ್ಯ ಪೀಠವು ಸಭಾಧ್ಯಕ್ಷರ ನಿರ್ಣಯದ ಪರವಾಗಿ ತೀರ್ಪು ನೀಡಿತು. ಸಭಾಧ್ಯಕ್ಷರ ನ್ಯಾಯಬದ್ದ ನಡವಳಿಕೆಯನ್ನು ನ್ಯಾಯಾಲಯವು ಎತ್ತಿ ಹಿಡಿದದ್ದು ಸಂತಸದ ಸಂಗತಿಯಾಗಿದೆ. ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷರು ಕೈಗೊಂಡ ನಿರ್ಣಯದಿಂದ ಪಕ್ಷಾಂತರಗಳ ಮೂಲಕ ಸರ್ಕಾರ ಉರುಳಿಸುವ ಅವಕಾಶವಾದಿ ರಾಜಕೀಯಕ್ಕೆ ಮುಂಬರುವ ದಿನಗಳಲ್ಲಿ ತೆರೆ ಎಳೆಯಲಿದೆ.

ಉಚ್ಚ ನ್ಯಾಯಾಲಯದ ಈ ತೀರ್ಪು ಮುಂಬರುವ ದಿನಗಳಲ್ಲಿ ಅವಕಾಶವಾದಿಗಳಿಗೆ ಮತ್ತು ಪಕ್ಷಾಂತರಿಗಳಿಗೆ ಗದಾಪ್ರಹಾರವಾಗಲಿದೆ. ಚುನಾಯಿತ ಸರ್ಕಾರಗಳನ್ನು ಅಸ್ಥಿರಗೊಳಿಸುವ ಶಕ್ತಿಗಳಿಗೆ ನ್ಯಾಯಾಲಯದ ಈ ನಿರ್ಣಯ ಮಾರಣಾಂತಿಕ ಹೊಡೆತವನ್ನು ನೀಡಿದೆಯಲ್ಲದೆ ಸುಭದ್ರ ಸರ್ಕಾರ ನೀಡಲು ಸಹಕಾರಿಯಾಗುವುದು. ಈ ತೀರ್ಪಿನಿಂದ ರಾಜಕೀಯ ಶುದ್ಧೀಕರಣಕ್ಕೆ ಅನುಕೂಲವಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಕರ್ನಾಟಕದ ಇತ್ತೀಚಿನ ರಾಜಕೀಯ ಬೆಳವಣಿಗೆಯು ಪಕ್ಷಾಂತರ ನಿಷೇಧ ಕಾಯಿದೆಯ ಕೊರತೆಯನ್ನು ಬಯಲು ಮಾಡಿದೆ. ಪ್ರಲೋಭನೆಗೊಳಗಾಗಿ ಚುನಾಯಿತ ಸರ್ಕಾರವನ್ನು ಉರುಳಿಸುವ ಶಾಸಕರ ನಡವಳಿಕೆಗೆ ಕಡಿವಾಣ ಹಾಕುವ ಉದ್ದೇಶದಿಂದ ಅನರ್ಹಗೊಳ್ಳುವ ಶಾಸಕರಿಗೆ 6 ವರ್ಷಗಳ ಕಾಲ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡದಂತೆ ಚುನಾವಣಾ ಕಾಯಿದೆಗೆ ತಿದ್ದುಪಡಿಯನ್ನು ತರಬೇಕು ಎಂದು ಒತ್ತಾಯಿಸುತ್ತೇವೆ.

ಇತ್ತೀಚೆಗೆ ನಡೆದ ಉಪಚುನಾವಣೆಯಲ್ಲಿ ಕಡೂರು ಕ್ಷೇತ್ರದಿಂದ ಪಕ್ಷದ ಅಭ್ಯರ್ಥಿಯನ್ನು ಜಯಗೊಳಿಸಿದ ಮತ್ತು ಗುಲ್ಬರ್ಗಾ ಕ್ಷೇತ್ರದಲ್ಲಿ ಪಕ್ಷಕ್ಕೆ ಮತವನ್ನು ನೀಡಿದ ಮತದಾರರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಕರ್ನಾಟಕ ರಾಜಕೀಯ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಶ್ರೀ ಬಿ.ಎಸ್.ಯಡಿಯೂರಪ್ಪನವರ ನೇತೃತ್ವದಲ್ಲಿ ಬಿಜೆಪಿ ಸರ್ಕಾರವು ಸ್ಥಾಪನೆಯಾಗಿರುವುದನ್ನು ಸಹಿಸದ ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷಗಳು ಕಳೆದ 30 ತಿಂಗಳಿನಿಂದಲೂ ಸರ್ಕಾರವನ್ನು ಅಸ್ಥಿರಗೊಳಿಸುವ ಒಂದಂಶದ ಕಾರ್ಯಕ್ರಮಕ್ಕಾಗಿಯೇ ತನ್ನ ಎಲ್ಲಾ ಚಟುವಟಿಕೆಗಳನ್ನು ಮೀಸಲಿಟ್ಟಿರುವುದು ಅತ್ಯಂತ ಶೋಚನೀಯ ವಿಚಾರವಾಗಿದೆ.

ಸರ್ಕಾರವನ್ನು ಉರುಳಿಸಲು ಮತ್ತು ರಾಷ್ಟ್ರಪತಿ ಆಡಳಿತವನ್ನು ರಾಜ್ಯದಲ್ಲಿ ಜಾರಿಗೆ ತರಲು ಪ್ರತಿಪಕ್ಷಗಳು ಮಾಡುತ್ತಿರುವ ಷಡ್ಯಂತರಗಳಿಂದ ರಾಜ್ಯದಲ್ಲಿ ಆರೋಗ್ಯಕರ ರಾಜಕಾರಣಕ್ಕೆ ತೀವ್ರವಾದ ಧಕ್ಕೆಯಾಗಿದೆ.

ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷಗಳು ಪ್ರಜಾಪ್ರಭುತ್ವ ಮೌಲ್ಯಗಳನ್ನು ಗಾಳಿಗೆ ತೂರಿ ನಡೆದುಕೊಳ್ಳುತ್ತಿರುವ ವರ್ತನೆಯು ಅತ್ಯಂತ ನಾಚಿಗೇಡಿನ ಸಂಗತಿಯಾಗಿದೆ. ಈ ಪಕ್ಷಗಳಿಗೆ ಇಂದು ಜನಾದೇಶವನ್ನು ಗೌರವಿಸುವ ಸೌಜನ್ಯವೂ ಇಲ್ಲವಾಗಿದೆ. ಮತ್ತು ಜನತೆಯ ತೀರ್ಪನ್ನು ಒಪ್ಪಿಕೊಂಡು ಜವಾಬ್ದಾರಿಯುತ ವಿರೋಧಪಕ್ಷವಾಗಿ ಕರ್ತವ್ಯ ನಿರ್ವಹಿಸುವ ಸಹನೆಯನ್ನು ಕಳೆದುಕೊಂಡಿವೆ. ನ್ಯಾಯಬದ್ದ ಚುನಾಯಿತ ಸರ್ಕಾರವನ್ನು ಕಾರ್ಯನಿರ್ವಹಿಸಲು ಹಲವಾರು ಅಡ್ಡಿ ಆತಂಕಗಳನ್ನು ಸೃಷ್ಟಿಸಿ ಜನತೆಯ ಆಶಯಕ್ಕೇ ವಿರುದ್ದವಾಗಿ ವರ್ತಿಸುತ್ತಿದ್ದಾರೆ.

ಜೆಡಿ(ಎಸ್) ಮುಖಂಡರುಗಳಾದ ಮಾಜಿ ಪ್ರಧಾನ ಹಾಗೂ ಜೆಡಿ(ಎಸ್) ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ದೇವೆಗೌಡರು ಮತ್ತು ಅವರ ಸುಪುತ್ರ ರಾಜ್ಯ ಜೆಡಿ(ಎಸ್)ಅಧ್ಯಕ್ಷರಾದ ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರುಗಳು ಚುನಾಯಿತ ಸರ್ಕಾರಗಳನ್ನು ಅಸ್ಥಿರಗೊಳಿಸುವ ಗುತ್ತಿಗೆಯನ್ನು ಪಡೆದಿರುವಂತೆ ನಡೆದುಕೊಳ್ಳುತ್ತಿದ್ದಾರೆ.

ತಂದೆಯ ಹಾದಿಯಲ್ಲಿಯೇ ಸಾಗುತ್ತಿರುವ ಶ್ರೀ ಕುಮಾರಸ್ವಾಮಿಯವರು ವಿಧಾನಸಭೆಯಲ್ಲಿ ಕೇವಲ 28 ಸ್ಥಾನಗಳನ್ನು ಹೊಂದಿದ್ದರೂ ಕೂಡಾ ಬಿಜೆಪಿಯ 11 ಶಾಸಕರನ್ನು ಚೆನ್ನೈ–ಮುಂಬಯಿ–ಗೋವಾ ಮತ್ತು ಚೆನ್ನೈಗಳಿಗೆ ಕರೆದೊಯ್ದು ಅವರ ಬೆಂಬಲದಿಂದ ಸರ್ಕಾರವನ್ನು ರಚಿಸಲು ಹಗಲುಗನಸು ಕಂಡಿದ್ದರು. ಆದರೆ ಧರ್ಮಯುದ್ದದಲ್ಲಿ ಧರ್ಮಕ್ಕೆ ಜಯವಾಗಿ ಇವರ ಕನಸು ಛಿದ್ರವಾಯಿತು.

ಶ್ರೀ ಕುಮಾರಸ್ವಾಮಿಯವರ ಸ್ವಾರ್ಥ ರಾಜಕಾರಣ ಹಾಗೂ ವಿವೇಕ ಶೂನ್ಯ ತಂತ್ರಗಾರಿಕೆ ಫಲದಿಂದ ಬಿಜೆಪಿಯ 11 ಬಂಡಾಯ ಶಾಸಕರು ವಿಧಾನಸಭಾ ಸ್ಥಾನದಿಂದ ಅನರ್ಹಗೊಂಡು ಇವರ ಷಡ್ಯಂತ್ರಕ್ಕೆ ಬಲಿಯಾಗಿದ್ದಾರೆ. ಇನ್ನು ಐದು ಪಕ್ಷೇತರರು ತಮ್ಮ ಸರದಿಗಾಗಿ ಕಾಯುತ್ತಿರುವುದು ಇವರ ಅತಂತ್ರ ಪರಿಸ್ಥಿತಿಗೆ ಕನ್ನಡಿಯನ್ನು ಹಿಡಿದಿದೆ.

ಒಂದು ಕುಟುಂಬದ ಮೂವರು ಸದಸ್ಯರುಗಳು ಕರ್ನಾಟಕ ರಾಜ್ಯವು ತಮ್ಮ ಮುಷ್ಟಿಯಲ್ಲಿರಬೇಕು ಅಥವಾ ತಮ್ಮ ತಾಳಕ್ಕೆ ಕುಣಿಯವ ಸರ್ಕಾರವು ಸ್ಥಾಪನೆಯಾಗಬೇಕು ಎಂಬ ಮಹತ್ವಾಕಾಂಕ್ಷೆಯು ರಾಜ್ಯದ ರಾಜಕೀಯವನ್ನು ಕಲುಷಿತಗೊಳಿಸಿದೆ.

ಇವರ ಕುಟಿಲ ರಾಜಕೀಯಕ್ಕೆ ತೆರೆಮರೆಯಲ್ಲಿ ಬೆಂಬಲವನ್ನು ನೀಡುತ್ತಿರುವ ಕಾಂಗ್ರೆಸ್ ಮುಖಂಡರುಗಳು ಅತ್ಯಂತ ಅಪಾಯಕಾರಿ ಬೆಳವಣಿಗೆಗಳಿಗೆ ನೇರ ಹೊಣೆಯನ್ನು ಹೊರಬೇಕಾಗಿದೆ.

ವಿರೋಧಪಕ್ಷದ ನಾಯಕ ಶ್ರೀ ಸಿದ್ದರಾಮಯ್ಯನವರು ಈಗಾಗಲೇ ಜೆಡಿ(ಎಸ್) ಮುಖಂಡರಿಂದ ಒಮ್ಮೆ ವಂಚಿತರಾಗಿ ಪಕ್ಷದಿಂದ ಹೊರಬಂದು ಕಾಂಗ್ರೆಸ್ ಆಶ್ರಯ ಪಡೆಯುವ ದಯನೀಯ ಪರಿಸ್ಥಿತಿಗೆ ತಲುಪಿದ್ದರೂ ಸಹಾ ಬುದ್ದಿ ಕಲಿತಿಲ್ಲ.

ಶ್ರೀ ಹೆಚ್.ಡಿ.ಕುಮಾರಸ್ವಾಮಿಯವರ ಮಾತನ್ನು ನಂಬಿಕೊಂಡು ತಮ್ಮನ್ನು ಮುಖ್ಯಮಂತ್ರಿ ಮಾಡುತ್ತಾರೆ ಎಂಬ ಭ್ರಮೆಯಿಂದ ಕಾಂಗ್ರೆಸ್ ಈ ರಾಜ್ಯದ ಪ್ರಮುಖ ವಿರೋಧಪಕ್ಷ ಎಂಬ ಸಂಗತಿಯನ್ನು ನಿರ್ಲಕ್ಷಿಸಿ ಜೆಡಿ(ಎಸ್) ಬಾಲಂಗೋಚಿಯಾಗಿ ಕಾಂಗ್ರೆಸ್ ಪಾರ್ಟಿಯನ್ನು ಬದಲಾಯಿಸಿದ ಅಪಕೀರ್ತಿ ಶ್ರೀ ಸಿದ್ದರಾಮಯ್ಯನವರಿಗೆ ಸಲ್ಲುತ್ತದೆ.

ಜನತಾ ಪರಿವಾರದ ಹಿನ್ನೆಲೆಯವರು ತಮ್ಮ ಪೂರ್ವಾಶ್ರಮದ ಪ್ರಭಾವದಿಂದ ಮೂಲ ಕಾಂಗ್ರೆಸ್ಸಿಗರನ್ನು ಮೂಲೆಗುಂಪು ಮಾಡಿ ಸರ್ಕಾರ ರಚಿಸುವ ದುಸ್ಸಾಹಸಕ್ಕೆ ಮುಂದಾಗಿ ಪಕ್ಷದ ಗೌರವನ್ನು ಮಣ್ಣುಪಾಲು

ಮಾಡಿರುವುದು ಇಂದು ಇತಿಹಾಸವಾಗಿದೆ.

ವಿರೋಧ ಪಕ್ಷದ ಸದಸ್ಯರು ವಿಧಾನ ಸಭೆಯಲ್ಲಿ ಬಹುಮತ ಸಾಬೀತು ಪಡಿಸುವ ಸಂದರ್ಭದಲ್ಲಿ ವಿಧಾನಸೌಧದ ಎದುರು ಮತ್ತು ಸಭೆಯಲ್ಲಿ ನಡೆದುಕೊಂಡ ರೀತಿ ಕರ್ನಾಟಕ ಜನತೆಯು ತಲೆ ತಗ್ಗಿಸುವಂತಹ ಕೃತ್ಯವಾಗಿದೆ. ವಿರೋಧ ಪಕ್ಷಗಳ ಈ ನಡವಳಿಕೆಯಿಂದ ವಿಧಾನ ಸಭೆಯ ಇತಿಹಾಸದಲ್ಲಿ ಕಪ್ಪುಚುಕ್ಕೆಯಾಗಿದೆ. ಈ ಸಭೆಯು ವಿರೋಧ ಪಕ್ಷಗಳ ನಡವಳಿಕೆಯನ್ನು ತೀವ್ರವಾಗಿ ಖಂಡಿಸುತ್ತದೆ.

ಕಳೆದ ಎರಡೂವರೆ ವರ್ಷಗಳಲ್ಲಿ ಭಾಗ್ಯಲಕ್ಷ್ಮೀ ಯೋಜನೆ, ಗ್ರಾಮೀಣ ವಿದ್ಯಾರ್ಥಿಗಳಿಗೆ ಸೈಕಲ್ ವಿತರಣೆ, ವಾಜಪೇಯಿ ಆರೋಗ್ಯಶ್ರೀ ಯೋಜನೆ, ರೈತ ಭಾಂದವರಿಗೆ ಶೇಕಡಾ 3ರಷ್ಟು ಬಡ್ಡಿಯಲ್ಲಿ ಸಾಲ, ಮುಂದಿನ ವರ್ಷದಿಂದ ಶೇಕಡಾ 1 ರಷ್ಟು ಬಡ್ಡಿ ದರದಲ್ಲಿ ಸಾಲ ನೀಡಿಕೆಯ ಘೋಷಣೆ ಮುಂತಾದ ಜನಪರ ಕಾರ್ಯಕ್ರಮಗಳಿಂದ ರಾಜ್ಯ ಬಿಜೆಪಿ ಸರ್ಕಾರವು ಜನಮನ್ನಣೆಗಳಿಸಿದೆ.

ಸರ್ಕಾರವು ಇತ್ತೀಚಿನ ರಾಜಕೀಯ ಬೆಳವಣಿಗೆಗಳಿಂದ ಹೊಸ ಸವಾಲನ್ನು ಎದುರಿಸಲು ಸಜ್ಜಾಗಬೇಕಿದೆ. ದೇಶದ ಇತಿಹಾಸದಲ್ಲಿಯೇ ಒಂದೇ ವಾರದಲ್ಲಿ ಎರಡು ಬಾರಿ ವಿಶ್ವಾಸಮತ ಯಾಚನೆ ಮಾಡಿ ಸಫಲರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರ ನೇತೃತ್ವದ ಬಿಜೆಪಿ ಸರ್ಕಾರಕ್ಕೆ ಇಂದು ಹೆಚ್ಚಿನ ಹೊಣೆಗಾರಿಕೆಯು ಹೆಗಲ ಮೇಲಿದೆ. ಕಳೆದ 25 ದಿನಗಳ ಕಹಿ ಘಟನೆಗಳಿಂದ ರಾಜ್ಯದ ಜನತೆಗೆ ರಾಜಕಾರಣಿಗಳ ಮೇಲಿನ ವಿಶ್ವಾಸವು ಕುಂದಿದೆ. ಜನರ ವಿಶ್ವಾಸವನ್ನು ಮತ್ತೆ ಪಡೆಯಲು ಸರ್ಕಾರವು ತ್ವರಿತ ವೇಗದಲ್ಲಿ ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

ಕಳೆದ ವರ್ಷ ರಾಜ್ಯದ ಇತಿಹಾಸದಲ್ಲಿ ಕಂಡರಿಯದ ನೆರೆಯಿಂದ ಲಕ್ಷಾಂತರ ಸಂತ್ರಸ್ತರು ಸಂಕಷ್ಟಕ್ಕೆ ಒಳಗಾಗಿದ್ದರು. ನಿರ್ವಸಿತರಿಗೆ ನಿರ್ಮಿಸಬೇಕಿದ್ದ ಆಸರೆ ಮನೆಗಳ ನಿರ್ಮಾಣದಲ್ಲಿ ವಿಳಂಬವಾಗುತ್ತಿದೆ. ರಾಜ್ಯ ಸರ್ಕಾರವು ಈ ಸಂತ್ರಸ್ತರ ಬವಣೆಯನ್ನು ನೀಗಲು ಅತಿ ಶೀಘ್ರದಲ್ಲಿ ಮನೆಗಳನ್ನು ನೀಡಲು ಸರ್ವಪ್ರಯತ್ನ ನಡೆಸಬೇಕು ಹಾಗೂ ಮನೆಗಳ ನಿರ್ಮಾಣಕ್ಕೆ ಉಂಟಾಗಿರುವ ಅಡ್ಡಿ ಆತಂಕಗಳನ್ನು ನಿವಾರಿಸಲು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಈ ಸಭೆಯು ಅಭಿಪ್ರಾಯ ಪಡುತ್ತದೆ.

ಜನಪರ ಕಾರ್ಯಕ್ರಮಗಳನ್ನು ಮತ್ತು ಚುನಾವಣೆಯಲ್ಲಿ ನೀಡಿದ ಆಶ್ವಾಸನೆಗಳನ್ನು ಈಡೇರಿಸಲು ಸರ್ಕಾರವು ಇನ್ನೂ ಹೆಚ್ಚಿನ ಬದ್ದತೆಯಿಂದ ತೊಡಗಿಸಕೊಳ್ಳಬೇಕಾಗಿದೆ. ಮುಂಬರುವ ದಿನಗಳಲ್ಲಿ ಯೋಜನೆಗಳ ಅನುಷ್ಠಾನದಲ್ಲಿ ಯಾವುದೇ ವಿಳಂಬವನ್ನು ಸಹಿಸದೆ ಕಾಲಬದ್ದ ಮಿತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರೈಸುವತ್ತ ತನ್ನ ಗಮನವನ್ನು ಸರ್ಕಾರವು ಸಂಪೂರ್ಣವಾಗಿ ಕೇಂದ್ರಿಕರಿಸುವುದು ಸೂಕ್ತ ಎಂದು ಕಾರ್ಯಕಾರಿಣಿಯು ಭಾವಿಸುತ್ತದೆ.

ಡಿಸೆಂಬರ್ ತಿಂಗಳಿನಲ್ಲಿ ಜಿಲ್ಲಾ ಪಂಚಾಯತಿ ಮತ್ತು ತಾಲೂಕು ಪಂಚಾಯತಿ ಚುನಾವಣೆಗಳು ನಡೆಯಲಿವೆ. ಬುಡಮಟ್ಟದ ಕಾರ್ಯಕರ್ತರಿಗೆ ಅಧಿಕಾರ ಪ್ರಾಪ್ತಿಯಾಗುವ ಈ ಚುನಾವಣೆಗಳು ರಾಜ್ಯದಲ್ಲಿ ಬಿಜೆಪಿಗೆ ಭದ್ರ ಬುನಾದಿ ಹಾಕಲು ಮಹತ್ತರ ಪಾತ್ರವನ್ನು ನಿರ್ವಹಿಸುತ್ತವೆ.

ಈ ಚುನಾವಣೆಯಲ್ಲಿ ಕಳೆದ 30 ತಿಂಗಳ ಅವಧಿಯಲ್ಲಿ ರಾಜ್ಯ ಸರ್ಕಾರ ಕೈಗೊಂಡಿರುವ ಸಾಧನೆಗಳೇ ನಮಗೆ ಶ್ರೀ ರಕ್ಷೆಯಾಗಲಿದೆ. ಬಿಜೆಪಿ ಜಿಲ್ಲಾ ಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿ ಚುನಾವಣೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ಹಾಗೂ ಈಗಾಗಲೇ ಇದಕ್ಕೆ ಪೂರಕವಾದ ಸಿದ್ದತೆಯ ದೃಷ್ಟಿಯಿಂದ ಪಕ್ಷದ ವಿವಿಧ ಸ್ತರದಲ್ಲಿ ಕಾರ್ಯಕರ್ತರ ಪಡೆಯನ್ನು ಸಜ್ಜುಗೊಳಿಸಲು ಕಾರ್ಯಪ್ರವೃತ್ತವಾಗಿದೆ.

ಪಕ್ಷದ ಕಾರ್ಯಕರ್ತರು ತಮ್ಮ ನಾಯಕತ್ವದ ಬೆಳವಣಿಗೆಗೆ ಮತ್ತು ಸ್ಥಳೀಯ ಮಟ್ಟದ ಅಭಿವೃದ್ಧಿಗೆ ಸಾಧನೆಯಾಗುವ ಈ ಚುನಾವಣೆಯನ್ನು ಎದುರಿಸಲು ಸನ್ನದ್ಧರಾಗಬೇಕು ಎಂದು ಈ ಕಾರ್ಯಕಾರಿಣಿ ಕರೆ ನೀಡುತ್ತದೆ.

## ನಿರ್ಣಯ-2

ಕಾಶ್ಮೀರ, ಭಾರತೀಯರೆಲ್ಲರಿಗೆ ಹೆಮ್ಮೆಯ, ಪವಿತ್ರವಾದ ಸ್ಥಳ. ಅನುಪಮ ಪ್ರಕೃತಿಯ ಸೌಂದರ್ಯದ ಜೊತೆಗೆ, ಸುರಕ್ಷೆಯ ದೃಷ್ಟಿಯಿಂದ ಆಯಕಟ್ಟಿನ ಸ್ಥಳವೂ ಹೌದು. ಭಾರತೀಯರೆಲ್ಲರ ನಂಬಿಕೆಯ ಪ್ರಕಾರ (ನಮಸ್ತೇ ಶಾರದಾದೇವಿ ಕಾಶ್ಮೀರ ಪುರವಾಸಿನಿ...) ವಿದ್ಯೆಯ ಅಧಿದೇವತೆ ಸರಸ್ವತಿಯ ಆವಾಸಸ್ಥಾನವೂ ಹೌದು. ಕಲೆ, ಸಾಹಿತ್ಯ, ಸಂಸ್ಕೃತಿ ನೆಲೆವೀಡಾದ ಕಾಶ್ಮೀರಪ್ರದೇಶ ಕಳೆದ 30 ವರ್ಷಗಳಿಂದ ಸಮಸ್ಯಾಗ್ರಸ್ತ.

ಭಾರತ ದೇಶಕ್ಕೆ ಸೇರ್ಪಡೆಯಾಗುವ ಪತ್ರಕ್ಕೆ ರಾಜಾ ಹರಿಸಿಂಹರವರು ಸಹಿ ಹಾಕಿದ ದಿನದಿಂದಲೂ ಅಲ್ಲಿನ ಪ್ರತ್ಯೇಕತಾ ಮನೋಭಾವದ ವ್ಯಕ್ತಿಗಳು ಸಮಾಜದ ಶಾಂತಿಯನ್ನು ಕದಡುತ್ತಲೇ ಇದ್ದಾರೆ. ಸ್ವಾತಂತ್ರ್ಯೋತ್ತರ ಭಾರತದ 5 ಯುದ್ಧಗಳಲ್ಲಿ ನಾಲ್ಕು ಕಾಶ್ಮೀರದಲ್ಲಿ ನಡೆದಿವೆ. 50 ಸಹಸ್ರಕ್ಕೂ ಹೆಚ್ಚು ಜನ ಅಲ್ಲಿನ ಉಗ್ರಗಾಮಿ ಚಟುವಟಿಕೆಗಳಿಗೆ ಬಲಿಯಾಗಿದ್ದಾರೆ. ಇಂದಿಗೂ ಕಾಶ್ಮೀರದಲ್ಲಿ ಬಂದೂಕು, ಗುಂಡು, ಬಾಂಬು ಮುಂತಾದ ಶಬ್ದಗಳು ನಿತ್ಯದ ಬಳಕೆಯ ಶಬ್ದಗಳು.

ಕಾಶ್ಮೀರದ ಇಂದಿನ ಪರಿಸ್ಥಿತಿಗೆ ಮೂಲಕಾರಣ ಪಾಕಿಸ್ಥಾನದ ಷಡ್ಯಂತ್ರ ಹಾಗೂ ಪಂ. ನೆಹರೂರವರ ಅಪಕ್ವ ದೃಷ್ಟಿ. ಅನಗತ್ಯವಾಗಿ ಅಂತರರಾಷ್ಟ್ರೀಯ ವೇದಿಕೆಗಳಿಗೆ ಕಾಶ್ಮೀರದ ವಿಷಯವನ್ನು ತೆಗೆದುಕೊಂಡು ಹೋದದ್ದು ಪಂ. ನೆಹರೂರವರು. ಅದರ ಫಲವನ್ನು ನಾವು ಇಂದಿಗೂ ಉಣ್ಣುತ್ತಿದ್ದೇವೆ. ಕಾಶ್ಮೀರಕ್ಕೆ 370ನೇ ವಿಧಿಯ ಪ್ರಕಾರ ವಿಶೇಷ ಸ್ಥಾನಮಾನ ನೀಡಿ, ಪ್ರತ್ಯೇಕ ಎಂಬ ಭಾವನೆ ಪೋಷಿಸಿದ್ದೇ ಪಂ. ನೆಹರೂ ಸರಕಾರ. ಹೀಗಾಗಿ, ಕಾಶ್ಮೀರ ಕಣಿವೆಯ ಅನೇಕರು ಇಂದಿಗೂ ಭಾವನಾತ್ಮಕವಾಗಿ ತಾವು ಪ್ರತ್ಯೇಕ ಎಂಬ ಭಾವನೆ ತಳೆದಿದ್ದಾರೆ. ಜೊತೆಗೆ, ಕೇಂದ್ರದ ಕಾಂಗ್ರೆಸ್ ಸರಕಾರ ಮತಬ್ಯಾಂಕ್ ರಾಜಕಾರಣದ ದೃಷ್ಟಿಯಿಂದ ಅಲ್ಲಿ ನಡೆಸಿದ ಅನೇಕ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳು ಅಲ್ಲಿ ಅಸ್ಥಿರತೆ ನೆಲೆ ನಿಲ್ಲುವಂತೆ ಮಾಡಿವೆ. ಜಮ್ಮು-ಕಾಶ್ಮೀರದಲ್ಲಿನ ಹಿಂದುಗಳಿಗೆ, ವಿಶೇಷವಾಗಿ ಕಾಶ್ಮೀರಿ ಪಂಡಿತರಿಗೆ ಬಹು ದೊಡ್ಡ ಅನ್ಯಾಯವಾಗಿದೆ. ಕಳೆದ ಎರಡೂವರೆ ದಶಕಗಳಿಂದ ಅವರು ದೇಶದ ಅನೇಕ ಕಡೆ ನಿರಾಶ್ರಿತರಂತೆ ಬದುಕುತ್ತಿದ್ದಾರೆ.

ಕಾಶ್ಮೀರ ಪ್ರದೇಶ ಈಗ ಮತ್ತೆ ಸಂತ್ರಸ್ತವಾಗಿದೆ. ಸೈಯದ್ ಆಲಿ ಶಾ ಗಿಲಾನಿಯವರಂಥಹ ತೀವ್ರ ಪ್ರತ್ಯೇಕತಾವಾದಿಗಳು ದೇಶದ ಸಾರ್ವಭೌಮತೆಗೆ ಸವಾಲೆಸೆದಿದ್ದಾರೆ. ಅಶಾಂತಿ, ಕಲ್ಲೆಸೆತ, ಬೆಂಕಿ ಇಡುವುದು, ಸಾರ್ವಜನಿಕ ಆಸ್ತಿಪಾಸ್ತಿಗಳ ನಾಶ ನಿತ್ಯದ ಮಾತಾಗಿದೆ. ಸಾಮಾನ್ಯ ಜನಜೀವನ ಅಸ್ತವ್ಯಸ್ತಗೊಂಡಿದೆ. ಕಾಂಗ್ರೆಸ್ ಬೆಂಬಲಿತ ನ್ಯಾಷನಲ್ ಕಾನ್ಫರೆನ್ಸ್‌ನ ನಾಯಕ, ಮುಖ್ಯಮಂತ್ರಿ ಶ್ರೀ ಒಮರ್ ಅಬ್ದುಲ್ಲಾರ ಅಪಕ್ವ ನಡವಳಿಕೆ, ನಿರ್ವಹಣೆಯೂ ಇಂದಿನ ಅಶಾಂತಿಗೆ ಕಾರಣವಾಗಿದೆ. ಜೊತೆಗೆ, ಜಮ್ಮು-ಕಾಶ್ಮೀರ ವಿಧಾನಸಭೆಯಲ್ಲಿ ಅವರು ನೀಡಿದ ''ಕಾಶ್ಮೀರ ಭಾರತಕ್ಕೆ ಸೇರ್ಪಡೆಗೊಳಿಸಲಾಯಿತೇ ಹೊರತು, ವಿಲೀನವಾಗಲಿಲ್ಲ'' ಎಂಬ ಹೇಳಿಕೆ ಪ್ರತ್ಯೇಕತಾವಾದಿಗಳಿಗೆ ನೂರಾನೆ ಬಲ ತಂದಿದೆ. ಇದರಿಂದ ಶ್ರೀ ಒಮರ್ ಅಬ್ದುಲ್ಲಾರ ರಾಷ್ಟ್ರ ನಿಷ್ಠೆಯನ್ನೇ ಸಂಶಯ ಪಡುವಂತಾಗಿದೆ.

ಕೇಂದ್ರದ ಶ್ರೀ ಮನಮೋಹನಸಿಂಗ್ ನೇತೃತ್ವದ ಸರಕಾರವೂ ಕಾಶ್ಮೀರದ ವಿಷಯದಲ್ಲಿ ಸಂಪೂರ್ಣ ವಿಫಲವಾಗಿದೆ. ಸುರಕ್ಷೆಯ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಸ್ಪಷ್ಟ ನಿಲುವುಗಳಿಲ್ಲ. ಕಾಶ್ಮೀರದಲ್ಲಿ ಅಶಾಂತಿ ಪ್ರಾರಂಭವಾದ ಆ ದಿನಗಳ ನಂತರ ಕೇಂದ್ರ ಸರ್ಕಾರ ಅದರ ಕಡೆಗೆ ಗಮನ ಹರಿಸಿತು. ಆದರೆ, ಆ ಕ್ರಮಗಳೂ ಸಮಸ್ಯೆಯನ್ನು ಉಲ್ಬಣಗೊಳಿಸಿವೆಯೇ ವಿನಾ ಪರಿಹರಿಸಲಾಗಿಲ್ಲ. ಈಗ ವಿವಿಧ ಜನಸಮೂಹಗಳ ಜೊತೆಗೆ

ಮಾತನಾಡಲು 3 ವಾರ್ತಾಕಾರರನ್ನು ಕೇಂದ್ರ ಸರ್ಕಾರ ನೇಮಿಸಿದೆ. ಆ ವಾರ್ತಾಕಾರರೇ ದೊಡ್ಡ ಸಮಸ್ಯೆಯಾಗುತ್ತಿದ್ದಾರೆ. ಅದರಲ್ಲೊಬ್ಬರಾದ ದಿಲೀಪ ಪಡ್‌ಗಾಂವ್ಕರ್‌ರ ಹೇಳಿಕೆಗಳು ತಲ್ಲಣ ನಿರ್ಮಾಣ ಮಾಡಿವೆ. ಇದೆಲ್ಲದರ ಜೊತೆಗೆ, ಈ ದೇಶದಲ್ಲಿ ನಡೆಯುವ ಪ್ರತ್ಯೇಕತಾವಾದಿ ಚಳುವಳಿಗಳು ಜನಪರ ಹೋರಾಟ ಎಂದು ಬಿಂಬಿಸುತ್ತಿರುವ ಅರುಂಧತಿ ರಾಯ್‌ರಂತಹ ಬುದ್ಧಿಜೀವಿಗಳು ಇಂದು ನಾಗರೀಕ ಸಮಾಜಕ್ಕೆ, ಸಾಹಿತ್ಯ ಕ್ಷೇತ್ರಕ್ಕೇ ಕಪ್ಪು ಚುಕ್ಕಿಗಳಾಗಿದ್ದಾರೆ. ಈ ರೀತಿಯ ಪ್ರತ್ಯೇಕತಾವಾದಿಗಳು ಕೇಂದ್ರದ ಕಾಂಗ್ರೆಸ್ ಸರಕಾರದ ದುರ್ಬಲ ನಿರ್ವಹಣೆಯ ಕಾರಣಕ್ಕೆ ರಾಜಧಾನಿ ದಿಲ್ಲಿಯಲ್ಲಿ ಸಂಸತ್ ಭವನ, ರಾಷ್ಟ್ರಪತಿ ಭವನದ ಕೂಗಳತೆಯ ದೂರದಲ್ಲಿ ವಿಭಜನೆಯ, ಪ್ರತ್ಯೇಕತೆಯ ವಾದವನ್ನು ಮಂಡಿಸುತ್ತಿದ್ದಾರೆ. ಶ್ರೀನಗರದಲ್ಲೂ ಪತ್ರಿಕಾ ಸಂದರ್ಶನಗಳಲ್ಲೂ ಅದೇ ರೀತಿಯ ಮಾತನಾಡುತ್ತಿದ್ದಾರೆ.

ಕಾಂಗ್ರೆಸ್ ಆಡಳಿತದಲ್ಲಿ ಅಲ್ಪಸಂಖ್ಯಾತ ತುಷ್ಟೀಕರಣದ ವಿವಿಧ ಮುಖಗಳು ಇಂದು ಕಾಶ್ಮೀರದಲ್ಲಿನ ವಿಷಮ ಪರಿಸ್ಥಿತಿಗೆ ಕಾರಣವಾಗಿದೆ. ಕಾಶ್ಮೀರ ಭಾರತದ ಅವಿಭಾಜ್ಯ ಅಂಗ, ಮುಕುಟಮಣಿ, ಎಂಬುದು ಬಿಜೆಪಿಯ ಬಲವಾದ ನಂಬಿಕೆ. ದೇಶದ ಎಲ್ಲಾ ಜನರ ಭಾವನೆಯೂ ಇದೇ.

ಕಾಶ್ಮೀರದ ಪರಿಸ್ಥಿತಿಯನ್ನು ತಿಳಿಗೊಳಿಸಲು ಕೂಡಲೇ ಈ ಕೆಳಕಂಡ ಉಪಕ್ರಮಗಳನ್ನು ಕೈಗೆತ್ತಿಕೊಳ್ಳಬೇಕೆಂದು ರಾಜ್ಯ ಬಿಜೆಪಿ ಕಾರ್ಯಕಾರಿಣಿ ಆಗ್ರಹಿಸುತ್ತದೆ.

- ಕಾಶ್ಮೀರ ಕಣಿವೆಯ ಗಲಭೆಕೋರರನ್ನು ನಿರ್ದಾಕ್ಷಿಣ್ಯವಾಗಿ ನಿಯಂತ್ರಿಸಬೇಕು.
- ಪ್ರತ್ಯೇಕತೆಯ, ವಿಭಜನೆಯ, ಅಖಂಡ ಭಾರತದ ವಿರುದ್ಧ ದನಿ ಎತ್ತುತ್ತಿರುವ ಅರುಂಧತಿ ರಾಯ್, ಗಿಲಾನಿ, ವರವರರಾವ್ ಮುಂತಾದವರನ್ನು ದೇಶದ್ರೋಹದ ಆಪಾದನೆಯ ಮೇಲೆ ಬಂಧಿಸಿ, ಮೊಕದ್ದಮೆ ದಾಖಲಿಸಬೇಕು. ಉಳಿದವರಿಗೆ ಅದು ಎಚ್ಚರಿಕೆಯ ಪಾಠವಾಗಬೇಕು.
- ಕಾಶ್ಮೀರಿ ಪಂಡಿತರು ದೇಶದೆಲ್ಲೆಡೆ ದಯನೀಯ ಸ್ಥಿತಿಯಲ್ಲಿದ್ದಾರೆ. ಅವರಿಗೆ ಸೂಕ್ತ ಸೌಲಭ್ಯ ಕಲ್ಪಿಸಬೇಕು. ಅವರು ಮರಳಿ ತಮ್ಮ ಮೂಲ ನೆಲೆಗೆ ಮರಳುವಂಥಹ ವಾತಾವರಣ ನಿರ್ಮಿಸಬೇಕು.
- ಕಾಶ್ಮೀರದ ಗಡಿಭಾಗಗಳಲ್ಲಿ ಚೀನಾ-ಪಾಕಿಸ್ಥಾನ್ ನಡುವೆ ರಕ್ಷಣಾ ಹೊಂದಾಣಿಕೆಯ ಕಾರಣಕ್ಕೆ ಬಿಗುವಿನ ಪರಿಸ್ಥಿತಿ ಇದೆ. ಶತ್ರುಗಳ ಸಿದ್ಧತೆ ಹೆಚ್ಚಾಗಿದೆ. ಆ ಹಿನ್ನೆಲೆಯಲ್ಲಿ ಲಡಾಖ್, ಕಾರ್ಗಿಲ್ ಮುಂತಾದೆಡೆ ಗಡಿಪಡೆಯನ್ನು ಬಲಯುತಗೊಳಿಸುವುದರ ಜೊತೆಗೆ, ಮೂಲಭೂತ ಸೌಕರ್ಯ ಅಭಿವೃದ್ಧಿಗೊಳಿಸುವುದರ ಕಡೆಗೆ ವಿಶೇಷ ಗಮನ ನೀಡಬೇಕು.
- ಕಾಶ್ಮೀರದ ಪರಿಸ್ಥಿತಿ ವಿಷಮಗೊಳ್ಳುವುದಕ್ಕೆ ಕಾರಣವಾದ ಪಾಕಿಸ್ಥಾನದ ಷಡ್ಯಂತ್ರದ ಕುರಿತು, ಪಾಕಿಸ್ಥಾನ-ಚೀನಾದ ಬಲಗೊಳ್ಳುತ್ತಿರುವ ರಕ್ಷಣಾ ಒಪ್ಪಂದದ ಕುರಿತು, ಅದರ ಕಾರಣಕ್ಕೆ ಭಾರತೀಯ ಉಪಖಂಡದಲ್ಲಿ ನಿರ್ಮಾಣವಾಗುತ್ತಿರುವ ಉದ್ವಿಗ್ನ ಪರಿಸ್ಥಿತಿಯ ಕುರಿತು ಜಾಗತಿಕ ಮಟ್ಟದಲ್ಲಿ ವಿವಿಧ ದೇಶಗಳ ಪ್ರಮುಖರಿಗೆ ಅರಿವು ಮೂಡಿಸಲು ರಾಜತಾಂತ್ರಿಕ ಉಪಕ್ರಮಗಳನ್ನು ಕೈಗೊಳ್ಳಬೇಕು.

ಕಾಶ್ಮೀರದ ಈ ಪರಿಸ್ಥಿತಿಯ ವಿಷಮತೆಯ ಜೊತೆಗೆ, ಕೇಂದ್ರ ಸರ್ಕಾರ ಇಂದು ಭಯೋತ್ಪಾದನೆ ನಿಯಂತ್ರಣದಲ್ಲಿನ ತನ್ನ ವಿಫಲತೆಯನ್ನು ಮರೆಮಾಚಲು, ಜನರ-ದೇಶದ ಗಮನವನ್ನು ಬೇರೆಡೆಗೆ ಸೆಳೆಯಲು ಪ್ರಯತ್ನಿಸುತ್ತಿದೆ. ಅಫ್ಜಲ್ ಗುರುವಿನ ನೇಣು ಶಿಕ್ಷೆಯ ತೀರ್ಪನ್ನು ಜಾರಿಗೊಳಿಸುವಲ್ಲಿ ವಿಫಲವಾಗಿರುವ ಮನಮೋಹನ್‌ಸಿಂಗ್ ಸರಕಾರ ಇಂದು 'ಕೇಸರಿ ಭಯೋತ್ಪಾದನೆ', 'ಹಿಂದು ಭಯೋತ್ಪಾದನೆ' ಎಂಬ ಶಬ್ಧಗಳನ್ನು ಪ್ರಯೋಗಿಸುತ್ತಿದೆ. ಅನೇಕ ಹಿಂದೂ ಸಂತರನ್ನು, ಯುವಕರನ್ನು ವಿನಾಕಾರಣ ಭಯೋತ್ಪಾದಕರೆಂದು ಚಿತ್ರಿಸಹೊರಟ ಕೇಂದ್ರ ಸರ್ಕಾರ, ಈಗ ದೇಶದ ಅಗ್ರಗಣ್ಯ ದೇಶಭಕ್ತ ಸಂಘಟನೆ ಆರ್.ಎಸ್.ಎಸ್.ನ ಹೆಸರನ್ನು ಭಯೋತ್ಪಾದನೆಯ ವಿಷಯದಲ್ಲಿ ಎಳೆದು ತರಲು ಪ್ರಯತ್ನಿಸುತ್ತಿದೆ. ಸಂಘದ ಹಿರಿಯ ಪ್ರಚಾರಕರಾದ ಶ್ರೀ ಇಂದ್ರೇಶ್‌ಕುಮಾರ್‌ರನ್ನು ಅಜ್ಮೀರ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ಸಿಲಿಕಿಸಹೊರಟಿದೆ. ಯಾವುದೇ ಆಪಾದನೆ ಹೊರಿಸದೆ, ವಿಚಾರಣೆ ನಡೆಸದೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಹೊರಟಿದೆ. ಮಾಧ್ಯಮಗಳಲ್ಲಿ ವ್ಯಕ್ತಿ-ಸಂಘಟನೆ ಎರಡರ ತೇಜೋವಧೆಗೆ ಸಂಚು ರೂಪಿಸಿದೆ.

ನಾಗರೀಕ ಸಮಾಜವೊಂದು ಎದ್ದುನಿಂತು ಪ್ರತಿಭಟಿಸಬೇಕಾದ ಸನ್ನಿವೇಶ ನಿರ್ಮಾಣವಾಗುತ್ತಿದೆ. ದೇಶದ ಯುವಕರಲ್ಲಿ ದೇಶಭಕ್ತಿ, ಚಾರಿತ್ರ್ಯನಿರ್ಮಾಣ, ಸೇವಾ ಮನೋಭಾವ ನಿರ್ಮಿಸುವಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ ಆರ್.ಎಸ್.ಎಸ್.ನ ಮೇಲಿನ ಸುಳ್ಳು ಆರೋಪಗಳು ಪ್ರಜ್ಞಾವಂತರೆಲ್ಲರ ಮನ ಕಲಕಿದೆ.

ರಾಜ್ಯ ಬಿಜೆಪಿ ಕಾರ್ಯಕಾರಿಣಿಯು ಕೇಂದ್ರ ಸರಕಾರದ ಈ ಹುನ್ನಾರವನ್ನು ಉಗ್ರವಾಗಿ ಖಂಡಿಸುತ್ತದೆ. ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ರಾಜಕೀಯ ದುರುದ್ದೇಶಕ್ಕೆ ಉಪಯೋಗಿಸಿಕೊಳ್ಳುವುದನ್ನು ತೀವ್ರವಾಗಿ ವಿರೋಧಿಸುತ್ತದೆ. ಈ ದಿಸೆಯಲ್ಲಿ ಸೂಕ್ತ ಸಾಕ್ಷ್ಯಾಧಾರಗಳಿಲ್ಲದೆ, ವ್ಯಕ್ತಿ, ಸಂಘಟನೆಗಳನ್ನು ಗುರಿಯಾಗಿಸಿಕೊಳ್ಳುವುದನ್ನು ನಿಲ್ಲಿಸಬೇಕು. ಮಾಧ್ಯಮಗಳಿಗೆ ಆಯ್ದ ಸೋರುವಿಕೆಯ ಮುಖಾಂತರ ಭ್ರಮೆ ಹುಟ್ಟಿಸುವ ಕೆಲಸಕ್ಕೆ ಕೈಹಾಕಬಾರದು ಎಂದು ಆಗ್ರಹಿಸುತ್ತದೆ. ಈ ದಿಕ್ಕಿನಲ್ಲಿ ಸುವಿಚಾರೀ ಸಂಘಟನೆಗಳ ಹೋರಾಟಕ್ಕೆ ಇಡೀ ಸಮಾಜ ಸ್ಪಂದಿಸಬೇಕು ಎಂದು ಮನವಿಮಾಡುತ್ತದೆ. ●

# ಸಹೋದರಿ ನಿವೇದಿತಾ ಜಯಂತಿ ಆಚರಣೆ

ಭಾರತೀಯ ಸಮಾಜಕ್ಕೆ ಅಪಾರ ಸೇವೆ ಸಲ್ಲಿಸಿದ ಸೋದರಿ ನಿವೇದಿತಾರವರ ಜನ್ಮ ದಿನಾಚರಣೆಯನ್ನು ರಾಜ್ಯಾದ್ಯಂತ ಬಿಜೆಪಿ ಹಾಗೂ ಮಹಿಳಾ ಮೋರ್ಚಾ ವತಿಯಿಂದ ಆಚರಿಸಲಾಯಿತು.

''ಬ್ರಿಟನ್ ಮಹಿಳೆಯೊಬ್ಬರು ಭಾರತೀಯ ಸಂಸ್ಕೃತಿಯನ್ನು ಮೆಚ್ಚಿ ಭಾರತದಲ್ಲೇ ಸಾಮಾಜಿಕ ಹೊಣೆಗಾರಿಕೆ ಹೊತ್ತು ದೀನದಲಿತರಿಗೆ ಉತ್ತಮ ಶಿಕ್ಷಣವನ್ನು ನೀಡಿರುವ ಜತೆಗೆ ಹತ್ತು ಹಲವು ಸಾಮಾಜಿಕ ಸೇವೆಗಳನ್ನು ಮಾಡಿದ್ದಾರೆ. ಸ್ವಾಮಿ ವಿವೇಕಾನಂದ ಅವರ ಶಿಷ್ಯೆ, ಸಮಾಜ ಸೇವಕಿ ಸಹೋದರಿ ನಿವೇದಿತಾ ಅವರ ಆದರ್ಶಗಳನ್ನು ನಾಡಿನ ಪ್ರತಿಯೊಬ್ಬ ಮಹಿಳೆಯರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಿದೆ ಎಂದು ಈ ಸಂದರ್ಭದಲ್ಲಿ ನಿವೇದಿತಾ ಅವರ ಕೊಡುಗೆಯನ್ನು ಸ್ಮರಿಸಲಾಯಿತು.

ಬೆಂಗಳೂರು ನಗರ, ಗೌರಿಬಿದನೂರು, ಉಡುಪಿ, ಶಿವಮೊಗ್ಗ, ರಾಯಚೂರು, ಬೀದರ್, ಬೆಳಗಾವಿ, ರಾಮನಗರ, ಚಿತ್ರದುರ್ಗ, ಮೊಳಕಾಲ್ಮೂರು, ಹಿರಿಯೂರು, ಹೊಳಲ್ಕೆರೆ, ಹೊಸದುರ್ಗ, ಹಾಸನ ಸೇರಿದಂತೆ ಎಲ್ಲಾ ಜಿಲ್ಲೆಗಳಲ್ಲಿ ನಿವೇದಿತಾ ಜಯಂತಿ ಆಚರಣೆ ನಡೆದಿದೆ.

ಮಹಿಳಾ ಮೋರ್ಚಾ ವತಿಯಿಂದ 170ಕ್ಕೂ ಹೆಚ್ಚು ಮಂಡಲಗಳಲ್ಲಿ ನಿವೇದಿತಾ ಜಯಂತಿ ಆಚರಣೆ ಬಗ್ಗೆ ವರದಿಗಳು ಬಂದಿವೆ.

ದೇಶದೆಲ್ಲೆಡೆಗೂ ಭಾರತೀಯ ಜನತಾ ಪಕ್ಷದ ವತಿಯಿಂದ ಸೋದರಿ ನಿವೇದಿತಾ ಜಯಂತಿಯನ್ನು ಶ್ರದ್ಧೆಯಿಂದ ಆಚರಿಸಲಾಗಿದೆ. ಈ ಕಾರ್ಯಕ್ರಮಗಳಲ್ಲಿ ಪಕ್ಷದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ತಮ್ಮ ನಿಷ್ಠೆಯನ್ನು ಪ್ರದರ್ಶಿಸಿದರು. ●

# ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ

**ರಾಮಾಯಣವನ್ನು ವಿಶ್ವಕ್ಕೆ ಪರಿಚಯಿಸಿದ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ದಿ:22-10-2010ರಂದು ವಿಜೃಂಭಣೆಯಿಂದ ಆಚರಿಸಲು ರಾಜ್ಯ ಬಿಜೆಪಿ ನಿರ್ಧರಿಸಿದ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಎಲ್ಲೆಡೆ ವಾಲ್ಮೀಕಿ ಜಯಂತಿ ಆಚರಣೆ ನಡೆದಿದೆ.**



**ಹಾಸನ:** ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಯಿತು. ಕಾರ್ಯಕ್ರಮವು ಜಿಲ್ಲಾ ಉಪಾಧ್ಯಕ್ಷರಾದ ಶ್ರೀಮತಿ ಜ್ಞಾನೇಶ್ವರಿ ಬಾಯಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಮುಖ್ಯ ಅತಿಥಿಗಳಾಗಿ ನವಿಲೆ ಅಣ್ಣಪ್ಪನವರು ಉಪಸ್ಥಿತರಿದ್ದರು. ಸಭೆಯಲ್ಲಿ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷರಾದ ಶ್ರೀ ರಾಜಣ್ಣ ಮತ್ತು ಪದಾಧಿಕಾರಿಗಳು ಹಾಗೂ ಜಿಲ್ಲಾ ಮತ್ತು ನಗರದ ಪದಾಧಿಕಾರಿಗಳು ಉಪಸ್ಥಿತರಿದ್ದರು.

**ಬಿಜಾಪುರ:** ಕಾರ್ಯಕ್ರಮಕ್ಕೆ ಜಿಲ್ಲಾ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಕವಟಗಿ ಹಾಗೂ ಮಂಡಲ ಅಧ್ಯಕ್ಷರಾದ ಶ್ರೀ ಮಾಚಪ್ಪನವರು ಪಾಲ್ಗೊಂಡಿದ್ದರು.

**ಕೊಪ್ಪಳ (ಅಳವಂಡಿ):** ಅಳವಂಡಿ ಗ್ರಾಮದಲ್ಲಿ ಬಿಜೆಪಿ ಎಸ್.ಟಿ.ಮೋರ್ಚಾದ ತಾಲ್ಲೂಕು ಘಟಕದ ವತಿಯಿಂದ ಗ್ರಾಮದ ಮಾರುತೇಶ್ವರ ದೇವಸ್ಥಾನದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಜರುಗಿತು.

**ರಾಮನಗರ:** ರಾಮನಗರದಲ್ಲಿ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಸೇರಿ ವಿಜೃಂಭಣೆಯಿಂದ ಆಚರಣೆ ನಡೆಸಿದರು. ಪಕ್ಷದ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಗೌರಿಬಿದನೂರು, ಬೆಳಗಾವಿ, ದೊಡ್ಡಬಳ್ಳಾಪುರ, ಶಿವಮೊಗ್ಗ, ಹಾಸನ, ಚಿತ್ರದುರ್ಗ, ರಾಯಚೂರು, ಇಚಿಡಿ, ಸಿಂಧಗಿ, ದೇವರಹಿಪ್ಪರಗಿ, ಮುದ್ದೇಬಿಹಾಳ, ಬಸವನಬಾಗೇವಾಡಿ, ಬಬಲೇಶ್ವರ, ನಾಗಠಾಣಗಳಲ್ಲೂ ವಾಲ್ಮೀಕಿ ಜಯಂತಿಯನ್ನು ಆಚರಿಸಿದ ವರದಿ ಬಂದಿದೆ. ●

# ಬಡವರ ಅಭಿವೃದ್ಧಿ: ಕರ್ನಾಟಕ ನಂ 2

ಕೇಂದ್ರ ಸರಕಾರ ರೂಪಿಸಿರುವ 20 ಅಂಶಗಳ ಕಾರ್ಯಕ್ರಮ ಜಾರಿಯಲ್ಲಿ ಕರ್ನಾಟಕ ದೇಶದಲ್ಲೇ ಎರಡನೇ ಸ್ಥಾನದಲ್ಲಿದೆ. ಮೊದಲ ಸ್ಥಾನ ಗುಜರಾತ್ ಪಾಲಾಗಿದೆ.

ಕೇಂದ್ರ ಸರಕಾರದ ಅಂಕಿ-ಅಂಶ ಹಾಗೂ ಯೋಜನೆ ಜಾರಿ ಸಚಿವಾಲಯ ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ ಈ ಅಂಶ ಬಹಿರಂಗಗೊಂಡಿದೆ.

2010ರ ಏಪ್ರಿಲ್-ಜುಲೈ ತಿಂಗಳ ಅವಧಿಯಲ್ಲಿ ಜಾರಿಗೊಳಿಸಲಾದ ಕಾರ್ಯಕ್ರಮಗಳ ಆಧಾರದ ಮೇಲೆ ಈ ಪಟ್ಟಿ ಬಿಡುಗಡೆ ಮಾಡಲಾಗಿದೆ. ಆಶ್ಚರ್ಯದ ಸಂಗತಿಯೆಂದರೆ ಮೊದಲ 10 ಅಗ್ರ ಸ್ಥಾನ ಪಡೆದ ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಆಡಳಿತವಿರುವ ರಾಜ್ಯಗಳೇ ಸ್ಥಾನ ಪಡೆದಿರುವುದು. ಅಲ್ಲದೆ, ಬಹುತೇಕ ಕಾಂಗ್ರೆಸ್ ಸರಕಾರಗಳು ಕಾರ್ಯಕ್ರಮ ಜಾರಿಯಲ್ಲಿ ಕಳಪೆ ಸಾಧನೆ ತೋರಿವೆ.

ಶ್ರೀ ನರೇಂದ್ರ ಮೋದಿ ಮುಖ್ಯಮಂತ್ರಿಯಾಗಿರುವ ಗುಜರಾತ್ ಉತ್ತಮ ಸಾಧನೆ ತೋರಿದ್ದು ಮೊದಲ ಸ್ಥಾನದಲ್ಲಿದೆ. ಶ್ರೀ ಯಡಿಯೂರಪ್ಪ ನೇತೃತ್ವದ ಕರ್ನಾಟಕ ಸರಕಾರದ ಸಾಧನೆ ಎರಡನೇ ಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ಜಾರ್ಖಂಡ್, ಪಂಜಾಬ್ ಹಾಗೂ ಉತ್ತರ ಪ್ರದೇಶಗಳಿವೆ. ಕಳಪೆ ಸಾಧನೆ ಪಟ್ಟಿಯಲ್ಲಿ ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಜಮ್ಮು-ಕಾಶ್ಮೀರ ರಾಜ್ಯಗಳಿವೆ. ಕಳೆದ ವರ್ಷ ರಾಜ್ಯಗಳ ಸಾಧನೆ ಪಟ್ಟಿಯಲ್ಲಿ ಗುಜರಾತ್ ನಾಲ್ಕನೇ ಸ್ಥಾನದಲ್ಲಿತ್ತು. ಕರ್ನಾಟಕ ಏಳನೇ ಸ್ಥಾನದಲ್ಲಿತ್ತು.

ರಾಜ್ಯಗಳ ಸಾಧನೆಯ ಸ್ಥಾನ-ಮಾನ ನಿರ್ಧರಿಸಲು 19 ಅಂಶಗಳನ್ನು ಮಾನದಂಡವಾಗಿ ಪರಿಗಣಿಸಲಾಗಿತ್ತು. ಸಮಾಜದ ಕೆಳಸ್ತರದ ಮತ್ತು ಬಡವರ ಜೀವನ ಮಟ್ಟ ಸುಧಾರಣೆ, ಕೃಷಿಕರ ರಕ್ಷಣೆ, ಕಾರ್ಮಿಕರ ಅಭಿವೃದ್ಧಿ, ವಸತಿ, ಶಿಕ್ಷಣ, ಕುಟುಂಬ ಕಲ್ಯಾಣ ಇಲಾಖೆ ಮತ್ತು ಆರೋಗ್ಯ ಸುಧಾರಣೆ, ಪರಿಶಿಷ್ಟ ಜಾತಿ ಕುಟುಂಬಗಳಿಗೆ ಸಹಕಾರ, ಬಡತನ ನಿರ್ಮೂಲನೆ, ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಸೃಷ್ಟಿ ಮುಂತಾದವುಗಳನ್ನು ಪರಿಗಣಿಸಿ ರಾಜ್ಯಗಳ ಸಾಧನೆಯನ್ನು ಗುರುತಿಸಲಾಗಿದೆ. ●

# ಗುಜರಾತ್‌ನಲ್ಲಿ ವಿಜೃಂಭಿಸಿದ ಕಮಲ

**ಗಾಂಧಿನಗರ:** ಖತ್ಲಾಲ್ ಉಪಚುನಾವಣೆಯಲ್ಲಿ ಭಾರೀ ಮುಖಭಂಗ ಅನುಭವಿಸಿದ್ದ ಕಾಂಗ್ರೆಸ್ ಈದೀಗ ಗುಜರಾತ್‌ನ 6 ಮಹಾನಗರ ಪಾಲಿಕೆ ಚುನಾವಣೆಯಲ್ಲೂ ಹೀನಾಯ ಸೋಲುಂಡು ತಲೆ ಬಗ್ಗಿಸಿದೆ.

ರಾಜ್ಯದ 6 ಮಹಾನಗರ ಪಾಲಿಕೆ ಚುನಾವಣೆಯ ಫಲಿತಾಂಶ ಹೊರಬಿದ್ದಿದ್ದು ಆಡಳಿತಾರೂಢ ಬಿಜೆಪಿ ಭರ್ಜರಿ ಜಯ ಸಾಧಿಸಿದೆ. ಭಾವನಗರ, ಜಾಮ್‌ನಗರ, ರಾಜಕೋಟ್, ವಡೋದರಾ, ಅಹಮ್ಮದಾಬಾದ್ ಹಾಗೂ ಸೂರತ್ ಪಾಲಿಕೆಗಳು ಬಿಜೆಪಿ ಪಾಲಾಗಿದೆ.

ಅಹಮ್ಮದಾಬಾದ್‌ನ 192 ಕ್ಷೇತ್ರಗಳ ಪೈಕಿ ಪ್ರಕಟಿತ 156 ಕ್ಷೇತ್ರಗಳಲ್ಲಿ ಬಿಜೆಪಿ ಪಾಲಿಗೆ 129 ಕ್ಷೇತ್ರಗಳು ದೊರೆತಿದ್ದು, ಕಾಂಗ್ರೆಸ್‌ಗೆ 33 ಕ್ಷೇತ್ರಗಳು ದೊರೆತಿವೆ.

ಉಳಿದ ಎಲ್ಲಾ ಪಾಲಿಕೆಗಳ ಕಟ್ಟಡಗಳ ಮೇಲೆ ಬಿಜೆಪಿಯ ಕಮಲ ಅರಳಿದೆ. ಶ್ರೀ ಮೋದಿ ಮೋಡಿಯ ಎದುರು ಕಾಂಗ್ರೆಸ್‌ನ ಹಸ್ತದ ಲೆಕ್ಕಾಚಾರ ಸಂಪೂರ್ಣವಾಗಿ ತಲೆಕೆಳಗಾಗಿದೆ.

ವಡೋದರಾದ 75 ಕ್ಷೇತ್ರಗಳ ಪೈಕಿ 60 ಕ್ಷೇತ್ರಗಳು ಬಿಜೆಪಿಗೆ ಒಲಿದರೆ, ಕಾಂಗ್ರೆಸ್ ಪಾಲಿಗೆ ಕೇವಲ 7 ಸ್ಥಾನಗಳು ಲಭ್ಯವಾಗಿದೆ. ಅದೇ ರೀತಿ ರಾಜ್‌ಕೋಟ್ ಪಾಲಿಕೆಯ 69 ಕ್ಷೇತ್ರಗಳ ಪೈಕಿ 43 ಕ್ಷೇತ್ರಗಳು ಬಿಜೆಪಿಗೆ ದೊರೆತಿದ್ದು, ಕಾಂಗ್ರೆಸ್ ಕೇವಲ 8 ಸ್ಥಾನಗಳಿಗಷ್ಟೆ ತೃಪ್ತಿಪಟ್ಟುಕೊಂಡಿದೆ ಅಷ್ಟೆ.

ಜಾಮ್‌ನಗರದ 57 ಕ್ಷೇತ್ರಗಳಲ್ಲಿ ಬಿಜೆಪಿ 40 ಕ್ಷೇತ್ರಗಳನ್ನು ಬಾಚಿಗೊಂಡಿದ್ದರೆ, ಕಾಂಗ್ರೆಸ್ ಕೇವಲ 18 ಸ್ಥಾನಗಳನ್ನು ಬಗಲಿಗೆ ಹಾಕಿಕೊಂಡಿದೆ.

ಭಾವನಗರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಗೆಲುವಿನ ನಾಗಾಲೋಟಕ್ಕೆ ಕಾಂಗ್ರೆಸ್ ನೆಲಕಚ್ಚಿದೆ. ಒಟ್ಟು 51 ಸ್ಥಾನಗಳಲ್ಲಿ ಬಿಜೆಪಿ 41 ಸ್ಥಾನಗಳನ್ನು ಪಡೆದುಕೊಂಡರೆ, ಕಾಂಗ್ರೆಸ್ ಕೇವಲ 10 ಸ್ಥಾನಗಳನ್ನು ಪಡೆಯಲು ಶಕ್ತವಾಗಿದೆ.

**ಸತ್ಯಕ್ಕೆ ಸಂದ ಜಯ:**

ಗೆಲುವಿನ ಬಗ್ಗೆ ಪ್ರತಿಕ್ರಿಯಿಸಿರುವ ಗುಜರಾತನ ಮುಖ್ಯಮಂತ್ರಿ ಶ್ರೀ ನರೇಂದ್ರ ಮೋದಿ, ಈ ಗೆಲುವು ಸತ್ಯಕ್ಕೆ ಸಂದ ಜಯ ಎಂದು ಬಣ್ಣಿಸಿದ್ದಾರೆ. ಪಕ್ಷ ಹಾಗೂ ಸರ್ಕಾರದ ಅಭಿವೃದ್ಧಿಪರ ಕಾಳಜಿಯನ್ನು ಬೆಂಬಲಿಸಿ ಜನತೆ ಮತ ನೀಡಿದ್ದು, ಜನರ ನಿರೀಕ್ಷೆ ಸುಳ್ಳಾಗದಂತೆ ಅಭಿವೃದ್ಧಿ ಕಾರ್ಯ ಮುಂದುವರೆಸಿಕೊಂಡು ಹೋಗುವುದಾಗಿ ತಿಳಿಸಿದ್ದಾರೆ.

ಸೋಹ್ರಾಬುದ್ದೀನ್ ಪ್ರಕರಣದಲ್ಲಿ ಕೇಂದ್ರ ಸರ್ಕಾರ ರಾಜ್ಯಸರ್ಕಾರವನ್ನು ಮಣಿಸುವ ಕಾರ್ಯಕ್ಕೆ ಮುಂದಾಗಿದ್ದು, ಇಂತಹ ಯಾವುದೇ ಅಸತ್ಯಗಳಿಗೆ ಜನತೆ ಮಣಿಯುವುದಿಲ್ಲ ಎಂದು ಕಾಂಗ್ರೆಸ್‌ಗೆ ಅವರು ತಿರುಗೇಟು ನೀಡಿದ್ದಾರೆ. ●

# ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ– ಹಾಸ್ಟೆಲ್‌ಗಳ ಸರ್ವೆ

ಒಂದು ಕಾಲವಿತ್ತು. ಮಹಿಳೆಯರು ಮನೆಯಿಂದ ಹೊರಗೆ ಕಾಲಿಡುವುದೇ ಅಪರೂಪವೆನಿಸಿತ್ತು. ಕಾಲ ಬದಲಾದಂತೆಲ್ಲಾ, ಸಂಸಾರ ನಿರ್ವಹಣೆಯ ಭಾರ ಮಹಿಳೆಯರ ಮೇಲೂ ಬಿದ್ದಂತೆಲ್ಲಾ, ಉದ್ಯೋಗವನ್ನರಸಿ ದೊಡ್ಡ ಪಟ್ಟಣದೆಡೆಗೆ ಮುಖಮಾಡಿರುವ ಮಹಿಳೆಯರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿಯೇ ಇದೆ.

ಇಂದು ರಾಜ್ಯದ ಪ್ರಮುಖ ಪಟ್ಟಣಗಳಲ್ಲಿ ಉದ್ಯೋಗಸ್ಥ ಮಹಿಳೆಯರ ಹಾಸ್ಟೆಲ್, ವಿದ್ಯಾರ್ಥಿನಿಯರ ಹಾಸ್ಟೆಲ್ ಎಲ್ಲೆಡೆಗೂ ಕಾಣಸಿಗುತ್ತಿವೆ. ಆದರೆ ಹೆಚ್ಚಿನ ಹಾಸ್ಟೆಲ್‌ಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇದೆ. ಒಂದೇ ಕೋಣೆಯಲ್ಲಿ ರೈಲು ಬೋಗಿಗಳ ಮಾದರಿಯಲ್ಲಿ 3–4 ಟೈರ್ ವಸತಿ ವ್ಯವಸ್ಥೆ ಕಲ್ಪಿಸಿ ಕುರಿದೊಡ್ಡಿಗಳಂತೆ ಹಾಸ್ಟೆಲ್ ನಡೆಸುವ ಉದಾಹರಣೆಗಳೂ ಇವೆ. ವಿಧಿಯಿಲ್ಲದೇ ಇಂಥ ಸ್ಥಿತಿಯಲ್ಲೇ ವಾಸಿಸುವ ಅನಿವಾರ್ಯತೆ ಅನೇಕ ಮಹಿಳೆಯರಿಗಿದೆ.

ಈ ಹಿನ್ನೆಲೆಯಲ್ಲಿ ಕಳೆದ ಸೆಪ್ಟೆಂಬರ್ 15ರಿಂದ ಅಕ್ಟೋಬರ್ 15ರ ನಡುವೆ ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ, ಉದ್ಯೋಗಸ್ಥ ಮಹಿಳೆಯರ ಹಾಗೂ ಬಾಲಕಿಯರ ಹಾಸ್ಟೆಲ್ ಸ್ಥಿತಿಗಳನ್ನರಿಯಲು ಸರ್ವೆ ಕಾರ್ಯವನ್ನು ಕೈಗೊಂಡಿತ್ತು. ಮೋರ್ಚಾ ಪದಾಧಿಕಾರಿಗಳು, ಕಾರ್ಯಕರ್ತೆಯರು ಈ ಕಾರ್ಯಕ್ರಮದಲ್ಲಿ ತಮ್ಮನ್ನು ಜೋಡಿಸಿಕೊಂಡಿದ್ದರು. ರಾಜ್ಯದ ವಿವಿಧ ಭಾಗಗಳಲ್ಲಿ 850 ಹಾಸ್ಟೆಲ್‌ಗಳನ್ನು ಭೇಟಿ ನೀಡಿ ಸಮೀಕ್ಷೆ ನಡೆಸಿದ ತಂಡಗಳು, ಅಲ್ಲಿಯ ಸ್ಥಿತಿಗತಿಗಳ ಬಗ್ಗೆ ವ್ಯಾಪಕ ವರದಿ ತಯಾರಿಸಿದೆ.

**ಅನುವರ್ತೀಕಾರ್ಯ:** ವಸತಿ ನಿಲಯಗಳ ಸಮೀಕ್ಷೆಯಲ್ಲಿ ಗುರುತಿಸಿರುವ ಸಮಸ್ಯೆಗಳ ಪರಿಹಾರಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಒಂದು ಸಭೆ ಮಾಡಿ, ಚರ್ಚಿಸಿ ಸೂಕ್ತ ಪರಿಹಾರ ಕಲ್ಪಿಸುವಂತೆ ರಾಜ್ಯ ಮಹಿಳಾ ಮೋರ್ಚಾಕ್ಕೆ ರಾಜ್ಯ ಅಧ್ಯಕ್ಷ ಶ್ರೀ ಕೆ.ಎಸ್. ಈಶ್ವರಪ್ಪ ಸಲಹೆ ಮಾಡಿದ್ದಾರೆ.

ಅಕ್ಟೋಬರ್ 20 ರಿಂದ 26ರ ನಡುವೆ ರಾಜ್ಯ ಮಹಿಳಾ ಮೋರ್ಚಾ ವಿಭಾಗೀಯ ಮಟ್ಟದ ಸಭೆಗಳು ನಡೆದಿವೆ. ಈ ಸಭೆಗಳಲ್ಲೂ ಹಾಸ್ಟೆಲ್ ಸಮೀಕ್ಷೆಗಳ ವಿಷಯ ಪ್ರಸ್ತಾಪವಾಗಿದ್ದು ಶೀಘ್ರವೇ ಅನುವರ್ತೀಕಾರ್ಯದ ಬಗ್ಗೆ ತೀರ್ಮಾನ ಕೈಗೊಳ್ಳಲಾಗುತ್ತಿದೆ. ●

## ಭಾಗ್ಯಲಕ್ಷ್ಮಿಯರ ಸಮಾವೇಶ

ಹೆಣ್ಣು ಮಕ್ಕಳ ಆರೋಗ್ಯ, ಶಿಕ್ಷಣ ಹಾಗೂ ಸರ್ವಾಂಗೀಣ ಅಭಿವೃದ್ಧಿಗಾಗಿ ರೂಪುಗೊಂಡಿರುವ ಭಾಗ್ಯಲಕ್ಷ್ಮಿ ಕಲ್ಯಾಣ ಯೋಜನೆ ಫಲಾನುಭವಿಗಳ ಸಮಾವೇಶ ಪ್ರತಿ ವರ್ಷ ಆಯೋಜಿಸುವುದನ್ನು ಕಡ್ಡಾಯಗೊಳಿಸಿ ಶೀಘ್ರ ಕಾನೂನು ಜಾರಿಗೆ ತರಲಾಗುವುದು ಎಂದು ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ಘೋಷಿಸಿದ್ದಾರೆ.

ಶಿವಮೊಗ್ಗ ನಗರದ ನೆಹರೂ ಕ್ರೀಡಾಂಗಣದಲ್ಲಿ ಶಿವಮೊಗ್ಗ ಜಿಲ್ಲೆಯ ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿಗಳ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿ ವರ್ಷ ಸಮಾವೇಶ ನಡೆಯಬೇಕು. ತಾವು ಅಧಿಕಾರದಲ್ಲಿ ಇಲ್ಲದಿದ್ದರೂ ಸಮಾವೇಶ ಆಯೋಜಿಸುವ, ಫಲಾನುಭವಿಗಳ ತಾಯಂದಿರಿಗೆ ಸೀರೆ ವಿತರಿಸುವ ಹಾಗೂ ಮಕ್ಕಳ ಆರೋಗ್ಯ ತಪಾಸಣೆ ನಡೆಸುವ ಕುರಿತು ಶಾಸನ ರೂಪಿಸುವುದಾಗಿ ಹೇಳಿದರು.

ಮುಂದೆ ಯಾರೇ ಮುಖ್ಯಮಂತ್ರಿಯಾಗಲಿ, ಸಮಾವೇಶ ಮಾಡುವುದನ್ನು ನಿಲ್ಲಿಸಬಾರದು. ಹಾಗೇನಾದರೂ ನಿಲ್ಲಿಸಿದರೆ ಫಲಾನುಭವಿಗಳ ಪರವಾಗಿ ರಸ್ತೆಗಿಳಿದು ಹೋರಾಟ ನಡೆಸುವುದಾಗಿ ಅವರು ಹೇಳಿದರು.

**ತವರಿನ ಉಡುಗೊರೆ:**

ಬಡತನದ ಹಿನ್ನೆಲೆಯಲ್ಲಿ ಹೆಣ್ಣುಮಕ್ಕಳು ಶಿಕ್ಷಣ, ಇನ್ನಿತರೆ ಸೌಲಭ್ಯದಿಂದ ವಂಚಿತರಾಗಬಾರದು ಎಂಬ ಹಿನ್ನೆಲೆಯಲ್ಲಿ ಈ ಯೋಜನೆ ಜಾರಿಗೆ ತರಲಾಗಿದೆ.

ಪ್ರತಿ ವರ್ಷ ಅಕ್ಟೋಬರ್-ನವೆಂಬರ್ ತಿಂಗಳಲ್ಲಿ ಸಮಾವೇಶ ನಡೆಸಿ, ಫಲಾನುಭವಿ ಮಕ್ಕಳಿಗೆ ತಾಯಂದಿರಿಗೆ ಉಚಿತ ಆರೋಗ್ಯ ತಪಾಸಣೆ ನಡೆಸಲಾಗುವುದು ಎಂದು ಅವರು ನುಡಿದರು.

ಈ ತಿಂಗಳು ತುಮಕೂರು, ಕೋಲಾರ, ಗದಗ, ಹಾಸನ, ಬೆಳಗಾವಿ, ಚಾಮರಾಜನಗರ, ರಾಯಚೂರು, ಬಿಜಾಪುರ, ಚಿಕ್ಕೋಡಿ, ಮಂಡ್ಯ, ಉತ್ತರಕನ್ನಡ ಜಿಲ್ಲೆಗಳಲ್ಲಿ ಭಾಗ್ಯಲಕ್ಷ್ಮಿ ಯೋಜನೆ ಫಲಾನುಭವಿಗಳಿಗೆ ವಿತರಣಾ ಕಾರ್ಯಕ್ರಮ ಏರ್ಪಾಡಾಗಿದೆ. ●

## ಬಿಜೆಪಿ ಶಾಸಕಾಂಗ ಪಕ್ಷದ ಸಭೆ

11 ಮಂದಿ ಅನರ್ಹ ಶಾಸಕರ ಕುರಿತು ಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಅಕ್ಟೋಬರ್ 29ರಂದು ಸಮಾವೇಶಗೊಂಡಿದ್ದ ಬಿಜೆಪಿ ಶಾಸಕಾಂಗ ಸಭೆ ಸಂಭ್ರಮವನ್ನಾಚರಿಸಿತು. ಪಕ್ಷದ ಭಿನ್ನಮತೀಯ ಶಾಸಕರನ್ನು ಮುಂದಿಟ್ಟುಕೊಂಡು ಸರ್ಕಾರವನ್ನು ಅಸ್ಥಿರಗೊಳಿಸಲು ಯತ್ನಿಸಿದ ಜೆಡಿಎಸ್ ಮತ್ತು ಕಾಂಗ್ರೆಸ್ ವಿರುದ್ಧ ಹರಿಹಾಯ್ದ ನಾಯಕರು 11 ಕ್ಷೇತ್ರಗಳ ಉಪಚುನಾವಣೆ ಮತ್ತು ಮುಂಬರುವ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಚುನಾವಣೆಗಳ ಕುರಿತು ಸಮಾಲೋಚಿಸಿದರು.

ಸಭೆಯಲ್ಲಿ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪ, ಪಕ್ಷದ ರಾಷ್ಟ್ರೀಯ ನಾಯಕ ಶ್ರೀ ವೆಂಕಯ್ಯನಾಯ್ಡು, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶ್ರೀ ಅನಂತ್‌ಕುಮಾರ್, ಸಚಿವರು, ಶಾಸಕರು, ಸಂಸದರು ಪಾಲ್ಗೊಂಡಿದ್ದರು. ಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಸಂಭ್ರಮದ ವಾತಾವರಣವಿತ್ತು. ವೇದಿಕೆ ಮೇಲಿದ್ದ ನಾಯಕರು ಪರಸ್ಪರ ಸಿಹಿ ತಿನ್ನಿಸಿ ಹರ್ಷ ಹಂಚಿಕೊಂಡರು. ಹೊರಭಾಗದಲ್ಲಿ ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಶ್ರೀ ವೆಂಕಯ್ಯನಾಯ್ಡು ಮಾತನಾಡಿ, ನ್ಯಾಯಾಲಯದ ತೀರ್ಪಿನಿಂದ ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷಗಳಿಗೆ ಮುಖಭಂಗವಾಗಿದೆ. ಅಸಂವಿಧಾನಿಕ ಮಾರ್ಗಗಳ ಮೂಲಕ ಸರ್ಕಾರ ಕೆಡವಲು ಸಾಧ್ಯವಿಲ್ಲ ಎನ್ನುವ ಅರಿವಾಗಿದೆ. ಇದು ಪ್ರಜಾಪ್ರಭುತ್ವವಾದಿಗಳಿಗೆ ಲಭಿಸಿದ ಜಯವಾಗಿದ್ದು, ಪಕ್ಷ ಸಹ ಅನೇಕ ಪಾಠಗಳನ್ನು ಇದರಿಂದ ಕಲಿಯಬೇಕು ಎಂದರು.

ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪ ಮಾತನಾಡಿ, ಕೆಲವು ದಿನಗಳಿಂದ ಉಂಟಾಗಿದ್ದ ರಾಜಕೀಯ ಅಸ್ಥಿರತೆ ನಿವಾರಣೆಯಾಗಿದ್ದು, ಮುಂದಿನ ಎರಡೂ ವರ್ಷಗಳ ಕಾಲ ಅಭಿವೃದ್ಧಿ ಕಾರ್ಯಗಳಿಗೆ ಗಮನ ನೀಡಬೇಕು. ಮುಂಬರುವ ಜಿಲ್ಲಾ ಮತ್ತು ತಾ.ಪಂ. ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಶಾಸಕರು, ಕಾರ್ಯಕರ್ತರು ಕಾರ್ಯತಂತ್ರ ರೂಪಿಸಬೇಕು ಎಂದರು. ●

## ದೇಶದ್ರೋಹಕ್ಕೆ ಉತ್ತೇಜನ–ಬಿಜೆಪಿ ತೀವ್ರ ಆಕ್ರೋಶ

ರಾಜಧಾನಿಯಲ್ಲಿ ನಡೆದ ವಿಚಾರ ಸಂಕಿರಣವೊಂದರಲ್ಲಿ ಮಂಡಿಸಲಾದ ಕಾಶ್ಮೀರ ಬೇರ್ಪಡೆ ಬೇಡಿಕೆಗೆ ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿರುವ ಬಿಜೆಪಿ, ವಾಕ್ ಸ್ವಾತಂತ್ರ್ಯದ ಹೆಸರಿನಲ್ಲಿ ಅಸ್ವೀಕಾರಾರ್ಹ ಅಭಿಪ್ರಾಯಗಳನ್ನು ಬಿತ್ತರಿಸಲಾಗುತ್ತಿದೆ ಯಾದರೂ, ಸರ್ಕಾರವು ಆ ಬಗ್ಗೆ ಗಮನಹರಿಸುತ್ತಿಲ್ಲ ಎಂದು ಆರೋಪಿಸಿದೆ.

ಸುದ್ದಿ ಸಂಸ್ಥೆಯೊಂದಿಗೆ ಮಾತನಾಡಿದ ರಾಜ್ಯಸಭೆ ಪ್ರತಿಪಕ್ಷ ನಾಯಕ ಶ್ರೀ ಅರುಣ್ ಜೇಟ್ಲಿಯವರು, ದಿಲ್ಲಿಯಲ್ಲಿ ಸರ್ಕಾರದ ಮೂಗಿನಡಿಯೇ ಪ್ರತ್ಯೇಕತಾವಾದಿಗಳ ಗುಂಪೊಂದು ದೇಶದ್ರೋಹವನ್ನು ಉತ್ತೇಜಿಸುವ ವಿಚಾರ ಸಂಕಿರಣವನ್ನು ನಡೆಸಲು ಸೇರಿದ್ದು, ಇಡೀ ದೇಶವನ್ನೇ ದಿಗ್ಭ್ರಾಂತಗೊಳಿಸಿದೆ. ಪ್ರಜಾಪ್ರಭುತ್ವದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿನ ನೆಪದಲ್ಲಿ ಪ್ರತ್ಯೇಕತೆಯ ಹಕ್ಕನ್ನು ಒಪ್ಪಿಕೊಳ್ಳಲಾಗದು ಎಂದು ನುಡಿದರು.

ಸಂವಿಧಾನದತ್ತವಾಗಿರುವ ವಾಕ್ ಸ್ವಾತಂತ್ರ್ಯದ ಹಕ್ಕನ್ನು ದೇಶದ ವಿರುದ್ಧ ಬಳಸುವಂತಿಲ್ಲ ಎಂದು ಅವರು ಹೇಳಿದರು. ಯಾವುದೇ ಮುನ್ನೆಚ್ಚರಿಕೆ ಕ್ರಮವನ್ನು ಕೈಗೊಳ್ಳದ್ದಕ್ಕಾಗಿ ಮತ್ತು ತಪ್ಪಿತಸ್ಥರನ್ನು ದಂಡಿಸದ್ದಕ್ಕಾಗಿ ಸರ್ಕಾರವನ್ನು ಟೀಕಿಸಿದ ಅವರು, ಸರಕಾರವು ತನ್ನ ಹೊಣೆಗಾರಿಕೆಯನ್ನು ಕಡೆಗಣಿಸಿದೆ ಎಂದು ದೂರಿದರು.

ಸ್ವಾತಂತ್ರ್ಯ–ಏಕಮೇವ ಮಾರ್ಗ ಎಂಬ ವಿಚಾರ ಸಂಕಿರಣದಲ್ಲಿ ಕಾಶ್ಮೀರದ ಸ್ವಾತಂತ್ರ್ಯಕ್ಕಾಗಿ ಆಗ್ರಹಿಸಲು ಕಟ್ಟರ್ ಹುರಿಯತ್ ನಾಯಕ ಶ್ರೀ ಸೈಯದ್ ಆಲಿ ಶಾ ಗಿಲಾನಿ, ಕಾಶ್ಮೀರ ಪ್ರತ್ಯೇಕತಾವಾದಿಗಳು, ನಕ್ಸಲ್ ಹಾಗೂ ಖಲಿಸ್ಥಾನ್ ಬೆಂಬಲಿಗರು ಒಂದೇ ವೇದಿಕೆಯಲ್ಲಿ ಸೇರಿದ್ದರು. ●